MADAM SPEAKER:—Papers are laid.

Sri AZEEZ SAIT (Minister for Labour, Transport Tourism and Wakfs) : On behalf of the Finance Minister, I beg to lay:

"The Finance Accounts, 1969-70, the Appropriation Accounts 1969-70 and Audit Report (Civil and Commercial) for the year 1969-70 of the Government of Mysore as required by Article 151 (2) of the Constitution of India"

MADAM SPEAKER.—The Papers are laid. Now discussion on Budget to continue.

BUDGET ESTIMATES

(I) Demands for Grants for 1972—73 (Vote on Account)

(ii) Supplementary and Additional Demands for Grants for 1971-72.—*Debate Continued*

†ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಸನ್ಮಾನ್ಯ ಅಧ್ಯಕ್ಷರೇ, 1972-73ನೆಯ ವರ್ಷದ ತಾತ್ಕಾಲಿಕ ಅಂದಾಜಿನ ಪಟ್ಟಿಯನ್ನು ಈ ಸಭೆಯ ಪರಿಶೀಲನೆಗೆ ತೆಗೆದುಕೊಳ್ಳತಕ್ಕ ಸಮಯದಲ್ಲಿ ಹಣಕಾಸಿನ ಮಂತ್ರಿಗಳು ಮಾಡಿರತಕ್ಕ ಗಂಭೀರವಾದ ಭಾಷಣದ ಅವರ ಭಾಷೆ ಏನಿದೆ ಅದನ್ನು ನೋಡಿದರೆ ನಾವು ಭಾರತದಲ್ಲಿ ಬದುಕತಕ್ಕ ಒಂದು ಸನ್ನಿವೇಶವೇ ಇಲ್ಲ. ಕಾರಣವಾದರೂ ಇಷ್ಟೇ, ಅವರ ಭಾಷಣದಲ್ಲಿ ಬಹುಶಃ ಎಲ್ಲ ರಾಜ್ಯಗಳಲ್ಲೂ ಏಕ ಪಕ್ಷೀಯವಾದ ಸರಕಾರವೇ ಸಂಪೂರ್ಣವಾಗಿರುವುದು ಒಳ್ಳೆಯದು ಎಂದು, ನಮ್ಮ ಮಂತ್ರಿಗಳೂ ಕೂಡ ಏಕ ಪಕ್ಷದ ಪ್ರಭುತ್ವ ನೆಲಸಬೇಕು ಎಂದು ಪ್ರಾರಂಭದಲ್ಲೇ ಮಾತನಾಡಿದ್ದಾರೆ, ತಮ್ಮ ಮುಖೇನ ಈ ಸಭೆಗೆ ಒಂದು ಅಂಶ ತಿಳಿಸಬೇಕಾಗಿದೆ, ಭಾರತದ ಸಂವಿಧಾನದಲ್ಲಿ ಬಹುಶಃ ಈ ರೀತಿ ಹೇಳಿಲ್ಲ. ನಮ್ಮದು ಫೆಡರಲ್ ಸ್ವರೂಪ ಎಂಬುದಾಗಿ ಇಟ್ಟುಕೊಂಡು ಇರುವುದರಿಂದ ಈ ರೀತಿ ಈಗ ಹೇಳಿದರೆ ಇದು ಸಂವಿಧಾನಕ್ಕೆ ಅಪಚಾರವೆಸಗಿದಂತಾಗುವುದಿಲ್ಲವೇ ? ಇದರ ಮೇಲೆ ಎಲ್ಲ ರಾಜ್ಯಗಳಲ್ಲೂ ಹಾಲಿ ಇರತಕ್ಕ ಕೇಂದ್ರ ಸರಕಾರದಂತೆ ಇರುವ ಪಕ್ಷವೇ ರಾಜ್ಯಗಳಲ್ಲೂ ಇದ್ದರೆ ದೇಶದ ಒಂದು ಆರ್ಥಿಕ ನುವ್ಯಸ್ಥೆಗೆ ಸಹಾಯವಾಗುತ್ತದೆ ಎಂದು ತಿಳಿಸಿದರು. ಇದರ ಬಗ್ಗೆ ನಾನು ಅವರನ್ನು ಪ್ರಶ್ನೆ ಮಾಡಬೇಕಾಗಿದೆ. ಬಹುಶಃ ಇಂದು ಇರುವ ಅಡಳಿತ ಪಕ್ಷದ ಸರಕಾರ ಇಲ್ಲದೇ ಇದ್ದರೆ ಆರ್ಥಿಕ ನುವ್ಯವಸ್ಥೆ ಸಾಧ್ಯವಾಗುತ್ತಿರಲಿಲ್ಲವೇ ? ನಮ್ಮ ಆರ್ಥಿಕ ಮಂತ್ರಿಗಳು ಪ್ರಮಾಣ ವಚನ ಸ್ವೀಕಾರ ಮಾಡಿದ ಕಾಲದಲ್ಲಿ ಸಂವಿಧಾನದ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿದ್ದಾರೆ. ಬಹುಶಃ ಇದರ ಹಿನ್ನೆಲೆ ಆಗ ಇರಲಿಲ್ಲವೇ ? ಮತ್ತು ಸಂವಿಧಾನಕ್ಕೆ ಅಪಚಾರ ಮಾಡಿದ ಧಾಟಿಯಲ್ಲಿ ಇಂದು ಅವರು ಮಾಡಿರುವ ಭಾಷಣದಲ್ಲಿ ಕಂಡುಬರುತ್ತದೆ. ಇಲ್ಲಿರುವ ಪ್ಯಾರಾ ಎರಡನ್ನು ನಾವು ಓದಿದರೆ ಅದು ಗೊತ್ತಾಗುತದೆ. ನಾನು ಅದನ್ನು ಪುನಃ ಇಲ್ಲಿ ಮತ್ತೆ ಓದುವ ಗೋಜಿಗೆ ಹೋಗುವುದಿಲ್ಲ. ಬಹುಶಃ ಅಡಳಿತದಲ್ಲಿ ಕೇಂದ್ರ ಸರಕಾರದ ಜೋ ಹುಕುಂ ಸರಕಾರ ರಾಜ್ಯಗಳಲ್ಲೂ ಇರಬೇಕೆಂದು ಅಪೇಕ್ಷಿಸಿದ್ದಾರೆ. ಅದನ್ನು ಪ್ರಧಾನ ಮಂತ್ರಿಗಳೂ ಚುನಾವಣಾ ಕಾಲದಲ್ಲಿ ಅಲ್ಲಲ್ಲಿ ಹೇಳಿದ್ದಾರೆ. A stable and strong Government is necessary to implement all our radical programmes. ಎಂದು ಅವರು ಹೇಳಿದಂತೆ ಎಲ್ಲ ರಾಜ್ಯಗಳಲ್ಲೂ ಏಕ ಪಕ್ಷದ ಅಧಿಕಾರ ಇಲ್ಲದೇ ಇದ್ದರೆ ಅದರ ಕಡೆಗೆ ಅಸಕ್ತ ಇರುವುದಿಲ್ಲವೇ ? ಇದೇನು ಒಂದೇ ಪಕ್ಷದ ಗುತ್ತಿಗೆಯೇ ಎಂದು ಕೇಳಬೇಕಾಗಿದೆ. ಇನ್ನು ನಾನು ಇದರ ಬಗ್ಗೆ ಹೆಚ್ಚು ಮುಂದುವರಿಸುವುದಕ್ಕೆ ಹೋಗುವುದಿಲ್ಲ.

† Indicates that the remarks or speeches have not been revised by the member concerned.

ಅವರೇ ಎರಡನೇ ಪ್ಯಾರಾದಲ್ಲಿ ಒಂದು ಮಾತು ಈ ರೀತಿ ಹೇಳಿದ್ದಾರೆ.—

> ಇಂದಿನ ಪರಿಸ್ಥಿತಿ ಕಷ್ಟಕರವಾಗಿರಬಹುದು, ಅಶಾಜನಕವಲ್ಲದೆಯೂ ಇರಬಹುದು, ಆದರೆ, ಪರಿಸ್ಥಿತಿ ಏನೇ ಇದ್ದರೂ, ಅದನ್ನು, ಹತೋಟಿಯಲ್ಲಿಟ್ಟುಕೊಂಡು ಹೆಜ್ಜೆ ಹೆಜ್ಜೆಗೆ ಬದಲಾಯಿಸಬಹುದಾಗಿದೆ. ಈ ಕೆಲಸವನ್ನು ನಿರ್ಭೀತಿಯಿಂದ ನಿರ್ವಹಿಸಿ ಮೈಸೂರು ರಾಜ್ಯಕ್ಕೆ ಉಜ್ವಲ ಭವಿಷ್ಯವನ್ನು ರೂಪಿಸಲು ಸರ್ಕಾರದವರು ಬದ್ಧಕಂಕಣರಾಗಿದ್ದಾರೆ.

ಆರ್ಥಿಕ ಸಾಹಾರ್ದತೆ ಮೂಡಿಸಲು ಇಂತಹ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ, ಎಂದು ಅವರು ಹೇಳಿದ್ದಾರೆ. ಇನ್ನೊಂದು ವಿಚಾರವನ್ನು ಇಲ್ಲಿ ತಮ್ಮ ಮುಖೇನ ಹೇಳಬೇಕಾಗಿದೆ. ಈಗಿರುವ ಆಡಳಿತ ಪಕ್ಷವೇ ಅಧಿಕಾರದಲ್ಲಿರಬೇಕು ಬೇರೆ ಯಾವ ಪಕ್ಷವೂ ಅಧಿಕಾರಕ್ಕೆ ಬರುವುದಕ್ಕೆ ಆಗುವುದಿಲ್ಲ ಎಂದು ಹೇಳುವುದಕ್ಕೆ ಆಗುವುದಿಲ್ಲ, ಪ್ಯಾರಾ (9) ರಲ್ಲಿ ಅವರು ಹೇಳಿರುವಂತೆ ಪ್ಲಾನ್ಡ್ ಎಕ್ಸ್‌ಪೆಂಡಿಚರಿಗಾಗಿ 60 ಕೋಟಿ ರೂಪಾಯಿ ನಾನ್ ಪ್ಲಾನ್ಡ್ ಎಕ್ಸ್‌ಪೆಂಡಿಚರಿಗಾಗಿ 45 ಕೋಟಿ ರೂಪಾಯಿ ವಿಶೇಷವಾಗಿ ಸಹಾಯ ಬರುತ್ತದೆ ಎಂದು, ಇದನ್ನು ಪ್ಲಾನಿಂಗ್ ಕಮಿಷನ್ ಜೊತೆಯಲ್ಲಿ ಚರ್ಚೆ ಮಾಡಿ ಪ್ಲಾನಿಂಗ್ ಕಮಿಷನ್‌ನವರ ಆಶ್ವಾಸನೆಯನ್ನು ಪಡೆಯುವುದಕ್ಕೆ ಆಗುತ್ತಿರಲಿಲ್ಲವೇ? ಇದೇ ಸ್ಪೀಚಿನಲ್ಲಿ ನಮ್ಮ ರಾಜ್ಯದಲ್ಲಿ ಇಂತಹ ನ್ಯೂನತೆಗಳಿವೆ ಹಣಕಾಸಿನ ಹೊರೆಯನ್ನು ಕಡಿಮೆ ಮಾಡಲು ಓವರು ಡ್ರಾಫ್ಟ್ ತೀರಿಸಲು ಸಾಧ್ಯವಾಗುವುದಿಲ್ಲ ಎಂದು ಆಗ ಇದ್ದ ಗವರ್ನರ್‌ರವರಾದ ಶ್ರೀ ಧರ್ಮವೀರರವರು ನಮ್ಮ ರಾಜ್ಯದ ಪರಿಸ್ಥಿತಿಯನ್ನು ಕೇಂದ್ರ ಸರಕಾರಕ್ಕೆ ವಿವರಣೆ ಕೊಟ್ಟಾಗ ಯಾವ ರೀತಿಯಾಯಿತು ಎನ್ನುವುದು ಎಲ್ಲರಿಗೂ ಗೊತ್ತಿದೆ ಇದೂ ಅಲ್ಲದೆ ನಿಮ್ಮ ಬೆಂಬಲವನ್ನೇ ಪಡೆದು ಈ ರಾಜ್ಯದಿಂದ ಸುಮಾರು 27 ಜನ ಸದಸ್ಯರನ್ನು ಲೋಕಸಭೆಗೆ ಚುನಾವಣೆ ಮಾಡಿ ಕಳುಹಿಸಿದ್ದೀರಿ, ಬಹುಶಃ ತಮ್ಮ ಪಕ್ಷಕ್ಕೆ ಸೇರಿದವರಾಗಿ ಅವರು ಅಲ್ಲಿ ಇದ್ದರೂ ಇದುವರೆಗೂ ಏನೂ ಮಾಡಲಿಲ್ಲ. ಇಲ್ಲಿಂದ 27 ಜನ ಸದಸ್ಯರನ್ನು ನಿಮ್ಮ ಪಕ್ಷವಿಂದಲೇ ಲೋಕಸಭೆಗೆ ಕಳುಹಿಸಿದ್ದೀರಿ. ಆಡಳಿತ ಪಕ್ಷದವರೇ ಆಗಿರುವ 27 ಸದಸ್ಯರು ಲೋಕಸಭೆಯಲ್ಲಿದ್ದರೂ ಇದುವರೆಗೆ ರಾಜ್ಯಕ್ಕೆ ಅನ್ಯಾಯವಾಗಿದೆ, ಖಂಡಿತವಾಗಿ ಸಹಾಯ ಕೊಡಬೇಕು ಎಂದು ಕೇಂದ್ರವನ್ನು ಒತ್ತಾಯಮಾಡಿ ಜನತೆಯ ಹಿತಕ್ಕಾಗಿ ಸಹಾಯ ಮಾಡಲು ಕೇಂದ್ರವನ್ನು ಒತ್ತಾಯಿಸಿ ಮಾಡುವುದರ ಬಗ್ಗೆ ಒಟ್ಟು ಸದಸ್ಯರೂ ಇದುವರೆಗೂ ಒಂದು ಚಕಾರ ಶಬ್ದವನ್ನಾದರೂ ಅಲ್ಲಿ ಎತ್ತಿದ್ದಾರೆಯೇ, ಎಂದು ನಾನು ಕೇಳುತ್ತೇನೆ.

ನಾನು ಇಂದು ಬಹಳ ನೊಂದ ಮನಸ್ಸಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ಓವರ್ ಡ್ರಾಫ್ಟ್ ಬಗ್ಗೆ ಹಿಂದಿನ ರಾಜ್ಯಪಾಲರಾದ ಶ್ರೀ ಧರ್ಮವೀರರು ಹೇಳಿದ ಮಾತನ್ನು ಈಗಿನ ಸರ್ಕಾರದ ಯಾವ ಒಬ್ಬ ಹಿರಿಯ ಸದಸ್ಯರೂ ಕೂಡ ಅನುಮೋದಿಸಲಿಲ್ಲ. ಶ್ರೀ ಧರ್ಮವೀರರ ಬಗ್ಗೆ ಹಗೆತನ ನಿಮಗೆ ಇದ್ದರೆ ಅದು ಬೇರೆ ಮಾತು. ಆದರೆ ರಾಜ್ಯದ ಹಿತಕ್ಕೆ ಧಕ್ಕೆ ತರುವ ವಿಚಾರದಲ್ಲಿ ಶ್ರೀ ಧರ್ಮವೀರರು ಏನು ಒಂದು ಹೇಳಿಕೆ ಕೊಟ್ಟರು, ಅದಕ್ಕೆ ನೀವು ಬೆಂಬಲ ಕೊಡಬೇಕಾಗಿತ್ತು. ಮಾನ್ಯ ಆರ್ಥಿಕ ಮಂತ್ರಿಯವರು ತಮ್ಮ ಭಾಷಣದಲ್ಲಿ ಕೇಂದ್ರದಿಂದ ರಾಜ್ಯಕ್ಕೆ ಬರಬೇಕಾಗಿರುವ ಹಣವನ್ನು ಪಡೆಯುವ ಬಗ್ಗೆ ನಿರ್ಭೀತಿಯಿಂದ ವರ್ತಿಸುತ್ತೇವೆಂದು ಹೇಳಿದ್ದಾರೆ. ಆ ರೀತಿ ವರ್ತಿಸುವುದಕ್ಕೆ ನಮಗೆ ನೈತಿಕ ಹಕ್ಕು ಹಾಗೂ ಶಕ್ತಿ ಇದೆಯೇ, ಎಂದು ನಾನು ಮಾನ್ಯ ಆರ್ಥಿಕ ಮಂತ್ರಿಗಳನ್ನು ಕೇಳುತ್ತೇನೆ. ತಮ್ಮ ಭಾಷಣದಲ್ಲಿ ಜೊಳ್ಳು ಭರವಸೆಯನ್ನು ಕೊಟ್ಟಿದ್ದಾರೆ. ಅದನ್ನು ನಾನೂ ಟೀಕಿಸಬೇಕಾಗುತ್ತದೆ. ರಾಜ್ಯಕ್ಕೆ ಬರಬೇಕಾದ ಪಾಲನ್ನು ಕೇಂದ್ರದಿಂದ ಪಡೆದುಕೊಳ್ಳಬೇಕಾದರೆ ಮತ್ತು ಈಗಿರುವ 'ಓವರ್‌ಡ್ರಾಫ್ಟ್' ಸಮಸ್ಯೆಯನ್ನು ಬಗೆಹರಿಸಬೇಕಾದರೆ ಕೇಂದ್ರದಲ್ಲಿ ಮತ್ತು ರಾಜ್ಯಗಳಲ್ಲಿ ಏಕಪಕ್ಷೀಯ ಸರ್ಕಾರ ಇದ್ದರೆ ಮಾತ್ರ ಸಾಧ್ಯ ಎಂಬ ಈಗಿನ ಸರ್ಕಾರದ ವಾದ ಏನಿದೆ ಅದರಲ್ಲಿ ತಿರುಳಿಲ್ಲ, ಹುರುಳಿಲ್ಲವೆಂದು ಹೇಳುತ್ತೇನೆ. ಇಷ್ಟೊತ್ತು ನಮ್ಮ ರಾಜ್ಯದ ಆಯವ್ಯಯ ಪತ್ರವನ್ನು ನಮ್ಮ ಮುಂದೆ ಸೂಕ್ಷ್ಮವಾಗಿ ಇಲ್ಲಿ ಮಂಡಿಸಿದ್ದಾರೆ. 1971 ರಲ್ಲಿ ಈ ಸಭೆಯಲ್ಲಿ ಹಿಂದಿನ ಸರ್ಕಾರ ತನ್ನ ಆಯವ್ಯಯ ಪತ್ರವನ್ನು ಮಂಡಿಸಿದಾಗ, ಇದೇ ಸರ್ಕಾರದ ಕೆಲವು ಸದಸ್ಯರುಗಳು ಆ ಆಯವ್ಯಯ ಪತ್ರವನ್ನು ಪ್ರತಿಗಾಮಿ ಸರ್ಕಾರ ಮಂಡಿಸಿರುವ ಆಯವ್ಯಯವೆಂದು ಟೀಕಿಸಿದ್ದರು. ಈಗ ಮಂಡಿಸಿರುವ ಆಯವ್ಯಯವು ಪ್ರಗತಿಗಾಮಿ ಸರ್ಕಾರ ಮಂಡಿಸಿರುವ ಆಯವ್ಯಯ ಪತ್ರವೇ ಎಂದು ನಾನು ಕೇಳುತ್ತೇನೆ. ಇಷ್ಟೊತ್ತು ಮಂತ್ರಿಗಳಾಗಿರತಕ್ಕ ಶ್ರೀ ಕೆ. ಎಚ್. ಪಾಟೀಲ್ ಅವರು ಕಳೆದ ವರ್ಷ ಮಂಡಿಸಿದ್ದ ಆಯವ್ಯಯ ಪತ್ರದ ಬಗ್ಗೆ ಟೀಕೆ ಮಾಡುತ್ತಾ, ಈ ಬಡ್ಜೆಟ್‌ನಿಂದ ಬಡವರಿಗೆ ಒಳ್ಳೆಯದಾಗುವುದಿಲ್ಲ, ಹರಿಜನರ ಉದ್ಧಾರವಾಗುವುದಿಲ್ಲ, ಚುನಾವಣೆಯಲ್ಲಿ ಸೋತಿರುವುದರಿಂದ ಆಯವ್ಯಯ ಪತ್ರವನ್ನು ಮಂಡಿಸುವುದಕ್ಕೆ ನೈತಿಕ ಹೊಣೆಗಾರಿಕೆ ಇಲ್ಲ ಎಂಬುದಾಗಿ ತಿಳಿಸಿದ್ದರು. ಹಿಂದಿನ ಸರ್ಕಾರ ಮಂಡಿಸಿದ್ದ ಆಯವ್ಯಯ ಪತ್ರವನ್ನೇ ಮತ್ತೆ

(ಶ್ರೀ ಎಚ್. ಡಿ. ದೇವೇಗೌಡ)

ಪಾರ್ಲಮೆಂಟ್ ಮುಂದೆ ಪಾಸ್ ಮಾಡಲು ಇಡಲಾಗಿತ್ತು. ಅಲ್ಲಿರುವ 27 ಜನ ಪಾರ್ಲಮೆಂಟ್ ಸದಸ್ಯರಲ್ಲಿ ಒಬ್ಬರೂ ಕೂಡ ಹಿಂದಿನ ಸರ್ಕಾರ ಮುಂಡಿಸಿದ್ದ ಆಯವ್ಯಯ ಪತ್ರದ ಬಗ್ಗೆ ತಮ್ಮ ಸಲಹೆಗಳನ್ನು ಕೊಟ್ಟಿಲ್ಲ. ಯಾವ ಬದಲಾವಣೆಯೂ ಸಹ ಇಲ್ಲದೆ, ಆ ಆಯವ್ಯಯ ಪತ್ರ ಪಾಸಾಯಿತು. ಅದು ಪ್ರತಿಗಾಮಿ ಸರ್ಕಾರ ಮುಂಡಿಸಿದ್ದ ಬಡ್ಜೆಟ್ ಆಗಿದ್ದರೆ ಅದನ್ನು ಏತಕ್ಕೆ ಬದಲಾವಣೆ ಮಾಡಲಿಲ್ಲವೆಂದು ನಾನು ಕೇಳುತ್ತೇನೆ. ಈ ಬಗ್ಗೆ ಪಾರ್ಲಮೆಂಟಿನ ಸದಸ್ಯರು ಯಾವ ರೂಪುರೇಖೆಗಳನ್ನು ಕೊಟ್ಟಿಲ್ಲ. ಆ ರೀತಿ ಏನಾದರು ಕೊಟ್ಟಿದ್ದರೆ ಅದನ್ನು ಮಾನ್ಯ ಆರ್ಥಿಕ ಮಂತ್ರಿಯವರು ತಮ್ಮ ಉತ್ತರದಲ್ಲಿ ತಿಳಿಸಬೇಕು. ಅಧಿಕಾರ ವಹಿಸಿಕೊಂಡು ಕೇವಲ ಎರಡು ದಿನಗಳು ಆಗಿರುವುದರಿಂದ ತಾತ್ಕಾಲಿಕ ಬಡ್ಜೆಟನ್ನು ಮುಂಡಿಸಲಾಗಿದೆ, ನಾಲ್ಕು ತಿಂಗಳ ನಂತರ ಪೂರ್ತಾ ಬಡ್ಜೆಟ್‌ನ್ನು ಮುಂಡಿಸುತ್ತೇವೆ, ಬಡವರಿಗೆ ಕೈಲಾಸ ತೋರಿಸತಕ್ಕಂಥ ಬಡ್ಜೆಟ್‌ನ್ನು ಮುಂಡಿಸುತ್ತೇವೆಂದು ಹೇಳಿದ್ದಾರೆ. ನಾವು ಅದನ್ನು ಕಾದು ನೋಡುತ್ತೇವೆ. ಮಾನ್ಯ ಆರ್ಥಿಕ ಮಂತ್ರಿಗಳು ಒಂದು ಅರ್ಥ ವಿವರಣೆಯನ್ನು ಕೊಡಬೇಕಾಗಿದೆ. ಅವರ ಭಾಷಣದ ಒಂದು ಕಡೆ ಈ ರೀತಿ ಹೇಳಿದ್ದಾರೆ :—

> "ಜುಲೈ, 1971ರಲ್ಲಿ ಪಾರ್ಲಮೆಂಟ್ 1971—72 ವರ್ಷಕ್ಕೆ ಅನುಮೋದಿಸಿದ ಆಯವ್ಯಯ ಪತ್ರದಲ್ಲಿ ಒಟ್ಟು 15·72 ಕೋಟಿ ರೂಪಾಯಿಯಷ್ಟು ಕೊರತೆಯನ್ನು ಅಂದಾಜು ಮಾಡಲಾಗಿತ್ತು. ಪರಿಷ್ಕೃತ ಅಂದಾಜಿನಲ್ಲಿ ಈಗ ಒಟ್ಟು 42.60 ಕೋಟಿ ರೂಪಾಯಿ ಕೊರತೆ ಕಂಡುಬರುವುದಾಗಿದೆ. ತೆರಿಗೆಯಿಂದಲೂ, ತೆರಿಗೆ ಹೊರತಾದ ಬೇರೆ ಮೂಲಗಳಿಂದಲೂ ನಿರೀಕ್ಷಿಸಿದ್ದ ವರಮಾನವು 10.27 ಕೋಟಿ ರೂಪಾಯಿಯಷ್ಟು ಕಡಿಮೆ ಬಿದ್ದು, ಕಾವೇರಿ ಯೋಜನೆ ಸಹಿತವಾದ ನೀರಾವರಿ ಯೋಜನೆ ಬಗೆಗಿನ ವೆಚ್ಚದಲ್ಲಿ 11 ಕೋಟಿ ರೂಪಾಯಿ ಹೆಚ್ಚಿದುದೇ ಈ ಕೊರತೆಯ ಹೆಚ್ಚಳಕ್ಕೆ ಮುಖ್ಯ ಕಾರಣ"

ಎಂಬುದಾಗಿ. 10.27 ಕೋಟಿ ರೂಪಾಯಿಯಷ್ಟು ಕೊರತೆಯಾಗಿರುವುದು ಯಾವ ಯಾವ ಬಾಬಿನಲ್ಲಿ ಎಷ್ಟೆಷ್ಟು ಎಂಬುದನ್ನು ಇಲ್ಲಿ ತಿಳಿಸಿಲ್ಲ. ಮತ್ತು ಏತಕ್ಕೆ ವಸೂಲಿಯಾಗದಿಲ್ಲ ಎಂಬುದನ್ನು ಸಹ ತಿಳಿಸಿಲ್ಲ. ಈ ರೀತಿ ವಸೂಲಿಯಾಗದೇ ಇರುವುದಕ್ಕೆ ಕಾರಣ ಹಿಂದೆ ಆದಳಿತ ನಡೆಸುತ್ತಿದ್ದ ಅಧಿಕಾರಿಗಳು ಕಾರಣರೇ, ಅಥವಾ ಹಿಂದಿನ ರಾಜ್ಯಪಾಲರು ಕಾರಣರೇ ಎಂಬುದನ್ನು ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ತಿಳಿಸಬೇಕು, ಮತ್ತು ಯಾವ ಯಾವ ಬಾಬುಗಳಲ್ಲಿ ಎಷ್ಟೆಷ್ಟು ಹಣವಸೂಲಿಯಾಗಿಲ್ಲ ಎಂಬುದನ್ನು ಸಹ ತಿಳಿಸಬೇಕು. ಸುಮಾರು ಹನ್ನೊಂದು ಕೋಟಿ ರೂಪಾಯಿಗಳಷ್ಟು ಹಣವನ್ನು ಕಾವೇರಿ ಬೇಸಿನ್ ಯೋಜನೆಗಳಿಗೆ ಯೋಜನೆಯ ಹೊರಗೆ ಖರ್ಚು ಮಾಡಿದ್ದರಿಂದ ಓವರ್‌ಡ್ರಾಫ್ಟ್ ಜಾಸ್ತಿಯಾಗಿದೆಯೆಂದು, ಇದೇ ಕಾರಣದಿಂದ ಕೊರತೆಯ ಆಯವ್ಯಯವಾಗಿದೆಯೆಂದು ತಿಳಿಸಿದ್ದಾರೆ. ಕಳೆದ ಸಾರಿ ದೊಡ್ಡ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗಾಗಿ ಸುಮಾರು 21 ಕೋಟಿ ರೂಪಾಯಿಗಳಷ್ಟು ಹಣವನ್ನು ಒದಗಿಸಲಾಗಿತ್ತು. ಈ ಸಾಲಿನ ಆಯವ್ಯಯ ಪತ್ರದಲ್ಲಿ ಯೋಜನೆಯ ಹೊರಗೆ 11 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆಯೆಂದು ಹೇಳಿರುವುದು ಸರಿಯಾದ ಕಾರಣವಲ್ಲವೆಂದು ನನ್ನ ಭಾವನೆಯಾಗಿದೆ. ಮತ್ತು ಈಗ ಆಗಿರತಕ್ಕಂಥ ಕೊರತೆಗೆ ಏನು ಅಂಕಿ ಅಂಶಗಳ ಮೂಲಕ ಕಾರಣ ಕೊಟ್ಟಿದ್ದಾರೆ. ಅದು ಕೂಡ ಸರಿಯಾದಂಥ ಕಾರಣವಲ್ಲವೆಂದು ಕಾಣುತ್ತದೆ. ರಾಜ್ಯದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿರುವ ಬಗ್ಗೆ ಏನು ಕಾರಣಕೊಟ್ಟಿದ್ದಾರೆ, ಅದು ಸಹ ಸರಿಯಾದ ಕಾರಣವಲ್ಲ. ಈಗತಾನೇ ಮಾನ್ಯ ಚೆನ್ನಬಸಪ್ಪನವರು ಸಭೆಗೆ ಬಂದಿದ್ದಾರೆ. ಅವರಿಗೆ ಲೋಕೋಪಯೋಗಿ ಇರಾಖೆಯ ಬಗ್ಗೆ ಬಹಳ ಅನುಭವವಿದೆ. ಕಾವೇರಿ ಬೇಸಿನ್‌ನಲ್ಲಿರುವ ಎರಡು ಯೋಜನೆಗಳನ್ನು ಕಾರ್ಯಗತ ಮಾಡುವ ಬಗ್ಗೆ ಕೇಂದ್ರದಿಂದ ಕ್ಲಿಯರೆನ್ಸ್ ತರುವುದಕ್ಕೆ ನಿಮಗೆ ಇನ್ನೂ ಸಾಧ್ಯವಾಗಿಲ್ಲ. ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿದ್ದಾಗ ಈ ಯೋಜನೆಗಳಿಗೆ ಕೇಂದ್ರದಿಂದ ಕ್ಲಿಯರೆನ್ಸ್ ತರುವುದಕ್ಕೆ ನಿಮ್ಮ ಕೈಯಲ್ಲಿ ಸಾಧ್ಯವಾಗಿಲ್ಲವೆಂಬ ಮಾತನ್ನು ತಾವೇ ಹೇಳುತ್ತಾ ಇದ್ದಿರಿ, ಮತ್ತು ಕೇಂದ್ರಸರ್ಕಾರದಲ್ಲಿ ನಿಮಗೆ ವಿಶ್ವಾಸವಿಲ್ಲವೆಂದು ಹೇಳುತ್ತಿದ್ದಿರಿ. ಕಳೆದ ಒಂದು ವರ್ಷದಿಂದ ವೀರೇಂದ್ರಪಾಟೀಲರ ಸರ್ಕಾರ ಇರಲಿಲ್ಲ. ತಮ್ಮ ಮೂಗಿನ ನೇರಕ್ಕೆ ನಡೆಯುವ ಸರ್ಕಾರವಿತ್ತು, ಮತ್ತು ಪಾರ್ಲಮೆಂಟಿನಲ್ಲಿ ಕೂಡ ನಿಮ್ಮವರೇ 27 ಜನ ಸದಸ್ಯರು ಇದ್ದರು. ಈ ರೀತಿ ಇದ್ದೂ ಕೂಡ ತಾವು ಏತಕ್ಕೆ ಕ್ಲಿಯರೆನ್ಸ್ ತೆಗೆದುಕೊಳ್ಳಲಿಲ್ಲವೆಂದು ಕೇಳುತ್ತೇನೆ. ಇದಕ್ಕೆ ಹೊಣೆಗಾರರು ಯಾರು ಎಂಬುದನ್ನು ನಾನು ಕೇಳಬೇಕಾಗುತ್ತದೆ. ತಮ್ಮ ಸರ್ಕಾರ ಅಧಿಕಾರಕ್ಕೆ ಬಂದು ಮೂರು ದಿವಸಗಳಾಗಿವೆ ಎಂದು ಹೇಳುವುದಾದರೆ, ನಿಮ್ಮ ಪಾರ್ಲಮೆಂಟ್ ಸದಸ್ಯರು ತಮ್ಮ ಕಾರ್ಯ ನಿರ್ವಹಣೆಯನ್ನು

ಮಾಡಿಲ್ಲ ಎಂದು ಹೇಳಬೇಕಾಗುತ್ತದೆ. ನಮ್ಮ ರಾಜ್ಯದ ಪಾರ್ಲಮೆಂಟ್ ಸದಸ್ಯರು ತಮ್ಮ ಕರ್ತವ್ಯವನ್ನು ಸರಿಯಾಗಿ ಮಾಡಿದ್ದರೆ ರಾಜ್ಯದ ಆರ್ಥಿಕ ಪರಿಸ್ಥಿತಿ ಇಷ್ಟೊಂದು ಕುಸಿದು ಬೀಳುತ್ತಿರಲಿಲ್ಲವೆಂದು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ರಾಜ್ಯದ ಆರ್ಥಿಕ ಪರಿಸ್ಥಿತಿ ಇಷ್ಟೊಂದು ಕುಸಿದು ಬೀಳುವುದಕ್ಕೆ ನಾನಾ ಕಾರಣಗಳು ಇವೆ. ಚುನಾವಣೆಯ ಕಾಲದಲ್ಲಿ ಪ್ರಧಾನಮಂತ್ರಿಗಳು ಒಂದು ಕಡೆ ಭಾಷಣ ಮಾಡುತ್ತಾ, ತಮ್ಮ ಪಕ್ಷವೇ ಅಧಿಕಾರಕ್ಕೆ ಬಂದರೆ ಮಾತ್ರ ಭೂಸುಧಾರಣೆಯನ್ನು ಜಾರಿಗೆ ತರುವುದಕ್ಕೆ ಸಾಧ್ಯವೆಂದು ಹೇಳಿದರು. ಹಿಂದಿನ ಸರ್ಕಾರ ಭೂಸುಧಾರಣೆಯನ್ನು ಜಾರಿಗೆ ತರುವ ಬಗ್ಗೆ ಯಾವ ರೀತಿ ಕೆಲಸ ಮಾಡಿಲ್ಲ ಎಂಬುದನ್ನು ಈಗಿನ ಮುಖ್ಯಮಂತ್ರಿಗಳು ಹೇಳಬೇಕು. ಹಿಂದಿನ ಸರ್ಕಾರ ಭೂಸುಧಾರಣೆಯ ಬಗ್ಗೆ ಸರಿಯಾಗಿ ಕೆಲಸ ಮಾಡಲಿಲ್ಲವೆಂಬ ಮಾತನ್ನು ಈಗಿನ ಸರ್ಕಾರದವರು ಹೇಳುವುದಾದರೆ ನಾನು ಈ ಸ್ಥಾನದಲ್ಲಿ ಇರುವುದಕ್ಕೆ ಇಚ್ಛೆಪಡುವುದಿಲ್ಲವೆಂದು ಹೇಳುತ್ತೇನೆ. ಭೂಸುಧಾರಣೆಯ ಬಗ್ಗೆ ಮಾಡುವಂತಹ ಕಾರ್ಯ ಇನ್ನು ಏನು ಉಳಿದಿದೆ ಎಂದು ನಾನು ಕೇಳುತ್ತೇನೆ.

ನಾನ್ ರೆಸ್ಯೂಮಬಲ್ ಲ್ಯಾಂಡ್ ಏನಿದೆ ಅದನ್ನು ಟೆನ್ಂಟ್‌ಗಳಿಗೆ ಕೊಟ್ಟು ಪಟ್ಟಾವನ್ನು ಅವರ ಹೆಸರಿಗೆ ಮಾಡಬೇಕಾಗಿದೆ, ಆದ್ದರಿಂದ ಸಣ್ಣ ಸಣ್ಣ ಭೂಮಾಲೀಕರುಗಳಿಗೆ ಪರಿಹಾರವನ್ನು ಒದಗಿಸಬೇಕಾಗಿದೆ ಎಂದು ನಮ್ಮ ರಾಜ್ಯ ಸರ್ಕಾರದವರು ಒಂದು ಯೋಜನೆಯನ್ನು ತಯಾರು ಮಾಡಿ ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟು ಅದಕ್ಕೆ 40 ಕೋಟಿ ರೂಪಾಯಿಗಳ ಧನ ಸಹಾಯ ಮಾಡಬೇಕೆಂದು ಕೇಂದ್ರ ಸರ್ಕಾರದವರನ್ನು ಕೇಳಿದಾಗ ಅದನ್ನು ರಾಜ್ಯ ಸರ್ಕಾರದ ಸಂಪನ್ಮೂಲಗಳಿಂದಲೇ ಒದಗಿಸಿಕೊಳ್ಳಬೇಕು, ಅದಕ್ಕೆ ಕೇಂದ್ರ ಸರ್ಕಾರದಿಂದ ಹಣವನ್ನು ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಪ್ರಧಾನ ಮಂತ್ರಿಗಳು ಅದನ್ನು ನಿರಾಕರಿಸಿದ್ದಾರೆ. ಸಣ್ಣ ಸಣ್ಣ ಗೇಣಿದಾರರು ಏನಿದ್ದಾರೆ ಅವರ ಹೆಸರಿಗೆ ಪಟ್ಟಾವನ್ನು ಮಾಡಿದ ಮೇಲೆ ಆ ಪಟ್ಟಾವನ್ನು ಪ್ಲೆಡ್ಜ್ ಮಾಡಿ ಷೆಡ್ಯೂಲ್ ಬ್ಯಾಂಕುಗಳಿಂದ ಹಣವನ್ನು ಪಡೆಯುವುದಕ್ಕೆ ಅವಕಾಶವನ್ನು ಕೇಳಿದಾಗ ರಿಜರ್ವ್ ಬ್ಯಾಂಕಿನವರು ಅದನ್ನು ರೆಫ್ಯೂಸ್ ಮಾಡಿದ್ದಾರೆ. ಇದಕ್ಕೆಲ್ಲಾ ಕೇಂದ್ರ ಸರ್ಕಾರವೇ ಹೊಣೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಭೂಸುಧಾರಣೆಯನ್ನು ಜಾರಿಗೆ ತರಬೇಕೆಂದು ಹಿಂದಿನ ಸರ್ಕಾರದವರೇ ಪ್ರಯತ್ನ ಮಾಡಿದ್ದರು ಎಂಬುದನ್ನು ಇವೊತ್ತಿನ ಆಡಳಿತ ಪಕ್ಷದವರು ಅರಿತುಕೊಳ್ಳಬೇಕು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ರೆಸ್ಯೂಮಬಲ್ ಲ್ಯಾಂಡ್ ಎಷ್ಟಿದೆ, ನಾನ್ ರೆಸ್ಯೂಮಬಲ್ ಲ್ಯಾಂಡ್ ಎಷ್ಟಿದೆ ಎನ್ನುವ ಬಗ್ಗೆ ತಮ್ಮಲ್ಲಿ ಕರಾರುವಾಕ್ ಆದ ಅಂಕಿಅಂಶಗಳಿಲ್ಲ. ಇದನ್ನು ಸರ್ಕಾರದವರು ಜರೂರಾಗಿ ಮಾಡಬೇಕಾಗುತ್ತದೆ. ಈ ಒಂದು ಅಂಕಿ ಅಂಶಗಳನ್ನು ಕಳೆದ 18 ವರ್ಷಗಳಿಂದಲೂ ಸರ್ಕಾರದವರಿಗೆ ತಯಾರು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಈ ಸಂಬಂಧದಲ್ಲಿ ಒಂದು ಪ್ರಶ್ನೆ ಬಂದಾಗ ಅದಕ್ಕೆ ಸಮರ್ಪಕವಾದ ಉತ್ತರ ಸರ್ಕಾರದ ವತಿಯಿಂದ ಬಾರದೆ ಇದ್ದುದರಿಂದ ಶ್ರೀಮಾನ್ ಗೋಪಾಲಗೌಡರು ಇದೇ ಸಭೆಯಲ್ಲಿ ಮೈಕನ್ನು ಕಿತ್ತು ಬಿಸಾಡಿದರು. ನಾನು ಜೀವಂತವಾಗಿರುವ ಕಾಲದಲ್ಲಿಯೇ ಈ ಭೂಸುಧಾರಣೆಯನ್ನು ಜಾರಿಗೆ ತರುವುದಕ್ಕೆ ಸಾಧ್ಯವಾಗುತ್ತದೆಯೇ ಎಂದು ಶ್ರೀಮಾನ್ ಗೋಪಾಲಗೌಡರು ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಆದಕ್ಕೋಸ್ಕರ ನಾನು ಸರ್ಕಾರದವರಿಗೆ ಹೇಳುವುದೇನೆಂದರೆ ಈಗ ನಮ್ಮ ರಾಜ್ಯದಲ್ಲಿ ಒಟ್ಟು ಇರತಕ್ಕ ರೆಸ್ಯೂಮಬಲ್ ಮತ್ತು ನಾನ್ ರೆಸ್ಯೂಮಬಲ್ ಲ್ಯಾಂಡ್ ಎಷ್ಟಿದೆ, ಅದಕ್ಕೆ ಸರ್ಕಾರದವರು ಏನು ಪರಿಹಾರವನ್ನು ಕೊಡಬೇಕಾಗುತ್ತದೆ ಎನ್ನತಕ್ಕ ಅಂಕಿ ಅಂಶಗಳನ್ನು ಸರ್ಕಾರದವರು ತೀವ್ರವಾಗಿ ಮಾಡಿಸಬೇಕೆಂದು ನಾನು ಹೇಳುತ್ತೇನೆ. ಮತ್ತು ಈ ರೆಸ್ಯೂಮಬಲ್ ಮತ್ತು ನಾನ್ ರೆಸ್ಯೂಮಬಲ್ ಲ್ಯಾಂಡಿಗೆ ಸಂಬಂಧಪಟ್ಟ ಭೂಮಾಲಕರಿಗೆ ಪರಿಹಾರವನ್ನು ಕೊಡುವುದಕ್ಕೆ ಬೇಕಾದಂತಹ ಹಣವನ್ನು ಒದಗಿಸುವ ಬಗ್ಗೆ ಸರ್ಕಾರದವರು ಇದರಲ್ಲಿ ಯಾವ ಸೂಚನೆಯನ್ನು ತೋರಿಸಿಲ್ಲ. ಕೇಂದ್ರ ಸರ್ಕಾರದಲ್ಲಿ ನಿಮ್ಮ ಪಕ್ಷದ ಸರ್ಕಾರವೇ ಇದೆ. ಆದ್ದರಿಂದ ಕೇಂದ್ರ ಸರ್ಕಾರದಿಂದ ಹೆಚ್ಚಿನ ಹಣ ಸಹಾಯ ಸಿಕ್ಕುತ್ತದೆ ಎನ್ನುವ ಆಶೆಯನ್ನು ತಾವು ಇಟ್ಟುಕೊಂಡಿರಬಹುದು. ನಾನು ಮೊದಲೇ ಹೇಳಿದಹಾಗೆ ಕೇಂದ್ರ ಸರ್ಕಾರದಿಂದ 5ನೇ ಫೈನಾನ್ಸ್ ಕಮಿಷನ್ ಮುಖಾಂತರ ಏನು ನೆರವು ನಮ್ಮ ರಾಜ್ಯಕ್ಕೆ ಬರಬೇಕಾಗಿತ್ತೋ ಅದು ಪೂರ್ತಿಯಾಗಿ ಬಂದಿಲ್ಲ. 43 ಕೋಟಿ ರೂಪಾಯಿಗಳ ನೆರವನ್ನು ಕೊಟ್ಟು ಉಳಿದ 70 ಕೋಟಿ ರೂಪಾಯಿಗಳ ನೆರವನ್ನು ಕೊಡದೆ ನಿರಾಕರಿಸಿದ್ದಾರೆ. ಹೀಗಿರುವಾಗ ಭೂಸುಧಾರಣೆಯನ್ನು ಜಾರಿಗೆ ತರುವುದಕ್ಕೆ ಕೇಂದ್ರಸರ್ಕಾರದಿಂದ ಹಣವನ್ನು ಪಡೆಯುತ್ತೇವೆ ಎನ್ನುವುದು ಕನಸು ಅದೀತು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಈಗ ಚುನಾವಣೆಯ ಸಂದರ್ಭದಲ್ಲಿ ಆಡಳಿತ ಪಕ್ಷದವರು ಜನತೆಗೆ ಹಲವಾರು ಆಶ್ವಾಸನೆಗಳನ್ನು ಕೊಟ್ಟಿದ್ದಾರೆ. ಬಹಳ ಸಂತೋಷ. ಸದಾ ತಮ್ಮ ಪಕ್ಷದವರೇ ಅಧಿಕಾರದಲ್ಲಿರಬೇಕೆಂದು ಬಯಸಿದ್ದೀರಿ

(ಶ್ರೀ ಎಚ್. ಡಿ. ದೇವೇಗೌಡ)

ಎಂದು ಕಾಣುತ್ತದೆ. ನೀವೇ ಇರಿ. ನಾವು ಇಲ್ಲಿಯೇ ತೃಪ್ತರಾಗಿದ್ದೇವೆ. ಈಗಾಗಲೇ ತಮ್ಮ ಪಕ್ಷದವರಿಗೆ ಕೆಲವರಿಗೆ ಜನಸಾಮಾನ್ಯರನ್ನು ನೋಡತಕ್ಕ, ಅವರ ಸಂಪರ್ಕ ತಪ್ಪಿಹೋಗಿದೆ ಎಂದು ಕಾಣುತ್ತದೆ. ಪಾರ್ಲಮೆಂಟ್ ಚುನಾವಣೆಯಲ್ಲಿ ನಿಮ್ಮ ಪಕ್ಷದವರು ನೂರಕ್ಕೆ ನೂರರಷ್ಟು ಗೆಲ್ಲುವಂತಹ ಸಾಮರ್ಥ್ಯ ಇತ್ತು. ಇವೊತ್ತು ಏನಾಗಿದೆ, ಬಾಂಗ್ಲಾದೇಶದ ಯುದ್ಧದ ನಂಬಿಂಧದಲ್ಲಿ ಜಯವನ್ನು ಗಳಿಸಿದಂಥಾದ್ದನ್ನು ನಿಮ್ಮ ಪಕ್ಷ ಚುನಾವಣೆಯಲ್ಲಿ ಉಪಯೋಗಿಸಿಕೊಳ್ಳದೆ ಇದ್ದರೆ ನಿಮ್ಮ ಪಕ್ಷದವರು 165 ಜನ ಚುನಾವಣೆಯಲ್ಲಿ ಗೆದ್ದು ಬರುವುದಕ್ಕೆ ಸಾಧ್ಯವಾಗುತ್ತಾ ಇರಲಿಲ್ಲ. ಒಂದು ವರ್ಷದಲ್ಲಿ ನಿಮ್ಮ ಪಕ್ಷದ ಬಗ್ಗೆ ಜನತೆಗೆ ಎಷ್ಟು ಸಂಶಯ ಉಂಟಾಗಿದೆ ಎಂಬುದನ್ನು ಈ ಒಂದು ಚುನಾವಣೆಯ ಫಲತಾಂಶದಲ್ಲಿ ನಾವು ಅಳೆಯಬೇಕಾಗುತ್ತದೆ. ಚುನಾವಣೆಯಕಾಲದಲ್ಲಿ ಆಡಳಿತ ಪಕ್ಷದವರು ಜನತೆಗೆ ಕೊಟ್ಟಂಥಾ ಆಶ್ವಾಸನೆಯನ್ನು ಈಡೇರಿಸಬೇಕಾದರೆ 3 ವರ್ಷಗಳು ಬೇಕು ಎಂದು ಪ್ರಧಾನ ಮಂತ್ರಿಗಳು ಹೇಳಿ ಒಂದು ಡೆಡ್‌ಲೈನ್ ಹಾಕಿ ಅವರು ನಮಗೆ ಉಪಕಾರ ಮಾಡಿದ್ದಾರೆ. ಈ ಸಂಬಂಧದಲ್ಲಿ ಮುಂದೆ ಏನು ಅನಾಹುತವಾಗುತ್ತದೆ ಎಂಬುದನ್ನು ಎಲ್ಲರೂ ಕಣ್ಣಿಲ್ಲಿ ಕಾಣಬಹುದು. ಬಡವರ ಬಗ್ಗೆ ನೀವು ಕೊಟ್ಟರತಕ್ಕ ಆಶ್ವಾಸನೆಗಳನ್ನು ಈಡೇರಿಸುವುದಕ್ಕೆ ಮುಂದೆ ನೀವು ತರತಕ್ಕಂಥಾ ಯೋಜನೆಗಳು ಏನಿವೆ, ನೀತಿ ನಿಯಮಗಳು ಏನಿವೆ ಅವುಗಳನ್ನು ನಾವು ಕಣ್ಣಲ್ಲಿ ನೋಡುತ್ತೇವೆ. ಈ ಸಂದರ್ಭದಲ್ಲಿ ನಾನು ಒಂದು ಮಾತ್ರ ಹೇಳುತ್ತೇನೆ ಬಡವರ ಉದ್ಧಾರಕ್ಕೊಸ್ಕರ ತರತಕ್ಕಂಥಾ ಯಾವುದೇ ಕಾನೂನು ಆಗಲೀ ಅದನ್ನು ನಾವು ಸಪೋರ್ಟ್ ಮಾಡುವುದಕ್ಕೆ ತಯಾರಾಗಿದ್ದೇವೆ. ನೀವು ನಿಮ್ಮ ಪಕ್ಷವನ್ನು ರೂಢಿಸಿಕೊಳ್ಳತಕ್ಕಂಥ ಚೇರಾಗಳು ಆಗಬಾರದು. ನಿಮಗೆ ಧೈರ್ಯ, ಸ್ಥೈರ್ಯ ಇದ್ದರೆ ಭೂಸುಧಾರಣೆಯ ಬಗ್ಗೆ ಹಿಂದಿನ ಸರ್ಕಾರ ಏನು ಕೆಲಸವನ್ನು ಮಾಡಿದೆ ಅಷ್ಟನ್ನಾದರೂ ಅನುಷ್ಠಾನಕ್ಕೆ ತರುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಮುಗಳಬಗ್ಗೆ ಕೇಂದ್ರ ಸರ್ಕಾರದವರು ತಮ್ಮ ಹತೋಟಿಯಲ್ಲಿ ಇಟ್ಟುಕೊಳ್ಳತಕ್ಕಂಥಾ ಅವಶ್ಯಕತೆ ಏನಿದೆ? ಕೇಂದ್ರ ಸರ್ಕಾರದವರಿಗೆ ಜೋ ಹುಕುಂ ಹೇಳತಕ್ಕಂಥಾ ರಾಜ್ಯಸರ್ಕಾರಗಳು ಇರಬೇಕು. ನಿಜವಾಗಿಯೂ ಇದು ತಲೆತಗ್ಗಿಸಬೇಕಾದಂತಹ ವಿಷಯ ಎಂದು ನಾನು ಹೇಳಬೇಕಾಗುತ್ತದೆ. ಯಾವ ಯಾವ ವಿಷಯುಗಳು ರಾಜ್ಯಸರ್ಕಾರಕ್ಕೆ ಅನ್ವಯವಾಗುತ್ತವೆಯೋ ಅಂಥವುಗಳನ್ನು ಮತ್ತು ಆಯಾಯಾ ರಾಜ್ಯ ಸರ್ಕಾರಗಳಿಗೆ ಅವುಗಳ ಒಂದು ರೂಪ ರೇಷೆಯನ್ನು ತಯಾರಿಸತಕ್ಕ ಬಗ್ಗೆ ಏತಕ್ಕೆ ಅಧಿಕಾರವನ್ನು ಕೊಡಬಾರದು ಎಂದು ನಾನು ಪ್ರಸ್ತಾಪ ಮಾಡಬೇಕಾಗುತ್ತದೆ. ಇದನ್ನು ಕೇಂದ್ರ ಸರ್ಕಾರದವರು ತಮ್ಮ ಹತೋಟಿಯಲ್ಲಿ ಇಟ್ಟುಕೊಂಡು ತಮಗೆ ಎಲ್ಲಿಬೇಕೋ ಅಲ್ಲಿ ಈ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಈ ಸೆಂಟ್ರಲ್‌ಸ್ಪಾನ್ಸರ್ಡ್ ಸ್ಕೀಮುಗಳಿಗೆ ಮಾರ್ಚ್ 31ನೇ ತಾರೀಖಿನ ಒಳಗಾಗಿ ಖರ್ಚು ಮಾಡತಕ್ಕದ್ದು ಇದ್ದರೆ ಈ ಯೋಜನೆಗಳನ್ನು ಫೆಬ್ರುವರಿ ತಿಂಗಳಿನಲ್ಲಿ ರಿವೀಸ್ ಮಾಡಿ ಅವಕ್ಕೆ ಬೇಕಾದ ಹಣವನ್ನು ಖರ್ಚು ಮಾಡುವುದಕ್ಕೋಸ್ಕರ ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ಈ ಸಭೆಯಮುಂದೆ ತರುತ್ತಾರೆ. ಇದು ಸರಿಯಲ್ಲ. ಈ ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಮುಗಳ ವಿಷಯದಲ್ಲಿ ಈಗ ಕೇಂದ್ರ ಸರ್ಕಾರದವರು ಏನು ಒಂದು ನೀತಿಯನ್ನು ಅನುಸರಿಸುತ್ತಿದ್ದಾರೆ ಈ ಹವ್ಯಾಸವನ್ನು ಕೈಬಿಡಬೇಕೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

10 ಎಕರೆ ಒಳಗಡೆ ಜಮೀನು ಇರತಕ್ಕ ರೈತರಿಗೆ ಭೂಕಂದಾಯವನ್ನು ರದ್ದು ಮಾಡಬೇಕೆಂದು ಹಿಂದಿನ ಸರ್ಕಾರ ಒಂದು ತೀರ್ಮಾನವನ್ನು ಕೈಗೊಂಡಿದ್ದಾರೆ. ಅವನ್ನು ರದ್ದು ಮಾಡಿದರೆ ಪಾಪ ಶ್ರೀಮಂತರಿಗೆ ಅನುಕೂಲವಾಗುತ್ತದೆಯೋ ಏನೋ ಎಂದು ಭಾವಿಸಿಕೊಂಡು ಆ ಒಂದು ತೀರ್ಮಾನವನ್ನು ಈ ಸರ್ಕಾರದವರು ಜಾರಿಗೆ ತರಲಿಲ್ಲ. ಭೂಕಂದಾಯವನ್ನು ರದ್ದು ಮಾಡುವಂತಹ ತೀರ್ಮಾನವನ್ನು ಹಿಂದಿನ ಸರ್ಕಾರದವರು ಏನು ಕೈಗೊಂಡಿದ್ದರು ಅದರಿಂದ ಸಾಮಾನ್ಯ ರೈತರಿಗೆ ಚಿಕ್ಕ ಚಿಕ್ಕ ಹಿಡುವಳಿದಾರರಿಗೆ ಅನುಕೂಲವಾಗುತ್ತದೆ. ಆದ್ದರಿಂದ ಅದನ್ನು ಸರ್ಕಾರದವರು ಕಾರ್ಯಗತ ಮಾಡಬೇಕೆಂದು ನಾನು ಹೇಳಬಯಸುತ್ತೇನೆ. ಆ ಬಗ್ಗೆ ಮಾನ್ಯ ಹಣಕಾಸಿನ ಮಂತ್ರಿಗಳ ಭಾಷಣದಲ್ಲಿ ಚಕಾರ ಶಬ್ದ ಕೂಡ ಎತ್ತಿಲ್ಲ. ಹಿಂದಿನ ಸರ್ಕಾರದವರು ಏನು ಒಳ್ಳೆಯ ಕಾರ್ಯ ಮಾಡಿದ್ದರು ಆ ಬಗ್ಗೆ ನಿಮಗೆ ನವತಿ ಮಾತ್ಸರ್ಯ ಏತಕ್ಕೆ? ಆ ಒಂದು ಮನೋ ಪ್ರವೃತ್ತಿ ತಮಗೆ ಇದ್ದರೆ ಅದನ್ನು ಬದಲಾಯಿಸಿಕೊಳ್ಳಿ. ಹಿಂದಿನ ಸರ್ಕಾರ ಒಳ್ಳೆಯ ಕೆಲಸವನ್ನು ಮಾಡಿದ್ದರ ಬಗ್ಗೆ ಈ ಸರ್ಕಾರದವರು ಅನುಯೆ ಪಡಬೇಕಾಗಿಲ್ಲ. ಅದನ್ನು ಮನಸಾರೆ ಒಪ್ಪಿ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ

ಸೋಷಿಯರ್ ವೆರ್‌ಫೇರ್ ಬಗ್ಗೆ ಹೇಳಬೇಕಾಗಿದ್ದರೆ ನನಗೆ ಕೆಲವು ಪತ್ರಗಳು ಬಂದಿವೆ. ಈಗ ಒಂದು ವರ್ಷದಿಂದ ಕೆಲವು ಹಾಸ್ಟಲಿಗೆ ಕೊಡಬೇಕಾದಂತಹ ಹಣವನ್ನು ರಿಲೀಜ್ ಮಾಡದೆ ಹಾಗೆ ತಡೆಹಿಡಿದಿದ್ದಾರೆ. ಇವೊತ್ತೂ ಕೂಡ ಅವುಗಳಿಗೆ ಹಣ ರಿಲೀಜ್ ಆಗಿಲ್ಲ. ಈ ವಿಚಾರದಲ್ಲಿ ಸಂಬಂಧಪಟ್ಟ ಹಾಸ್ಟಲುಗಳವರು ನನಗೆ ಪತ್ರವನ್ನು ಬರೆದಿದ್ದಾರೆ, ಟೆಲಿಗ್ರಾಮ್ ಕೂಡ ಕಳುಹಿಸಿದ್ದಾರೆ. ಇಂಥಾ ಒಂದು ಅದಕ್ಷ ಆಡಳಿತ ಇರಬಾರದು. ಮಾರ್ಚ್ 31ನೇ ತಾರೀಖಿನೊಳಗಾಗಿ ಆ ಹಣವನ್ನು ಡ್ರಾ ಮಾಡಬೇಕು. ಇಲ್ಲದಿದ್ದರೆ ಅದು ಲ್ಯಾಪ್ಸ್ ಆಗುತ್ತದೆ. ಇದರ ಬಗ್ಗೆ ಮ್ಯಾನೇಜ್‌ಮೆಂಟ್‌ನವರು ತಪ್ಪು ಮಾಡಿದ್ದರೆ ಅವರಿಗೆ ಶಿಕ್ಷೆ ಮಾಡಬೇಕು. ಅದು ಬಿಟ್ಟು ಹಾಸ್ಟಲುಗಳಿಗೆ ಕೊಡಬೇಕಾದ ಗ್ರಾಂಟನ್ನು ರಿಲೀಜ್ ಮಾಡದೆ ಅದರ ಪರಿಣಾಮ ಚಿಕ್ಕಮಕ್ಕಳ ಮೇಲೆ ಆಗಬಾರದು. ಅವರಿಗೆ ಯಾವವಿಧವಾದ ಆತಂಕವೂ ಇರಬಾರದು.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ್.—ಯಾವ ಜಿಲ್ಲೆಯಲ್ಲಿ ಆ ರೀತಿ ಆಗಿದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಚ್. ಡಿ. ದೇವೇಗೌಡ.—ರಾಯಚೂರು ಜಿಲ್ಲೆಯಲ್ಲಿ ಆರೀತಿ ಆಗಿದೆ. ಅಲ್ಲಿಂದ ಸಂಬಂಧಪಟ್ಟ ಹಾಸ್ಟರ್‌ನವರಿಂದ ಪತ್ರ ಮತ್ತು ಟೆಲಿಗ್ರಾಮ್ ಕೂಡ ಬಂದಿದೆ.

1-30 P. M.

ಇದು ರಾಯಚೂರಿಗೆ ಸಂಬಂಧಪಟ್ಟದ್ದು. ಇದಕ್ಕೆ ಸಂಬಂಧಪಟ್ಟ ಸೆಕ್ರೆಟರಿಯವರು ಒಂದು ಟೆಲಿಗ್ರಾಂ ಕೂಡ ಕೊಟ್ಟಿದ್ದಾರೆ. ಇದನ್ನು ನಾನು ಸಂಬಂಧಪಟ್ಟ ಮಂತ್ರಿಯವರಿಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದರ ಸಲುವಾಗಿ ಕಳಿಸಿಕೊಡುತ್ತೇನೆ. ಆದ್ದರಿಂದ ದಯವಿಟ್ಟು ಅಂಥದಕ್ಕೆ ಅವಕಾಶ ಕೊಡಬಾರದು ಎಂದು ಹೇಳುತ್ತೇನೆ.

ಅದರ ಜೊತೆಗೆ ಇನ್ನೂ ಕೆಲವು ಅಂಶಗಳನ್ನು ಪ್ರಸ್ತಾಪ ಮಾಡಲಿಚ್ಛಿಸುತ್ತೇನೆ. ಈಗ ಈ ಬಜೆಟ್‌ನ್ನು ಟ್ಯಾಕ್ಸ್ ಫ್ರೀ ಬಜೆಟ್ ಎಂದು ಹೇಳುತ್ತಿದ್ದಾರೆ. ಇದು ಯಾವ ರೀತಿಯಲ್ಲಿ ಟ್ಯಾಕ್ಸ್ ಫ್ರೀ ಬಜೆಟ್ ಎಂದು ಗೊತ್ತಾಗಿಲ್ಲ. ಕಳೆದ ಒಂದು ವರ್ಷದಿಂದ ಬಂಗ್ಲಾ ದೇಶದ ನೆಪದಿಂದ ಒಂದು ಕಡೆ ಕೇಂದ್ರ ಸರ್ಕಾರದವರು ಜನತೆಯ ಮೇಲೆ ಟ್ಯಾಕ್ಸ್‌ನ್ನು ಹಾಕಿದ್ದಾರೆ, ಇನ್ನೊಂದು ಕಡೆ ರಾಜ್ಯ ಸರ್ಕಾರದವರೂ ಹಾಕಿದ್ದಾರೆ. ಇದನ್ನೆಲ್ಲಾ ನಾವು ವಿವೇಚನೆಯಿಂದ ಆಲೋಚನೆ ಮಾಡುವುದಾದರೆ, ಬಹುಶಃ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಜನಗಳಿಗೆ ಹೆಚ್ಚಿನ ಅನ್ಯಾಯವಾಗಿದೆಯೆಂದು ಕಾಣುತ್ತದೆ. ಅಲ್ಲವೆ ನಮ್ಮ ಆರ್ಥಿಕ ಮಂತ್ರಿಯವರು ರೂರಲ್ ಪ್ರದೇಶದಲ್ಲಿರುವ ಶ್ರೀಮಂತರಿಗೆ ಟ್ಯಾಕ್ಸ್ ಹಾಕುವ ಬಗ್ಗೆ ಆಲೋಚನೆ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಅವರಿಗೆ ಗ್ರಾಮಾಂತರ ಪ್ರದೇಶದಲ್ಲಿರುವ ಜನತೆ ಯಾವ ರೀತಿ ಕಷ್ಟ ಪಡುತ್ತಿದ್ದಾರೆಂಬುದರ ಅನುಭವ ಇದೆಯೋ ಇಲ್ಲವೋ ಗೊತ್ತಿಲ್ಲ. ಅವರು ದೊಡ್ಡ ಕ್ಯಾಪಿಟಲಿಸ್ಟ್. ಹಳ್ಳಿಯಲ್ಲಿರುವ ಕಷ್ಟಗಳ ಬಗ್ಗೆ ಇನ್ನೂ ಅವರು ಬಹಳವಾಗಿ ಅಭ್ಯಾಸ ಮಾಡಬೇಕಾಗಿದೆ. ಏಕೆಂದರೆ, ಇವೊತ್ತಿನ ದಿವಸ ರೈತನು ಉಪಯೋಗ ಮಾಡತಕ್ಕಂತಹ ಎಲ್ಲಾ ಪದಾರ್ಥಗಳಿಗೂ ತೆರಿಗೆಯನ್ನು ಹಾಕಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ಇವತ್ತು ಗೊಬ್ಬರದ ಮೇಲೆ ತೆರಿಗೆ ಹಾಕಿದ್ದಾರೆ, ಕಬ್ಬಿಣದ ಮೇಲೆ ಟ್ಯಾಕ್ಸ್ ಹಾಕಿದ್ದಾರೆ; ಅಲ್ಲದೆ ಸೀಮೆಎಣ್ಣೆಯ ಮೇಲೂ ಟ್ಯಾಕ್ಸ್ ಹಾಕಿದ್ದಾರೆ. ಇದನ್ನು ನಾನು ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ಬಹುಶಃ ಇವರು ಇನ್ನೂ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಜನರ ಮೇಲೆ ತೆರಿಗೆಯನ್ನು ಹಾಕುವುದಾದರೆ, ಇಂದಲ್ಲ ನಾಳೆ ಅಲ್ಲಿರತಕ್ಕ ಜನರು ನಿಮ್ಮ ಮೇಲೆ ದಂಗೆ ಏಳುವಂತಹ ಕಾಲ ಹೆಚ್ಚು ದೂರವಿರಲಾರದು. ಇವತ್ತು ವ್ಯವಸಾಯದ ವೃತ್ತಿ ಒಂದು ಸುಗಮವಾದ ವೃತ್ತಿಯಲ್ಲವೆಂಬುದನ್ನು ಮಾನ್ಯ ಚನ್ನಬಸಪ್ಪನವರು ನಮಗಿಂತ ಚೆನ್ನಾಗಿ ಅರಿತಿದ್ದಾರೆ. ಅವರು ಈ ಕಡೆ ಇದ್ದಾಗ ಅದರ ಬಗ್ಗೆ ಬಹಳ ಚೆನ್ನಾಗಿ ಮಾತನಾಡುತ್ತಿದ್ದರು. ಆದ್ದರಿಂದ ಇವರು ಏನು ರೂರಲ್ ರಿಚ್ ಅವರಿಗೆ ಟ್ಯಾಕ್ಸ್ ಹಾಕಬೇಕೆಂದು ಹೇಳುತ್ತಿದ್ದಾರೆ, ಅದು ಒಂದು ಏಪರ್ಯಾಸಕ್ಕೆ ಬಂದು ನಿಲ್ಲಬಹುದು ಎಂದು ಹೇಳುತ್ತೇನೆ. ನಾನಾದರೂ ತಿಳಿದುಕೊಂಡಿದ್ದೆ ಏನೆಂದರೆ, ಕೇಂದ್ರದ ಬಜೆಟ್ ಬಂದಾಗ, ಬಹುಶಃ ಅದರಲ್ಲಿ ಶ್ರೀಮಂತರಿಗೆ ಹೆಚ್ಚಿನ ತೆರಿಗೆ ಬೀಳುತ್ತದೆ ಎಂದು. ಎಲ್ಲರೂ ಆ ಬಜೆಟ್ಟಿನ ಬಗ್ಗೆ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದಾರೆ. ಸೀಮೆ ಎಣ್ಣೆಗೆ ಟ್ಯಾಕ್ಸ್ ಹಾಕಿದ್ದರಿಂದ ಯಾರಾದರೂ ಒಬ್ಬನು 5,000 ಲೀಟರ್ ಸೀಮೆ ಎಣ್ಣೆ ಆ ಸಮಯದಲ್ಲಿ ದಾಸ್ತಾನು ಇಟ್ಟಿದ್ದರೆ, ಅವನಿಗೆ ಎಷ್ಟು ಲಾಭವಾಗುತ್ತದೆಂಬುದನ್ನು ತಾವು ಯೋಚನೆ ಮಾಡಬೇಕು. ಯಾವ ರೈತನೂ ಕೂಡ ಈ ಬಜೆಟ್ ಒಳ್ಳೆಯ ಬಜೆಟ್ ಎಂದು ಹೇಳಿಲ್ಲ, ಆದರೆ ಈ ಪ್ರವೃತ್ತಿ ಸರ್ಕಾರಕ್ಕೆ ಒಳ್ಳೆಯ ಶುಭವನ್ನು ತರತಕ್ಕದ್ದಲ್ಲವೆಂದು ಮಾತ್ರ ನಾನು ಹೇಳ

(ಶ್ರೀ ಎಚ್. ಡಿ. ದೇವೇಗೌಡ)

ಬಯಸುತ್ತೇನೆ. ಆದ್ದರಿಂದ ಮುಂದೆ ಏನಾದರೂ ತೆರಿಗೆ ಹಾಕತಕ್ಕ ಆಲೋಚನೆ ಸರ್ಕಾರಕ್ಕೆ ಇದ್ದರೆ, ಅದನ್ನು ಗ್ರಾಮಾಂತರ ಜನತೆಯ ಹಿತದೃಷ್ಟಿಯಿಂದ ಮತ್ತು, ಪಟ್ಟಣಗಳಲ್ಲಿರುವ ಸಾಮಾನ್ಯ ಜನರ ಹಿತದೃಷ್ಟಿಯಿಂದ ಹಿಂದು ಮುಂದು ಆಲೋಚನೆ ಮಾಡಿ ಕೈಹಾಕಬೇಕೆಂದು ಕೇಳಿಕೊಳ್ಳುತ್ತೇನೆ. ತಾವು ಏನೊಂದು ಆಶ್ವಾಸನೆಯನ್ನು ಜನರಿಗೆ ಕೊಟ್ಟಿದ್ದೀರಿ ಅದನ್ನು ಈಡೇರಿಸುವುದಕ್ಕೆ ಸಾಕಷ್ಟು ವಿಚಕ್ಷಣೆಯಿಂದ ಕೆಲಸ ಮಾಡಬೇಕು, ಇಲ್ಲವಿದ್ದರೆ ದೇಶದಲ್ಲಿ ಜನತೆ ತಾಳ್ಮೆ ಕೆಟ್ಟು ಕ್ರಾಂತಿ ಎಬ್ಬಿಸಬಹುದು. ಅದೇ ರೀತಿ ಇವತ್ತು ನಿರುದ್ಯೋಗ ಸಮಸ್ಯೆಯು ಬಹಳ ಬೃಹದಾಕಾರವಾಗಿ ಬೆಳೆಯುತ್ತಾ ಇದೆ. ಇವತ್ತು ನಿಮ್ಮ ಸರ್ಕಾರ ದೇಶದಲ್ಲಿ ಎರಡು ಸಮಸ್ಯೆಗಳನ್ನು ಬಗೆಹರಿಸಿ ಬಿಟ್ಟರೆ, ನೀವು ಬೇಕಾದರೆ 100 ವರ್ಷ ರಾಜ್ಯಭಾರ ಮಾಡಿ ಯಾರೂ ಬೇಡ ಎನ್ನುವುದಿಲ್ಲ. ಈಗಾಗಲೇ ನಮ್ಮ ಪ್ರಧಾನಿಯವರು ಇದನ್ನು ಮಾಡುವುದಕ್ಕೆ ಮೂರು ವರ್ಷದ ಕಾಲಾವಧಿಯನ್ನು ಕೇಳಿದ್ದಾರೆ. ಆ ಕಾಲವನ್ನು ನಾವು ಕಾದುನೋಡುತ್ತಿದ್ದೇವೆ. ಇದರ ಬಗ್ಗೆ ತಾವು ಸಾಕಷ್ಟು ಎಚ್ಚರಿಕೆಯಿಂದ ಇದ್ದು ಮುಂದಿನ ಕಾರ್ಯಗಳನ್ನು ಪ್ರಗತಿಯಿಂದ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† **Sri PRABHAKAR THELKAR** (Kalgi).—Madam Speaker, I sincerly congratulate the Finance Minister Sri Ghorpade for having presented a tax free budget. It is really a matter of pride that this budget is presented at a time when the State is facing a difficult financial position among other problems. I feel that this budget will try to ensure prosperity and social justice to some extent. It has been contended by the Finance Minister himself that in order to ensure the growth and development of the State and in keeping with the rising expectations of the people, the financial policies will have to be clearly related to economic goals which have received a massive mandate from the people. The budget presented is quite upto the mark. I want to make a few suggestions in this connection. I request the Finance Minister to provide some additional expenditure on drinking water facilities in the villages

Sri C. M. ARUMUGHAM.—The Hon. Member is reading out his speech which should not be permitted. It is all right if a lady member were to read the speech.

MADAM SPEAKER.—He is not reading his speech but referring to the points which he has jotted down.

Sri PRABHAKAR THELKAR.—I request the Finance Minister to provide some additional grants to the drinking water facilities in the villages of my constituency. While campaigning for the elections, I had gone to so many villages. The drinking water facilities were quite inadequate in those villages. I have seen many women folk going to the wells in the midnight to get a potfull of water and they have to spend the whole night for one pot of water. Similarly, there are many villages where the water facilities are quite inadequate. Some additional Budget grant should be given for drinking water facilities in these areas. I know that the Government of Mysore has taken some assistance from the L. I. C. and also from Agricultural Re-finance Corporation. I feel it is not quite sufficient. Further I have seen so many other villages such as Kerur and round about villages where drinking water is quite inadequate and acute in the

month of March. In the month of April there will be absolutely no water in these villages. Moreover there will be failure of rains every year in these villages. Therefore, the Government should provide some borewells in these villages.

There are some villages in Gulbarga Constituency where there are no approach roads. For want of approach-roads, these villages have not been developed. Therefore approach roads may be provided to these villages, so that these villages also could be developed. I am told that in Gulbarga City itself, the water may last for about 15 to 30 days during this year. The borewells that have been bored, have been dried up. The Government is therefore requested to take suitable action to supply water to this City. The Government is spending a lot of money in urban areas. Transport facilities should be given to the villages in this area.

I request the Government to allot certain amount in the Budget for the accommodation of Harijans who have no houses. There are cases where some Harijans are having no shelter at all. Therefore it would go a long way if you provide some amount in the Budget for the construction of houses for these unfortunate people. The Finance Minister has rightly said that money should be spent effectively and wisely. What I feel is that looking into the bare necessity of the people, provision should be made for drinking water facilities and also for housing purposes.

Then coming to the education, I really appreciate the principles of the Government so far as the promotion of education is concerned. The Government is spending a lot of money for Primary, Middle and Secondary education. But the money spent is not properly utilised on education itself. The private Institutions are not properly utilising the grants, given to them. The teachers are not getting salaries. There are so many bogus Institutions. The money should be spent for the benefit of the people. The Government must see to it that grants are stopped to those bogus Institutions and the teachers in private Institutions are paid properly.

The amount spent on social welfare is not properly utilised. Thousands and lakhs of rupees are being spent for this purpose. The Government is requested to see that there should be a proper check over this and money allotted for the purpose should be utilised for the betterment of the people. With these remarks I once again congratulate our Finance Minister and uphold the budget. Thank you.

†ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಮಾನ್ಯ ಅಧ್ಯಕ್ಷಣಿಯವರೇ, ತಾವು ಈ ಒಂದು ಅಯವ್ಯಯದ ಬಗ್ಗೆ ಮಾತನಾಡುವುದಕ್ಕೆ ನನಗೆ ಅವಕಾಶವನ್ನು ಕೊಟ್ಟಿರುವುದ ಕ್ಕೋಸ್ಕರವಾಗಿ ಪ್ರಪ್ರಥಮವಾಗಿ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈ ಆಯವ್ಯಯ ವನ್ನು ಮಂಡಿಸಿದಂಥ ಶ್ರೀಮಾನ್ ಘೋರ್ಪಡೆಯವರು ರಾಜಾಧಿರಾಜರ ಮನೆತನದಿಂದ ಬೆಳೆದು ಬಂದಿದ್ದಾರೆ. ರಾಜಮಹಾರಾಜರ ಮನೆತನದಿಂದ ಬೆಳೆದು ಬಂದು ಇವ್ಯಕ್ಕಿದ್ದಂತೆ ನಮಾಜವಾದದ ಮಂತ್ರಿಮಂಡಲದಲ್ಲಿ ಸಚಿವರಾಗಿದ್ದಾರೆ. ಅವರ ಆ ಒಂದು ಪಿದಾರ್ಯಕ್ಕೆ ನಾನು ಬಹಳ

(ಶ್ರೀ ವಾಟಾಳ್ ನಾಗರಾಜ್)

ಸಂತೋಷಪಡುತ್ತೇನೆ. ಅವರು ಇಲ್ಲಿ ಇಟ್ಟಿರತಕ್ಕ ಈ ಒಂದು ತಾತ್ಕಾಲಿಕ ಆಯವ್ಯಯ ಪತ್ರದಲ್ಲಿ ನುಮಾರು ಒಂದು ತಿಂಗಳ ಹಿಂದೆ ಜನತೆಗೆ ಚುನಾವಣೆಯು ನಂಬಂಧದಲ್ಲಿ ಏನೊಂದು ಘೋಷಣೆ ಯನ್ನು ಹೊರಡಿಸಿ, ಆ ಒಂದು ಘೋಷಣೆಯು ಪ್ರತಿಗಳನ್ನು ಪೋಸ್ಟರ್‌ಗಳಂತೆ ಅಂಟಿಸಿ ಶಂಖ ಊದಿದರೋ, ಅದರ ಬಗ್ಗೆ ಯಾವ ಒಂದು ವಿಷಯವೂ ನಮೂದು ಆಗದೇ ಇರುವುದು ಶೋಚ ನೀಯವಾಗಿದೆ.

ಒಬ್ಬ ಸದಸ್ಯರು.—ಶಂಖ ಎಂಬ ಪದ ಪಾರ್ಲಿಮೆಂಟರಿಯೇ! ಶ್ರೀಮಾನ್ ವಾಟಾಳ್ ನಾಗರಾಜರ ಮುಕ್ತಾಳತನ ಕಡಿಮೆಯಾಗಬೇಕು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಸದಸ್ಯರು ನೀತಿಗೆಟ್ಟ ಪದಗಳನ್ನು ಈ ಸಭೆಯಲ್ಲಿ ಉಪಯೋಗಿಸಿ ಮಾತನಾಡುವುದು ಸರಿಯಲ್ಲ. ಅವರು ಸ್ವಲ್ಪ ಗಾಂಭೀರವನ್ನು ಉಳಿಸಿಕೊಂಡು ಕೂತುಕೊಳ್ಳಬೇಕು.

ಚುನಾವಣೆಯ ಸಂದರ್ಭದಲ್ಲಿ ಜನಸಾಮಾನ್ಯರಿಗೆ ಅವರು ಅನೇಕ ಆಶ್ವಾಸನೆಗಳನ್ನು ನೀಡಿದ್ದಾರೆ. ನಿರುದ್ಯೋಗ ನಿವಾರಣೆ, ಸಾಮಾಜಿಕ ನ್ಯಾಯ, ಬಡತನವನ್ನು ಇದ್ದಕ್ಕಿದ್ದಂತೆ ತೊಲಗಿಸಿ ಬಡವರಿಗೆ ಚಿನ್ನದ ಕಿರೀಟ, ಬಡವರ ಕಾಲಿಗೆ ಚಿನ್ನದ ಚಪ್ಪಲಿ ಡೆಲ್ಲಿಯಿಂದ ಬರುತ್ತಾ ಇದೆ ಎಂಬುದಾಗಿ ಜನತೆಗೆ ಈ ಸರ್ಕಾರದಲ್ಲಿ ಅಡಳಿತ ಹಾಗೂ ಅಧಿಕಾರಕ್ಕೆ ಬಂದಿರತಕ್ಕ ಆ ಪಕ್ಷದವರು ತಿಳಿಸಿದರು. ಆ ಒಂದು ಪಕ್ಷದ ಬೆಂಬಲದಿಂದರೇ ಈದಿನ ಅವರೆಲ್ಲರೂ ಮಂತ್ರಿಗಳಾಗಿದ್ದಾರೆ. ಇನು ಈ ವರ್ಷದ ಆಯವ್ಯಯವನ್ನು ನೋಡಿದಾಗ ನಾನು ಒಂದು ಮಾತನ್ನು ಹೇಳಬೇಕಾಗುತ್ತದೆ. ನಾನು ಆ ಮಾತನ್ನು ಹೇಳಿದರೆ ಅಧ್ಯಕ್ಷಣಿಯವರಾದ ತಾವು ಏನೂ ತಪ್ಪು ತಿಳಿದುಕೊಳ್ಳಬಾರದು. ಇದು ಬೋಡಮ್ಮನ ಬಜೆಟ್ ಇದ್ದಹಾಗೆ ಇದೆ. ಇದನ್ನು ಓದುವುದಕ್ಕೆ ಅಷ್ಟು ಅಪ್ಯಾಯಮಾನವಾಗಿಲ್ಲ. ಇದರಲ್ಲಿ ಏನೇನೂ ಇಲ್ಲ. ಕಾರ್ಯರೂಪಕ್ಕೆ ಬರುವಂಥಾದ್ದು ಯಾವುದೂ ಇಲ್ಲ. ಅವರು ರಾಜಮನೆತನದವರು ಅದಾಗ್ಯೂ ಬಡವರ ಬಗ್ಗೆ ಒಳ್ಳೆಯ ಅಭಿಮಾನ ಎಂಬುದಾಗಿ ತಿಳಿದುಕೊಂಡಿದ್ದೆ. ಆ ವಿಚಾರವನ್ನು ಮುಂದೆ ಜನತೆ ನೋಡಬಹುದು. ಇದು ಕೆರಿಗೆರಹಿತವಾದ ಬಜೆಟ್ ಎಂಬುದಾಗಿ ಪತ್ರಿಕೆಯಲ್ಲಿ ಬಂತು. ಇದು ಬರೀ ಕೇವಲ 4 ತಿಂಗಳಿಗೆ ಮಾತ್ರ ಸಂಬಂಧಪಟ್ಟುದು. ಜನರು ಪತ್ರಿಕೆಗಳಲ್ಲಿ ದೊಡ್ಡದೊಡ್ಡ ಅಕ್ಷರಗಳಲ್ಲಿ ಆ ರೀತಿ ಬಂದುದು ನೋಡಿ ಸ್ವಲ್ಪಮಟ್ಟಿಗೆ ಸಂತೋಷಪಡುತ್ತಿದ್ದಾರೆ. ಆದರೆ ಮುಂದೆ ಜನಗಳ ಮೇಲೆ ಇವರು ಟೋಪಿ ಹಾಕುತ್ತಾರೆ. ಆ ವಿಷಯ ಜನಗಳಿಗೆ ಇನ್ನೂ ಗೊತ್ತಿಲ್ಲವೆಂದು ನನಗೆ ಕಾಣುತ್ತದೆ. ಹೀಗಿರುವಾಗ ನಿಮ್ಮಿಂದ ನಾವು ಯಾವ ಸಮಾಜ ನ್ಯಾಯವನ್ನು ನಿರೀಕ್ಷಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಹಿಂದೆ ಈ ರಾಜ್ಯದ ಬಜೆಟ್ಟನ್ನು ಪಾರ್ಲಿಮೆಂಟ್ ಅನುಮೋದಿಸಿದ ಕಾಲಕ್ಕೆ ಆ ಬಜೆಟ್ಟಿನಲ್ಲಿ 1971-72ಕ್ಕೆ 15.72 ಕೋಟಿ ರೂಪಾಯಿಗಳ ಕೊರತೆ ಇದೆ ಎಂದು ಹೇಳಲಾಗಿತ್ತು; ಆಗ ಆ ಒಂದು ಅಂದಾಜನ್ನು ಮಾಡಲಾಗಿತ್ತು. ಆದರೆ ಇತ್ತೀಚೆಗೆ ರಿವೈಜ್ಡ್ ಎಸ್ಟಿಮೇಟಿನಲ್ಲಿ ಆ ಸಾಲನ ಡಿಫಿಸಿಟ್ಟು ಒಟ್ಟು 42·60 ಕೋಟಿ ರೂಪಾಯಿಗಳೆಂದು ಹೇಳಲಾಗಿದೆ. ಇದನ್ನು ನೋಡಿದರೆ ಈ ಬಜೆಟ್ಟನ್ನು ತಯಾರು ಮಾಡುವುದರಲ್ಲಿ ಎಷ್ಟು ನೈಪುಣ್ಯತೆ ತಮಗಿದೆ ಅಥವಾ ತಮ್ಮ ಸರ್ಕಾರಕ್ಕಿದೆ ಎಂಬುದನ್ನು ಇದು ಎತ್ತಿ ತೋರಿಸುತ್ತದೆ. ಮೊದಲು ಹೇಳಿದ್ದ 15.72 ಕೋಟಿಗೂ ಇತ್ತೀಚೆಗೆ ರಿವೈಜ್ಡ್ ಆದ ಅಂದಾಜು ಪಟ್ಟಿಯಲ್ಲಿ ಕಾಣಿಸಿರತಕ್ಕ 40.62 ಕೋಟಿಗೂ ಹೋಲಿಸಿದರೆ ಅಜಗಜಾಂತರ ವ್ಯತ್ಯಾಸವಿದೆ. ಇಂಥ ಒಂದು ಅಜಗಜಾಂತರ ವ್ಯತ್ಯಾಸವುಳ್ಳ ಅಂಕಿ ಅಂಶಗಳನ್ನು ಜೋಡಿಸಿ ಒಂದು ಬಡ್ಜೆಟ್ಟನ್ನು ತಯಾರಿಸುವಂಥ ಧೈರ್ಯ ನಮ್ಮ ಸರ್ಕಾರದಲ್ಲಿ ಆ ಶ್ರೀಮಾನ್ ಭರತರನ್ನು ಬಿಟ್ಟರೆ ಬೇರೆ ಯಾರಿಗೂ ಸಾಧ್ಯವಿಲ್ಲ. ಆದುದರಿಂದ ಇದು ದೇಶದಲ್ಲರತಕ್ಕ ಸಾಮಾನ್ಯ ಜನರಿಗೆ ಸಂಬಂಧಪಟ್ಟ ಬಜೆಟ್ಟಲ್ಲ. ಈ ಬಜೆಟ್ಟು ಸರ್ಕಾರದಲ್ಲಿ ಸೆಕ್ರೆಟರಿಗಳಾಗಿರತಕ್ಕ ಭರತ್ ಅವರಿಗೆ ಸಂಬಂಧಪಟ್ಟ ಬಜೆಟ್ಟಾಗಿದೆ. ಇಂಥ ಒಂದು ಅಲ್ಲಸಲ್ಲದ ಅಂಕಿ ಅಂಶಗಳನ್ನು ಉಳ್ಳಂಥ ಬಜೆಟ್ಟನ್ನು ತಯಾರಿಸತಕ್ಕ ಶಕ್ತಿ ಮತ್ತು ಆ ಒಂದು ಚಾಣಾಕ್ಷತೆ ಇನ್ನಾವ ಅಧಿಕಾರಿಗೂ ಇಲ್ಲ. ಆದರೆ ನಾನು ಈಗ ಕೇಳಬೇಕಾದುದು ಈ ಬಜೆಟ್ಟನ್ನು ಮಾನ್ಯ ಆರ್ಥಿಕ ಸಚಿವರು ಆ ಅಧಿಕಾರಿಗಳ ಪೂತಿನಂತೆ ಇದನ್ನು ತಯಾರಿಸಿದ್ದಾರೋ ಅಥವಾ ಇದನ್ನು ತಮ್ಮ ಒಂದು ವೈಯುಕ್ತಿಕ ನೀತಿಗನುಸಾರವಾಗಿ ತಯಾರಿಸಿದ್ದಿರೋ ಎಂದು ಕೇಳಬೇಕಾಗಿದೆ. ಅಥವಾ ಆರ್ಥಿಕ ಸಚಿವರು ಇದನ್ನು ತಮ್ಮ ಇಷ್ಟಕ್ಕೆ ಬಂದಹಾಗೆ ಮಾಡಿದ್ದಾರೋ ಅಥವಾ ರಾಜ್ಯದಲ್ಲರತಕ್ಕ ಬಡಜನತೆಗೆ ಒಂದು ಸಾಮಾಜಿಕ ನ್ಯಾಯ ದೊರಕಿಸುವಂತೆ ಇದನ್ನು ತಯಾರಿಸಿದ್ದಿರೋ ಎಂದು ಪ್ರಶ್ನೆಮಾಡುತ್ತಿದ್ದೇನೆ!

ಶ್ರೀ ಎಂ. ವೈ. ಘೋರ್ಪಡೆ (ಹಣಕಾಸಿನ ಶಾಖೆಯ ಮಂತ್ರಿಗಳು).—ಆ ಅಂಕಿ ಸಂಖ್ಯೆಗಳನ್ನು ನಾವು ಮಾಡಲಿಲ್ಲ. ಅವು ಹೋದ ವರ್ಷಕ್ಕೆ ಸಂಬಂಧಪಟ್ಟ ಅಂಕಿ ಅಂಶಗಳು. ಅವು ನಾವು ಮಾಡಿದವುಗಳಲ್ಲ. .

ಶ್ರೀ ವಾಟಾಳ್ ನಾಗರಾಜ.—ಶ್ರೀಮಾನ್ ಘೋರ್ಪಡೆಯವರ ವಿಚಾರದಲ್ಲಿ ನನಗೆ ಅಪಾರ ನಂಬಿಕೆ ಇದೆ. ಅವರು ರಾಜಾಧಿರಾಜರ ಮನೆತನಕ್ಕೆ ಸೇರಿದವರು. ರಾಷ್ಟ್ರದಲ್ಲಿ ರಾಜಾಧಿರಾಜರುಗಳು ಮತ್ತು ಅವರ ಹಕ್ಕುಬಾಧ್ಯತೆಗಳೆಲ್ಲಾ ರದ್ದಾಗಿದ್ದರೂ ನಮ್ಮ ರಾಜ್ಯದಲ್ಲಿನ್ನೂ ಹಾಗೆ ಇಬ್ಬರು ರಾಜರುಗಳು ಮಾತ್ರ ಹಾಗೇ ಉಳಿದುಕೊಂಡು ಬರುತ್ತಿದ್ದಾರೆ. ಹಾಗೆ ರಾಜಕೀಯ ಸೌಲಭ್ಯಗಳನ್ನು ಉಳಿಸಿಕೊಂಡು ಬರುತ್ತಿರುವವರು ಯಾರು ಎಂದರೆ ಒಬ್ಬರು ಶ್ರೀಮಾನ್ ದೇವರಾಜ ಅರಸರು ಅವರು ಅರಸುಗಳ ಮನತನಕ್ಕೆ ಸೇರಿದವರು. ಇನ್ನೊಬ್ಬರು ಶ್ರೀಮಾನ್ ಘೋರ್ಪಡೆಯವರು. ಇವರು ರಾಜ ಮನೆತನಕ್ಕೆ ಸೇರಿದವರು. ಶ್ರೀಮತಿ ಇಂದಿರಾಗಾಂಧಿಯವರು ಇಡೀ ರಾಷ್ಟ್ರದಲ್ಲಿ ಇದ್ದಂಥ ರಾಜ ಮಹಾರಾಜರುಗಳನ್ನೆಲ್ಲಾ ಕತ್ತು ಹಾಕಿದ್ದರೂ ಅವರ ಸೌಲತ್ತುಗಳನ್ನು ತೆಗೆದು ಹಾಕಿದ್ದರೂ ಇನ್ನೂ ಈ ಮಾದರೀ ಮೈಸೂರು ರಾಜ್ಯದಲ್ಲಿ ಇಬ್ಬರು ರಾಜ ವಂಶದವರು ಹಾಗೇ ಸೌಲಭ್ಯಗಳನ್ನು ಅನುಭವಿಸುತ್ತಿದ್ದಾರೆ. ಇದು ಭಾರತ ಸರ್ಕಾರದ ಒಂದು ರಾಜಕೀಯ ತಂತ್ರ.

ಇನ್ನು ಸ್ವಾಮಿ, ನಾನು ತಿಳಿದುಕೊಂಡಿದ್ದೆ : ದೇಶದಲ್ಲಿ ಏನೋ ಒಂದು ಇಂದಿರಾ ಗಾಳಿ ಎಂತ ಎದ್ದುಬಿಟ್ಟಿದೆ ಅದರಿಂದ ಚುನಾವಣೆಗಳೆಲ್ಲೆಲ್ಲಾ ಹೀಗೆ ಆಗುತ್ತಿದೆ ಎಂದು ಜನರು ಹೇಳುತ್ತಿದ್ದರು. ಅಂಥ ಒಂದು ಇಂದಿರಾಗಾಳಿ ದೇಶದಲ್ಲಿ ಏನೇ ಎದ್ದಿದ್ದಾಗ್ಗೂ ನಾವು ಇತ್ತ ಕಡೆ ಇರತಕ್ಕ 48 ಜನರು ಮಾತ್ರ ಚುನಾವಣೆಯಲ್ಲಿ ಗೆದ್ದು ಬಂದಂಥ ಗಂಡಸರಾಗಿದ್ದೇವೆ. ಇನ್ನುಳಿದ ನಾಲ್ಕು ಜನರ ಪೈಕಿ ಶ್ರೀ ಎಂ. ಎಸ್. ಕೃಷ್ಣನ್ ಮಗೈರೆಯವರು (Partly Men) 'ಪಾರ್ಟ್ಲಿ', ಅದ್ದರಿಂದ ಅವರನ್ನು ಇದರಲ್ಲಿ ಸೇರಿಸಿರುವುದಿಲ್ಲ. ಇಂಥ ಒಂದು ದುರಂತವಾದ ಗಾಳಿ ಎದ್ದಿದ್ದಾಗ್ಗೂ ಶ್ರೀಮಾನ್ ಬಸವಲಿಂಗಪ್ಪನವರು ಅವರು ಮಂತ್ರಿಗಳೂ ಆಗ ಆಗಿರಲಿಲ್ಲ ಮತ್ತು ಸಾಮಾನ್ಯ ಪದನ್ಯರೂ ಕೂಡ ಆಗಿರಲಿಲ್ಲ. ಅವರೂ ಮತ್ತು ರಾಮಮನೋಹರ್ ಮತ್ತು ಅನಂತಕೃಷ್ಣ ಇವರೆಲ್ಲಾ ನನಗೆ ತಿಂಡಿಯನ್ನು ಕೊಡಿಸಿ ಹೆಸರುಘಟ್ಟದ ಹತ್ತಿರ ಕರೆದುಕೊಂಡು ಹೋಗಿ ನನ್ನನ್ನು ಅವರ ಪಾರ್ಟಿಗೆ ಸೇರಬೇಕೆಂದು ಕೇಳಿದರು.....

(ಸಭೆಯಲ್ಲಿ ಚಪ್ಪಾಳೆ)

ಅಧ್ಯಕ್ಷರು.—ಸಭೆಯಲ್ಲಿ ಹೀಗೆ ಚಪ್ಪಾಳೆ ಹಾಕತಕ್ಕದ್ದು ಇಲ್ಲಿಯ ಸಂಪ್ರದಾಯವಲ್ಲ. ಆದುದರಿಂದ ಇನ್ನು ಮುಂದೆ ಯಾರೇ ಆಗಲಿ ಪ್ರೇಕ್ಷಕರಾಗಲಿ—ಮಾನ್ಯ ಸದಸ್ಯರುಗಳಾಗಲೀ ಯಾರೂ ಚಪ್ಪಾಳೆ ಹಾಕಬಾರದೆಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಈ ಹಿಂದೆ ಇಲ್ಲಿ ಸಭೆ ನಡೆಯುತ್ತಿದ್ದ ಕಾಲಕ್ಕೆ ಶ್ರೀಮಾನ್ ಎಚ್. ಎಂ. ಚನ್ನಬಸಪ್ಪನವರೂ ಮತ್ತು ಶ್ರೀಮಾನ್ ಎಚ್. ಸಿದ್ಧವೀರಪ್ಪನವರೂ ಇಲ್ಲಿ ಹೋರಾಟ ಮಾಡಿ ತಮ್ಮಲ್ಲಿದ್ದ ಶಸ್ತ್ರಾಸ್ತ್ರಗಳನ್ನೆಲ್ಲಾ ಪ್ರಯೋಗ ಮಾಡಿ ಆ ದಿವಸ ಅಧಿಕಾರದಲ್ಲಿದ್ದ ಸರ್ಕಾರವನ್ನು ಉರುಳಿಸಿದರು. ಆದರೆ ನಾನಾ ದಿವಸ ಭಾವಿಸಿದ್ದೆ ಇವರು ರಾಜ್ಯದಲ್ಲಿ ಬಡಜನತೆಗೆ ಉದ್ಧಾರವಾಗುವಂಥ ಒಂದು ಉತ್ತಮ ಆಡಳಿತವುಳ್ಳ ಸರ್ಕಾರವನ್ನು ತರುತ್ತಾರೆ ಎಂದು. ಆದರೆ ಈ ದಿವಸ ಆ ನನ್ನ ನಿರೀಕ್ಷಣೆಗಳೆಲ್ಲಾ ಕತ್ತು ಹೋಗಿರುವುದಲ್ಲದೆ ಅಂಥ ನಿರೀಕ್ಷಣೆಗಳಿದ್ದ ಅಡಿಗಲ್ಲು ಸಹ ಕತ್ತು ಹೋಗಿದೆ. ಅಂತೆಯೇ ಅವರಿಗಿದ್ದ ಅಡಿಗಲ್ಲೂ ಸಹ ಕತ್ತು ಹೋಗಿ ಈ ದಿವಸ ಅವರಿಗೆ ಈ ಮಂತ್ರಿಮಂಡಲದಲ್ಲಿ ಸಿಕ್ಕಿರತಕ್ಕದ್ದಾರೂ ಏನು ? ಒಬ್ಬರಿಗೆ ಜನಕ್ಕೆ ಡುಚ್ಚತಕ್ಕ ಒಂದು ಸೂಜಿ, ಮತ್ತೊಬ್ಬರಿಗೆ ಕಟ್ಟಡಗಳಿಗೆ ಸುಣ್ಣ ಬಣ್ಣ ಹೊಡೆಯುವುದು ಮತ್ತು ಸಣ್ಣ ಕೆರೆಗಳ ಕಟ್ಟೆಗಳ ಕಾವಾಗಾರಿ. ಇವರಿಬ್ಬರೂ ವಯೋವೃದ್ಧರು. ಸರ್ಕಾರಗಳನ್ನು ಉರುಳಿಸತಕ್ಕಂಥ ಎಲ್ಲ ವಿದ್ಯೆಗಳನ್ನು ತಿಳಿದಂಥವರು. ಇಂಥ ಈ ಭೀಷ್ಮರುಗಳಿಬ್ಬರಿಗೂ ಈ ಮಂತ್ರಿಮಂಡಲದಲ್ಲಿ ಇಂಥ ಒಂದು ದುರ್ಗತಿ ಬರಬಾರದಾಗಿತ್ತು. ಈಗಲಾದರೂ ಸರಿ, ಇನ್ನು 6 ತಿಂಗಳಲ್ಲಾದರೂ ಸರಿಯೇ ಆ ನಿಮ್ಮ ಸರ್ಕಾರವನ್ನು ಉರುಳಿಸಿ ಇತ್ತಕಡೆಗೆ ಬನ್ನಿ ಆಗ ನಿಮಗೇನೇನೇ ನಾವು ಆ ಹೊಸ ಸರ್ಕಾರದಲ್ಲಿ ಮುಖ್ಯಮಂತ್ರಿಗಳ ಸ್ಥಾನವನ್ನು ಕೊಡುತ್ತೇವೆ. ಹಾಗೆ ಶ್ರೀ ಎಚ್, ಎಂ. ಚನ್ನಬಸಪ್ಪನವರಿಗೆ ಕೊಟ್ಟರತಕ್ಕ ಸ್ಥಾನವನ್ನು ನೋಡಿದರೂ ನನಗೆ ಅವರ ಬಗ್ಗೆ ಬಹಳ ಅನುಕಂಪ ಹಾಗೂ ದುಃಖವಾಗುತ್ತದೆ. ರಾಜ್ಯದಲ್ಲಿ ಹಗಲೂ ರಾತ್ರಿ ರಾಜಕೀಯ ಹೊರಾಟ

(ಶ್ರೀ ವಾಟಾಳ್ ನಾಗರಾಜ್)

ವನ್ನು ನಡೆಸಿ ರಾಜ್ಯದಲ್ಲೆಲ್ಲಾ ತಿರುಗಿ ಚುನಾವಣೆಗಳಲ್ಲಿ ಎಷ್ಟು ಕಷ್ಟ ಪಟ್ಟರು ? ನಾನು ಶ್ರೀ ಚನ್ನಬಸಪ್ಪನವರನ್ನು ನನ್ನ ಬಾಲ್ಯದಿಂದಲೂ ಬಲ್ಲೆ. ಅವರು ಶ್ರೀ ಕೆ. ಹನುಮಂತಯ್ಯನವರ ಸರ್ಕಾರವಿದ್ದಾಗ ಕರ್ನಾಟಕದ ಹೀರೋ ಎನಿಸಿಕೊಂಡಿದ್ದರು. ಅಂಥವರಿಗೆ ಈ ದಿವನ ಅವರ ರಕ್ತ ಏಕೆ ಇಷ್ಟು ಸಪ್ಪೆಯಾಯಿತು ? ಹಿಂದೆ ಇದ್ದ ಆ ಸರ್ಕಾರವನ್ನು ಉರುಳಿಸಿದ್ದಾದರೂ ಏಕೆ ? ನೀವು ಗಳಿಸಿದ ಪುರುಷಾರ್ಥವಾದರೂ ಏನು ? ನಿಮಗೆ ಒಪ್ಪಿಗೆಯಾಗುವಂಥ ಒಂದು ಸರ್ಕಾರವನ್ನು ರಚಿಸೋಣ ಎಂಬ ಒಂದು ದೊಡ್ಡ ಆಸೆ ನಿಮ್ಮಲ್ಲಿದ್ದಿರಬೇಕು. ಶ್ರೀಮಾನ್ ಸಿದ್ದವೀರಪ್ಪನವರಿಗೆ ಮತ್ತು ಶ್ರೀಮಾನ್ ಚನ್ನಬಸಪ್ಪನವರಿಗೂ ಒಂದು ಉತ್ತಮ ಸ್ಥಾನ ಮಂತ್ರಿ ಮಂಡಲದಲ್ಲಿ ದೊರೆಯಬಹುದು ಆದರಿಂದ ರಾಜ್ಯ ಉದ್ಧಾರವಾಗಬಹುದು ಎಂದು ನಾನು ತಿಳಿದಿದ್ದೆ. ಆದರೆ ಈಗ ಸಭೆಯಲ್ಲಿ ವಾಟಾಳ್ ನಾಗರಾಜು ಏಕಕ್ಕೆ ಈ ವಿಷಯಗಳನ್ನೆಲ್ಲಾ ಹೇಳುತ್ತಿದ್ದಾನೆ, ನಮ್ಮನ್ನು ಗುಟ್ಟಾಗಿ ಹೊರಗಡೆಗೆ ಕರೆದು ಹೇಳಬಾರದಾಗಿತ್ತೇ ಎಂದು ಅವರು ನನ್ನನ್ನು ಕೇಳಬಹುದು. ಆದರೆ ನಾನು ಹಾಗೆ ಅವರಿಗೆ ಗುಟ್ಟಾಗಿ ಹೇಳುವುದರ ಬದಲು ಇಡೀ ರಾಜ್ಯವೇ ಅವರ ಪರಿಸ್ಥಿತಿ ಇಂದು ಏನಾಗಿದೆ ಎಂಬುದನ್ನು ಅರಿತುಕೊಳ್ಳಲಿ ಎಂದು ನಾನು ಈ ವಿಷಯವನ್ನು ಹೀಗೆ ಬಹಿರಂಗವಾಗೇ ಹೇಳುತ್ತಿದ್ದೇನೆ, ಇದೇ ಅವರುಗಳೆಲ್ಲರೂ ಇದೇ ಸ್ಥಾನದಲ್ಲಿ ಕುಳಿತು ಅಂದರೆ ವಿರೋಧಪಕ್ಷದ ಸ್ಥಾನದಲ್ಲಿ ಕುಳಿತು ಅವರು ಆಗಿದ್ದ ಸರ್ಕಾರಕ್ಕೆ ಏನೆಂದು ಹೇಳುತ್ತಿದ್ದರು ? ನಾವು ನಿಮ್ಮ ಸರ್ಕಾರದ ನಾಡಿಗಳನ್ನೆಲ್ಲಾ ಬಿಗಿ ಹಿಡಿದಿದ್ದೇವೆ, ಆ ನಿಮ್ಮ ನಾಡಿಗಳನ್ನೆಲ್ಲಾ ಅರ್ಥಾಡಿಸುತ್ತಿದ್ದೇವೆ ಎಂದು ಹೇಳುತ್ತಿದ್ದ ಆ ಶ್ರೀಮಾನ್ ಚನ್ನಬಸಪ್ಪನವರ ಸ್ಥಿತಿ ಇಂದು ಏನಾಗಿದೆ !

Sri D. B. KALMANKAR.—I rise on a Point of Order. Whatever Mr. Vatal Nagaraj is speaking is not pertaining to the budget. It is something which is irrelevant, irresponsible and nothing to do with the Budget. Let him make comments on the Budget.

ಶ್ರೀ ವಾಟಾಳ್ ನಾಗರಾಜ್.—ಹಿಂದೆ ಶ್ರೀ ಕಲ್ಮನ್‌ಕರ್ ಅವರು ಇತ್ತಕಡೆ ಇದ್ದಾಗ ನನ್ನ ಪರವಾಗಿ ಮಾತನಾಡುತ್ತಿದ್ದರು. ಈಗ ಅತ್ತ ಕಡೆ ಸೇರಿ ನನಗೆ ವಿರೋಧವಾಗಿ ಮಾತನಾಡುತ್ತಿದ್ದಾರೆ. ಅವರೇನು ಒಂದು ಭವ್ಯವಾದ ರಾಷ್ಟ್ರವನ್ನು ಕಟ್ಟುವುದಕ್ಕಾಗಿ ಆ ಸ್ಥಾನದಲ್ಲಿ ಕುಳಿತರು ? ಅವರಿಗಾದರೂ ಆ ಮಂತ್ರಿಮಂಡಲದಲ್ಲಿ ಏನಂಥ ಒಂದು ಅಭೂತಪೂರ್ವವಾದ ಸ್ಥಾನಸಿಕ್ಕಿದೆ ? ಅಂಥ ಒಂದು ಸ್ಥಾನ ಗಳಿಸಿಕೊಂಡು ಇನ್ನೂ ಎಷ್ಟು ದಿನಗಳು ಬದುಕಬೇಕು ಎಂದಿದ್ದಾರೆ ? ಈ ಸ್ಥಾನದಲ್ಲದ್ದವರು ಇದನ್ನು ಬಿಟ್ಟು ಅತ್ತ ಕಡೆಗೆ ಏತಕ್ಕೆ ಹೋದರು ? ಅಲ್ಲಿ ಯಾರನ್ನು ಉದ್ಧಾರ ಮಾಡುವುದಕ್ಕೆ ಹೋದರು ? ಅವರ ಇಂದಿನ ಬಡ್ಡಿಟ್ಟಿನಿಂದ ದೇಶಕ್ಕೇನು ಉದ್ಧಾರವಾಗುತ್ತೆ ? ಜನತೆಯನ್ನು ಏನು ಉದ್ಧಾರ ಮಾಡಿದ್ದೀರಿ ? ಯಾವ ಜನತೆಗೆ ಹೊಟ್ಟೆಗೆ ಇಲ್ಲ, ಬಟ್ಟೆಗೆ ಇಲ್ಲ, ಎನ್ನತಕ್ಕವರಿಗೆ ನೆರವು ಏನು ಕೊಟ್ಟಿದ್ದೀರಿ ? ಬರೀ ಘೋಷಣೆಗಳನ್ನು ಮಾಡಿ ಜನ ಸಾಮಾನ್ಯರನ್ನು ಮೋಸಗೊಳಿಸಿ, ಮರುಳುಗೊಳಿಸಿ 22 ಜನ ಮಂತ್ರಿಗಳು ಇಲ್ಲಿ ಕೂತಿದ್ದೀರಿ. ಭವ್ಯವಾದ ಕನ್ನಡನಾಡು ಶ್ರೀಮತಿ ಇಂದಿರಾಗಾಂಧಿಯವರಿಗೆ ಸಂಪೂರ್ಣ ಬೆಂಬಲ ಕೊಟ್ಟ್ದಿರ ಪರಿಣಾಮವಾಗಿ ಪಾರ್ಲಮೆಂಟಿನವರೆಗೂ ಹೋದಿರಿ. ನಮ್ಮ ರಾಜ್ಯದಲ್ಲಿ ಈ ಸಭೆಯಲ್ಲಿ ನಿಮ್ಮ ಸದಸ್ಯರ ಸಂಖ್ಯೆ 165ಕ್ಕೆ ಇಳಿದಿದೆ. ನಿಮ್ಮ ಚುನಾವಣೆಯ ತಂತ್ರ ಏನು ? ನನ್ನ ಕ್ಷೇತ್ರದಲ್ಲಿ ಏನು ಗುಂಡಾಗಿರಿ ನಡೆಯಿತು ಎಂಬುದು ನನಗೆ ಗೊತ್ತಿದೆ. 10 ಸಾವಿರ ಸೀರೆಗಳನ್ನು ಒಬ್ಬರು ಒಂದೇ ರಾತ್ರಿಯಲ್ಲಿ ಮನೆಮನೆಗೂ ಹಂಚಿದರು, ಹೀಗಾದರೆ ನಮ್ಮಂತಹವರು ಏನು ಬದುಕಬೇಕು ? ಚುನಾವಣೆ ಸಂದರ್ಭದಲ್ಲಿ ನಮ್ಮ ಗತಿ ಏನು ? ಯಾವ ದೃಷ್ಟಿಯಿಂದ ನಾವು ಗೆದ್ದು ಬರಬೇಕು ? ಶ್ರೀ ಚನ್ನಬಸಪ್ಪನವರಿಗೆ ಮತ್ತು ಸಿದ್ಧವೀರಪ್ಪನವರಿಗೆ ವಾಟಾಳ್ ನಾಗರಾಜ್ ಗೆದ್ದು ಬರಬೇಕೆಂದು ಉದ್ದೇಶ ಇದೆ. ಭೂಮಿಯಲ್ಲಿ ಕೊಳಲುತ್ತಿರುವ ಬಡಜನರ ಬಗ್ಗೆ ನಿಮ್ಮಿಂದ ಬರುವ ಘೋಷಣೆಗಳನ್ನು ಉಪ್ಪು ಖಾರ ಹಾಕಿ ನೆಕ್ಕಿ ಬೇಕಾದಂತಹ ಸಮಯ ಬಂದಿದೆ. ನಿಮ್ಮಿಂದ ನಮಾಜದ ಭದ್ರತೆ ಆಗುತ್ತದೆಯೇ ? "ಅಲ್ಲಿ ನಲ್ಲುವರು ಇಲ್ಲಿಯೂ ನಲ್ಲುವರಯ್ಯಾ, ಅಲ್ಲಿ ನಲ್ಲದವರು ಇಲ್ಲಿಯೂ ನಲ್ಲರಯ್ಯಾ" ಎಂದು ಬನವಣ್ಣನವರು ಹೇಳಿದ್ದಾರೆ. ಅದರಂತೆ ಅಲ್ಲಿ ನಲ್ಲುವರು, ನಮ್ಮಲ್ಲೂ ನಲ್ಲುವರು ಅವರೇ ನೀವು, ಬೇರೆ ಏನೂ ಅಲ್ಲ. ಇದೊಂದು ನಾಟಕ, ತುಮಕೂರು ಕಂಪನಿ ಮುಚ್ಚಿಹೋಯಿತು. ಹಾಸನದಲ್ಲಿ ಹೊಸ ಕಂಪನಿ ತೆಗೆದರು. ಅಲ್ಲಿ ಶ್ರೀರಾಮಚಂದ್ರನ ಪಾತ್ರ ಮಾಡಿದವರು ಇವರೇ, ಶರೀರ ಒಂದೇ, ಇಲ್ಲಿ ರಾವಣನ ದರ್ಬಾರು ಮಾಡುತ್ತಿದ್ದಾರೆ.

ಯುವಕರಿಗೆ ಮಂತ್ರಿಮಂಡದದಲ್ಲಿ ಸ್ಥಾನ ಕೊಟ್ಟಿದ್ದಾರೆ ಅವರು ಹೊಸದಾಗಿ ಬಂದಿರುವುದರಿಂದ ಅವರಿಗೆ ನಿಮ್ಮ ವಿಷಯ ಗೊತ್ತಿಲ್ಲ ಅವರ ಬಗ್ಗೆ ನನ್ನ ವಾದ ಏನೂ ಇಲ್ಲ. ಅವರ ಪ್ಯೂಕಿ ದೇವೇಂದ್ರಪ್ಪ ಫಾಳಪ್ಪ ಒಬ್ಬರು.

2-00 P. M.

Sri D. B. KALMANKAR. —Sir, I rise to a point of order. The Hon Member Sri Vatal Nagaraj is saying that the new members who have become Ministers do not know anything about the elders who are in the ministry. He is making certain allegations against them which are derogatory to the dignity of the House. So, my submission is that he may be directed not to make such allegations and to confine himself to the points pertaining to the budget.

ಅಧ್ಯಕ್ಷರು.—ನಮಗೆಲ್ಲಾ ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಹೊಸಬರು ಅಲ್ಲ. ಅವರ ಭಾಷಣ ಹೇಗೆ ಇರುತ್ತದೆ ಎನ್ನುವುದು ನಮಗೆ ಗೊತ್ತು. ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ ಇನ್ನು ಇಪ್ಪರರ್ಲೆ ಅವರ ಭಾಷಣ ಮುಗಿಯುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷಿಣಿಯವರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ. ಮಾರ್ಚ್ 31, 1971 ರಂದು ಇದ್ದ ಓವರ್ ಡ್ರಾಫ್ಟ್ 30.38 ಕೋಟಿ ರೂಪಾಯಿಗಳು, ಒಟ್ಟು ಸಾಲದ ಹೊಣೆ 427.73 ಕೋಟಿ ರೂಪಾಯಿ ಅಂದಾಗ, 3 ಕೋಟಿ ಜನಕ್ಕೆ ಲೆಕ್ಕ ಹಾಕಿಕೊಂಡರೆ, ಒಬ್ಬರಿಗೆ 142 ರೂಪಾಯಿ ಸಾಲವನ್ನು ತಂದಿಟ್ಟಿದ್ದಾರೆ. ಎರಡೂವರೆ ಕೋಟಿ ಜನ ತೆಗೆದು ಕೊಂಡರೆ ಒಬ್ಬರಿಗೆ 170 ರೂಪಾಯಿ ಸಾಲ ಆಗುತ್ತದೆ. ಕೊನೆಯವರೆಗೂ ಈ ರಾಜ್ಯದಲ್ಲಿ ಸಾಲವಂತರನ್ನಾಗಿ ನಮ್ಮನ್ನು ಮಾಡಿ ಸಾಲದ ಹೊರೆಯನ್ನು ಹೊರುವಂತೆ ಮಾಡಿದ್ದೀರಿ. ಇದೇ ಸಭೆಯಲ್ಲ ಒಬ್ಬರು ವ್ಯಂಗವಾಗಿ ಹೇಳುತ್ತಾ ಇದ್ದರು. ಇಡೀ ಕರ್ನಾಟಕದ ಜನತೆಯನ್ನು ಬಡ್ಡಿ ಕೊಡುವ ಬಡ್ಡಿಮಕ್ಕಳನ್ನಾಗಿ ಮಾಡಿದ್ದಾರೆ ಎಂದು. ಅದೇ ಧಾಟಿಯಲ್ಲ ತಾವು ಹೋಗುತ್ತಿದ್ದೀರಿ. ಕೇಂದ್ರದಿಂದ ನಿಮಗೆ ಯಾವ ಯಾವ ಸೌಲಭ್ಯ ಬಂದಿದೆ, ಏನನ್ನು ತರುವುದಕ್ಕೆ ನಿಮಗೆ ಧೈರ್ಯ ಇದೆ ? ನಿಮಗೆ ಧೈರ್ಯವಿಲ್ಲ ಎನ್ನುವುದಕ್ಕೆ ಒಂದು ನಿದರ್ಶನ ಕೊಡುತ್ತೇನೆ, ; ಮುಖ್ಯಮಂತ್ರಿಗಳು ಚುನಾವಣೆ ನಡೆಸುವ ಸಂದರ್ಭದಲ್ಲಿ ಇಂದಿರಾ ಗಾಂಧಿಯವರ ಮಾತು ಇಲ್ಲದೆ ಚುನಾವಣೆ ನಡೆಸುವುದಕ್ಕೆ ಸಾಧ್ಯವಿಲ್ಲ ಅಂದಮೇಲೆ, ನಮ್ಮ ರಾಜ್ಯಕ್ಕೆ ಗಂಡಾಂತರ ಬಂದಾಗ ಕೇಂದ್ರದಲ್ಲಿ ಇಂದಿರಾಗಾಂಧಿಯವರ ಮುಂದೆ ನಿಂತು ದಿಟ್ಟತನದಿಂದ ರಾಜ್ಯಕ್ಕೆ ಅನ್ಯಾಯವಾಗಿದೆ, ಕೊಟ್ಟೇ ಕೊಡಬೇಕು ಎಂದು ಹೇಳುವ ಧೈರ್ಯ ನಿಮ್ಮಲ್ಲಿ ಎಷ್ಟು ಜನಕ್ಕೆ ಇದೆಯೆಂದು ಕೇಳುತ್ತೇನೆ. ಶ್ರೀಮಾನ್ ಚನ್ನಬಸಪ್ಪನವರಾಗಲಿ, ಶ್ರೀಮಾನ್ ಹೊರ್ಪಡೆಯವರಾಗಲಿ, ಶ್ರೀಮಾನ್ ಸಿದ್ದ ವೀರಪ್ಪನವರಾಗಲಿ, ಪಕ್ಕದಲ್ಲಿ ಕೂತಿರತಕ್ಕಂಥ ಬನವಲಂಗಪ್ಪನವರಾಗಲೀ, ನಮ್ಮ ರಾಜ್ಯಕ್ಕೆ ಅನ್ಯಾಯವಾಗಿರುವಾಗ, ಆ ಅನ್ಯಾಯವನ್ನು ತಪ್ಪಿಸಲಿಕ್ಕೆ, ಧೈರ್ಯದಿಂದ ಶ್ರೀಮತಿ ಇಂದಿರಾ ಗಾಂಧಿಯವರ ಎದುರು ನಿಂತು ಕೇಳತಕ್ಕ ಶಕ್ತಿ ಇದೆಯೆ ! ಶ್ರೀಮತಿ ಇಂದಿರಾಗಾಳಿಯಿಂದ ಗೆದ್ದು ಬಂದಿರುವ ನಿಮಗೆ ಶಕ್ತಿ ಇಲ್ಲ. ಈ ರಾಜ್ಯದಲ್ಲಿ ನೀವು ಒಂದು ಹೊಸ ಸೋಗನ್ನು ಹಾಕಿಕೊಂಡು ರಾಜ್ಯಭಾರ ಮಾಡುವುದಕ್ಕೆ ಹೊರಟಿದ್ದೀರಿ. ಚುನಾವಣೆ ಸಂದರ್ಭದಲ್ಲಿ ನೀವು ಜನಸಾಮಾನ್ಯರಿಗೆ ಏನು ಆಶ್ವಾಸನೆಯನ್ನು ಕೊಟ್ಟಿದ್ದೀರಿ, ಆ ಆಶ್ವಾಸನೆಯನ್ನು ಪೂರ್ತಿಸದಿದ್ದರೆ ಅದು ಬಹುಶಃ ಎಲ್ಲಿಗೆ ಹೋಗುತ್ತದೆ ಎಂದರೆ, ರಕ್ತ ಕ್ರಾಂತಿಯಾಗಿ ರಸ್ತೆಯಲ್ಲಿ, ತಲೆಗಳು ಉರುಳುವ ಕಾಲ ಬಂದೀತು ಎಂದು ಶ್ರೀಮಾನ್ ಬನವಲಿಂಗಪ್ಪನವರಿಗೆ ಎಚ್ಚರಿಕೆಯ ಮಾತನ್ನು ಹೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಹೇಳಬೇಕಾದನ್ನು ನನ್ನ ಮುಖಾಂತರ ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್.—ಈ ದೇಶದಲ್ಲಿ ಚುನಾವಣೆ ನಡೆದಾಗ ನೀವು ಸಮಾಜವಾದಿಗಳ ಗುಂಪು, ಭವ್ಯವಾದ ಸಮಾಜ ಕಟ್ಟುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಸಮಾಜವಾದಿಗಳು ಎಂದರೆ ಅದರ ಅರ್ಥವನ್ನು ನಮ್ಮ ಶ್ರೀಮಾನ್ ಕೆ. ಎಂ. ನಾಗಣ್ಣನವರು ಹೇಳುತ್ತಾರೆ ಸಾವಿರ ಎಕರೆ ಇರತಕ್ಕಂಥವರು ಸಮಾಜವಾದಿಗಳು ಎಂದು ಹೇಳಿದರು. ಶ್ರೀಮಾನ್ ಬದರೀ ನಾರಾಯಣ ಅವರು ಬಡವರೇ ? ಅವರು ಮಂತ್ರಿಯಾಗುವುದಕ್ಕೆ ಮುಂಚೆ ಎಷ್ಟು ಜನಕ್ಕೆ ಜಾಗ ಹಂಚಿದರು ? ತಮ್ಮಲ್ಲಿರತಕ್ಕ ದೊಡ್ಡ ದೊಡ್ಡ ಆಸ್ತಿಗಳನ್ನು ಎಷ್ಟು ಜನ ಮಂತ್ರಿಗಳು ಕೂಲ ಕಲಸಗಾರರಿಗೆ ಹಂಚಿದರು ? ಸಮಾಜವಾದವನ್ನು ಹೇಳಿ ಜನತೆಯನ್ನು ಮರುಳು ಮಾಡಿ ಜನತೆ

(ಶ್ರೀ ವಾಟಾಳ್ ನಾಗರಾಜ್)

ಯನ್ನು ಮೋಸದ ಕೂಪದಲ್ಲಿ ಬೀಳಿಸುತ್ತಿದ್ದೀರಿ. ಪಕ್ಕದಲ್ಲಿ ಕೂತಿರತಕ್ಕ ಎಸ್. ಎಂ. ಕೃಷ್ಣನ್ ರವರು ಶರಾವತಿಯು ಪ್ರಕರಣದ ಬಗ್ಗೆ ಈ ಸಭೆಯಲ್ಲಿ ಒಂದು ವಾತನ್ನು ಹೇಳಿದ್ದರು. ಶರಾವತಿ ಎಂ. ಎಸ್. ರಾಮಯ್ಯನವರ ಕರ್ಮಕಾಂಡ, ಕರ್ಮಕೂಪ ಎನ್ನುವ ಮಾತನ್ನು ಹೇಳಿದರು, ಬೇಕಾದರೆ ರೆಕಾರ್ಡ್ ತೆಗೆಸಿ ನೋಡಿ. ಎಸ್. ಎಂ. ಕೃಷ್ಣನ್ ರವರು ಇಲ್ಲಿದ್ದಾರೆ, ಅದೇ ಎಂ. ಎಸ್. ರಾಮಯ್ಯನವರ ಮಕ್ಕಳೂ ಇಲ್ಲಿ ಸದಸ್ಯರಾಗಿದ್ದಾರೆ.

ಪ್ರಜಾಪ್ರಭುತ್ವದ ದೀಪಿಗೆ ಹಿಡಿಯಿದ್ದ ಶ್ರೀ ಕೃಷ್ಣ ರವರು ಈ ಕತೆ ಕೂತಿದ್ದಾಗ ಅವರು ಎಷ್ಟು ಚೆನ್ನಾಗಿ ಭಾಷಣ ಮಾಡುತ್ತಾ ಇದ್ದರು ಎಂದರೆ ಶರಾವತಿ ಅಕ್ರಮದ ಬಗ್ಗೆ ಮಾಡಿದ ಭಾಷಣ ಜನ ಸಾಮಾನ್ಯರು ಒಪ್ಪುವಂಥಾ ರೀತಿಯಲ್ಲಿ ಇತ್ತು. ಎಲ್ಲರೂ ಅವರು ಮಾಡಿದ ಭಾಷಣ ನಿಜ ಎನ್ನುವ ರೀತಿಯಲ್ಲಿ ಇತ್ತು. ಎಲ್ಲರೂ ಜಯಕಾರ ಮಾಡಿದರು. ಅದೇ ಕೃಷ್ಣರವರು ಈಗ ಆ ಕಡೆ ಕುಳಿತಿದ್ದಾರೆ. ಅವರು ಈಪೊತ್ತು ನಮ್ಮ ರಾಜ್ಯದ ಮಂತ್ರಿಗಳಾಗಿದ್ದಾರೆ. ಅಧ್ಯಕ್ಷಣಿಯವರೇ ಅವರನ್ನು ಲೋಕಸಭೆಯಿಂದ ಇಲ್ಲಿಗೆ ಕರೆಸಿ ಮಂತ್ರಿ ಮಾಡತಕ್ಕಂಥ ಉದ್ದೇಶ ಏನು ಇತ್ತು? ನನಗೆ ಒಂದು ಅಪನಂಬಿಕೆ ಬಂದಿದೆ. ಏನೆಂದರೆ ಶ್ರೀಮಾನ್ ಅರಸುರವರಿಗೆ ಟಿಕೆಟ್ ಕೊಟ್ಟು ಅವರನ್ನು ಏನಾದರೂ ಅವರ ಪರವಾಗಿ ಇರಿಸತಕ್ಕಂಥ ಉದ್ದೇಶ ಇದೆಯೇ? ಇಲ್ಲಿ ಮಂತ್ರಿಗಳು ಆಗುವವರು ಯಾರೂ ಇರಲಿಲ್ಲವೇ? ಲೋಕಸಭೆಯಲ್ಲಿದ್ದ ಅವರ ಅಧಿಕಾರವನ್ನು ಬಿಡಿಸಿ ಈ ರಾಜ್ಯಕ್ಕೆ ಕರೆದು ಕೊಂಡು ಬರತಕ್ಕಂಥ ಉದ್ದೇಶ ಏನು ಇತ್ತು? ಲೋಕಸಭೆಯಲ್ಲೇ ನಮ್ಮ ರಾಜ್ಯದ ಪರವಾಗಿ ಅವರು ಸೇವೆ ಸಲ್ಲಿಸಬಹುದಾಗಿತ್ತು. ಇಲ್ಲಿಗೆ ಕರೆದುಕೊಂಡು ಬಂದು ಅತುರಾತುರವಾಗಿ ಅವರಿಗೆ ಮಂತ್ರಿ ಪದವಿ ಕೊಡಬೇಕಾದ ಉದ್ದೇಶ ಏನು? ಇಲ್ಲಿರುವ 165 ಜನರಲ್ಲಿ ಮಂತ್ರಿಯಾಗುವವರು ಯಾರೂ ಇರಲಿಲ್ಲವೇ? ಈಗ ಅವರು ರಾಜೀನಾಮೆ ಕೊಟ್ಟು ಇನ್ನೊಂದು ಚುನಾವಣೆಗೆ ನಿಲ್ಲಬೇಕು. ನಮ್ಮ ಜನರಿಗೆ ಹಗಲೂ ರಾತ್ರಿ ತೊಂದರೆ ಕೊಟ್ಟು ಇಂತಹ ಕೆಲಸ ಮಾಡುವಾರದು. ಶ್ರೀ ಕೃಷ್ಣರವರು ಲೋಕಸಭೆಯಲ್ಲಿ ಮಾತನಾಡುವುದಕ್ಕೆ, ನಮ್ಮ ರಾಜ್ಯದ ಪರ ಸೇವೆ ಮಾಡುವುದಕ್ಕೆ ಅನೇಕ ವಿಧವಾದ ಅವಕಾಶಗಳು ಇದ್ದವು. ಅದು ಬಿಟ್ಟು ಅವರನ್ನು ಇಲ್ಲಿಗೆ ಕರೆದು ಕೊಂಡು ಬಂದು ಮಂತ್ರಿ ಮಾಡುವ ಉದ್ದೇಶ ಏನು ಇತ್ತು? ಈ ಮಾತು ಜನಸಾಮಾನ್ಯರಲ್ಲಿ ಇದೆ. ನಾನು ನಂಬಿಲ್ಲ. ಜನಸಾಮಾನ್ಯರಲ್ಲಿ ಇರುವ ವಿಷಯ ನಾನು ಹೇಳಿದೆ. ಅಲ್ಲದೆ ಇನ್ನೊಂದು ಮುಖ್ಯವಾದ ವಿಷಯ ಏನೆಂದರೆ ಚುನಾವಣೆಯಲ್ಲಿ ಆಡಳಿತ ಪಕ್ಷದವರು 165 ಜನ ಹೇಗೆ ಗೆದ್ದರು ಎನ್ನುವ ಸಂಶಯ ಇದೆ. ನನಗೆ ನಿಮ್ಮ ಬಗ್ಗೆ ಅಭಿಮಾನ ಇದೆ. ಇದು ಜನಸಾಮಾನ್ಯರಲ್ಲಿ ಇರುವ ಸಂಶಯ. ಇದು ಜನಸಾಮಾನ್ಯರು ಹೇಳುವ ಮಾತು. ಇದರಲ್ಲಿ ಏನೋ ಆಗಿಹೋಗಿಬಿಟ್ಟಿದೆ ಎಂದು ಜನಸಾಮಾನ್ಯರು ಹೇಳುತ್ತಾರೆ. ಯಾವ ಮಂತ್ರಿ ಮುಖವನ್ನು ನೋಡಿಕೊಂಡು ಜನ ಓಟು ಕೊಟ್ಟಿದ್ದಾರೆ. ಅನೇಕ ಜನ ಓಬಿದವರೂ ಕೂಡ ತಮಗೆ ಓಟು ಕೊಟ್ಟಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಕಲ್ಕತ್ತಾದಲ್ಲಿ ಇಡೀ ವಿಶ್ವದ ಖ್ಯಾತಿ ಎಂದು ಹೆಸರು ಪಡೆದಿದ್ದ ಜ್ಯೋತಿ ಬಸು ಅವರು 33 ಸಾವಿರ ಓಟಿನಿಂದ ಸೋತರು. ಎನ್ನುವುದು ನಂಬುವಮಾತೇ. ಜನ ಸಮಾಜವಾದದ ಒಂದು ತತ್ವದ ಹೆಸರಿನಲ್ಲಿ ನಿಮಗೆ ಓಟು ಕೊಟ್ಟಿದ್ದರೆ, ಇದರ ಬಗ್ಗೆ ಒಂದು ನಂಬಿಕೆ ಬರಬೇಕು ಎನ್ನುವುದಾದರೆ ಚುನಾವಣೆ ನಡೆದುದರ ಬಗ್ಗೆ ಒಂದು ಉನ್ನತ ಮಟ್ಟದಲ್ಲಿ ತನಿಖೆಯನ್ನು ಅಧ್ಯಕ್ಷಣಿಯವರು ಮಾಡಿಸುವುದಕ್ಕೆ ಆ ಕಡೆಯವರು ಸಿದ್ಧರಾಗಿದ್ದಾರೆಯೇ ಎನ್ನುವ ಮಾತನ್ನು ನಾನು ಕೇಳಬೇಕಾಗಿದೆ. ಇದು ನನ್ನವಾದ ಅಲ್ಲದಿದ್ದರೂ ಇದು ಜನಸಾಮಾನ್ಯರ ಒಂದು ವಾದ. ಜನಸಾಮಾನ್ಯರ ಮನಸ್ಸಿನಲ್ಲಿ ಇರುವುದನ್ನು ನಾನು ಹೇಳುತ್ತಿದ್ದೇನೆ. ಇದಾದ ಮೇಲೆ ಎರ್ಲಾ ಕಡೆಯೂ ಚುನಾವಣೆ ಮುಗಿದ ಮೇರೆ ಎಣಿಕೆ ಇಟ್ಟಿದ್ದಾರೆ. ಎರ್ಲಾ ಪ್ರದೆಶದ್ದೂ ಒಂದು ಕಡೆ ಸೇರಿಸಿ ಎಣಿಕೆ ಮಾಡುತ್ತಾರೆ. ಇದರಲ್ಲಿ ನನಗೆ ಒಂದು ಶಂಕೆ ಬಂದಿರುವುದು ಒಂದು ಸ್ಥಳದಲ್ಲಿ 100 ಕ್ಕೆ 100 ಓಟು ನನಗೆ ಬರುತ್ತದೆ ಎಂದು ಇಟ್ಟುಕೊಂಡಿದ್ದರೆ ಅದು ಬೇರೆಯವರಿಗೆ ಬಂದಿರುತ್ತದೆ. ಇದನ್ನು ಕಂಡು ಹಿಡಿಯಲು ಯಾವ ಅನ್ವಯವೂ ಇಲ್ಲದೇ ಇರುವಂಥ ರೀತಿಯಲ್ಲಿ ಇಟ್ಟಿದ್ದಾರೆ. ನಿಮ್ಮ ಈ ಚುನಾವಣೆಯಲ್ಲಿ ಯಾರೂ ಯಾವ ಬಿರುಗಾಳಿಗೂ ಸಿಕ್ಕಲಿಲ್ಲ, ನುಂಟರ ಗಾಳಿಗೂ ಸಿಕ್ಕಲಿಲ್ಲ, ಯಾವ ಗಾಳಿಗೂ ಸಿಕ್ಕಲಿಲ್ಲ. ಈ ರಾಜ್ಯದ ಭವ್ಯ ಶಾಸನಸಭೆಗೆ 48 ಜನ ವಿರೋಧ ಪಕ್ಷದ ಧುರೀಣರು ಇಂದಿರಾಗಾಳಿ ಬೀಸುತ್ತಿದ್ದರೂ ಅದು ಎದುರಿಸಿ ಆರಿಸಿ ಬಂದಿದ್ದಾರೆ. ನಮ್ಮ ಜನ ಅವರಿಗೆ ಓಟು ಕೊಟ್ಟು ಇಲ್ಲಿಗೆ ಕಳುಹಿಸಿ ಕೊಟ್ಟಿದ್ದಾರೆ, ಅವರೇ ನಿಜವಾದ ಗಂಡಸರು. ನಿಮ್ಮ ಜನರು ತಮಗೆ ಹೊಡೆದರೂ ಕೂಡ ನಮಗೆ ಓಟು ಕೊಟ್ಟಿದ್ದಾರೆ, ನಮ್ಮ ಕನ್ನಡ ಜನತೆ ನಮಗೆ ಓಟು ಕೊಟ್ಟಿದ್ದಾರೆ ಎಂದು ಇಷ್ಟು ಹೇಳಿ ಅಧ್ಯಕ್ಷಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು :—ಮಾನ್ಯ ಮಂತ್ರಿಗಳಿಗೆ ಉತ್ತರ ಹೇಳಲು 1½ ಗಂಟೆ ಕಾಲ ಬೇಕಾಗುತ್ತದೆ. ಅದುದರಿಂದ 4½ ಗಂಟೆಗೆ ಚರ್ಚೆ ಮುಗಿಯ ಬೇಕಾಗಿರುವುದರಿಂದ ದಯವಿಟ್ಟು ಎಲ್ಲರೂ ಸೂಕ್ಷ್ಮವಾಗಿ ಮಾತನಾಡಬೇಕು ಎಂದು ನನ್ನ ಪ್ರಾರ್ಥನೆ.

ಶ್ರೀ ಕೆ. ಅರ್. ಶ್ರೀನಿವಾಸಲು ನಾಯ್ಡು (ಶಾಂತಿನಗರ).—ಮಾನ್ಯ ಅರ್ಥ ಸಚಿವರು ಮಂಡಿಸಿರುತಕ್ಕಂಥ ಆಯವ್ಯಯ ಪತ್ರವನ್ನು ಮತ್ತು ತಾತ್ಕಾಲಿಕ ಬೇಡಿಕೆಗಳನ್ನು ಹೃತ್ಪೂರ್ವಕವಾಗಿ ನಾನು ಸ್ವಾಗತಿಸುತ್ತೇನೆ. ಮತ್ತು ಇದೇ ಸಂದರ್ಭದಲ್ಲಿ ನಾನು ಕೆಲವು ಸಲಹೆಗಳನ್ನು ಕೊಡಲಚ್ಚಿಸುತ್ತೇನೆ. ಅವರು ಒಂದು ಕಡೆ ಈ ರೀತಿ ಹೇಳಿದ್ದಾರೆ. Financial policies will have to be clearly related to social and economic goals which have received such a massive mandate from the people ಎಂದು. ಇನ್ನೊಂದು ಕಡೆ It would be necessary to concentrate on schemes which directly benefit the weaker sections of society. The important thing is not only to spend, but to spend effectively and wisely. Effective implementation means more efficient and honest administration. ಎಂದು ಹೇಳಿದ್ದಾರೆ. ಇನ್ನೊಂದು ಕಡೆ to cut down waste, improve priorities and maximise development ಎಂದು ಹೇಳಿದ್ದಾರೆ. ಈ ಭಾಷಣದಲ್ಲಿ ವೀಕರ್ ಸೆಕ್ಷನ್ ಎನ್ನುವ ಪದವನ್ನು ಉಪಯೋಗಿಸಿದ್ದಾರೆ. ನನಗೆ ಬಹಳ ಸಂತೋಷವಾಯಿತು. ನಮ್ಮ ಸಮಾಜದಲ್ಲಿ ಯಾರು ವೀಕರ್ ಸೆಕ್ಷನ್ ಎನ್ನುವ ಪ್ರಶ್ನೆ ಹಾಗೆಯೇ ಉಳಿದಿದೆ. ಅವರು ಯಾರೇ ಇರಲಿ ಹಿಂದುಳಿದವರೇ ಇರಲಿ, ದುರ್ಬಲರೇ ಇರಲಿ ನನ್ನ ದೃಷ್ಟಿಯಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ ವಿದ್ಯಾಭ್ಯಾಸದಲ್ಲಿ ಮತ್ತು ರಾಜಕೀಯದಲ್ಲಿ ಹಿಂದುಳಿದಿದ್ದಾರೋ ಅವರೆಲ್ಲಾ ವೀಕರ್ ಸೆಕ್ಷನ್. ಏತಕ್ಕೆಂದರೆ ನಮ್ಮ ಅರ್ಥಿಕ ಸಚಿವರು ಮಂಡಿಸಿರುವಂಥ ಡಿಮ್ಯಾಂಡ್ ಏನು ಇದೆ ಅದು ಬಹಳ ಜನಕ್ಕೆ ಒಳ್ಳೆಯದು ಉಂಟಾಗುತ್ತದೆ. ತಮಗೆ ಗೊತ್ತಿದೆ "ಬಡವ ಬಲ್ಲಿಗನೆಂಬ ಹೋರಾಟ" ಎನ್ನುವುದು, ಇನ್ನೊಂದು ಮಾತಿನಲ್ಲಿ ಹೇಳುವುದಾದರೆ "ಹಣ ಎಂದರೆ ಹೆಣವೂ" ಬಾಯಿ ತೆಗೆಯುತ್ತದೆ ಎಂದು ಅರ್ಥ ಸಚಿವರು ಅವರ ವರದಿಯಲ್ಲಿಯೇ ಯಾವುದು ಎಂದು ಕೊಟ್ಟಿದ್ದಾರೆ. ಯಾವ ನಿರ್ದಿಷ್ಟವಾದ ಕಾರ್ಯ ಕ್ರಮಗಳನ್ನು ಹಾಕಿದರೂ ಕೂಡ ಹಣ ಇಲ್ಲದೆ ಯಾವುದೂ ಮಾಡುವುದಕ್ಕಾಗುವುದಿಲ್ಲ. ನನ್ಮಾನ್ಯ ಅಧ್ಯಕ್ಷಿಣಿಯವರೇ ಯಾವ ಯೋಜನೆಯನ್ನು ಹಾಕಿಕೊಂಡರೂ ಅದಕ್ಕೆ ಸರಿಯಾದ ಒಂದು ಯೋಜನೆ ಹಾಕಿಕೊಳ್ಳಬೇಕು. ಅದಕ್ಕೆ ನಮ್ಮ ಅರ್ಥ ಸಚಿವರು ಹೊಸಬರೇನೂ ಅಲ್ಲ. ಅವರೂ ಮೈಸೂರು ಸಂಸ್ಥಾನದವರೇ. ಸನ್ಮಾನ್ಯ ದಿವಂಗತ ಸರ್. ಎಂ. ವಿಶ್ವೇಶ್ವರಯ್ಯನವರು ಅದಕ್ಕೆ ಹಾದಿ ಹಾಕಿಕೊಟ್ಟಿದ್ದಾರೆ. ಆದುದರಿಂದ ಅವರ ಮಾದರಿಯನ್ನು ಅನುಸರಿಸಿ ಹಿಂದುಳಿದ ಜನಾಂಗಕ್ಕೆ ದುರ್ಬಲರಿಗೆ ಅವರಿಗೆ ಎಲ್ಲ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾದರೆ ಮುಖ್ಯವಾಗಿ ಇದರಲ್ಲಿ ಹಣಕಾಸಿನ ಸಚಿವರ ಪಾತ್ರ ದೊಡ್ಡದಾಗಿದೆ. ನಾನು ಅವರ ಭಾಷಣವನ್ನು ನೋಡಿದಂಥ ಕಾಲದಲ್ಲಿ ಸೋಷಿಯರ್ ವೆರ್‌ಫೇರ್ ಸ್ಕೀಮ್ಸ್‌ಗೆ 15ಕೋಟಿ ರೂಪಾಯಿ ಖರ್ಚಾಗುತ್ತದೆ ಎಂದು ಬರೆದಿದ್ದಾರೆ. ಈ ವಿಷಯ ಏತಕ್ಕೆ ಹೇಳುತ್ತಿದ್ದೇನೆ ಎಂದರೆ ನಮ್ಮ ಮಿತ್ರರೊಬ್ಬರು ಈಗತಾನೇ ಹೇಳಿದರು ಬಡವ ಬಲ್ಲಿಗರೆನ್ನದೆ, ಹಿಂದುಳಿದ ಜನರಿಗೆ, ದುರ್ಬಲರಿಗೆ ಇಂದಿರಾ ಗಾಂಧಿ ಪಕ್ಷ ಅಧಿಕಾರಕ್ಕೆ ಬಂದರೆ ರಾಮರಾಜ್ಯವಾಗುತ್ತದೆ ಎಂದು. ಮಾನ್ಯ ಸದಸ್ಯರು ಈಗತಾನೆ ಹೇಳಿದಂತೆ ಮಂತ್ರ, ತಂತ್ರ, ಯಾವುದೂ ಇಲ್ಲ. ಮೂರು ದಿವಸದಲ್ಲಿ ಏನುತಾನೆ ಮಾಡಲು ಸಾಧ್ಯ? ನಮ್ಮ ಅರ್ಥಿಕ ಸಚಿವರು ಇಂಥ ಬಜೆಟ್ಟನ್ನು ತಯಾರಿಸಿರುವುದು ಸಂತೋಷಕಾರಕವಾದ ವಿಷಯ. ಹೊಸ ತೆರಿಗೆ ಯಾವುದನ್ನೂ ಹಾಕಿಲ್ಲ. ಆದರೆ ಕೆಲವು ಕಾರ್ಯಗಳಿಗೆ ಹೆಚ್ಚು ಹಣ ಒದಗಿಸಬೇಕೆಂಬ ಆಸೆ ಇದೆ. ಏಕೆಂದರೆ ಹಣವಿಲ್ಲದೆ ಏನೂ ಮಾಡುವುದಕ್ಕಾಗುವುದಿಲ್ಲ. ಈಗ ಸಾಮಾನ್ಯವಾಗಿ ಹಿಂದುಳಿದ ಜನಾಂಗದಲ್ಲಿ ಎರಡು ಭಾಗವಿದೆ. ಬುದ್ಧಿ ಜೀವಿಗಳ ವರ್ಗವೊಂದು. ಇನ್ನೊಂದು ಶ್ರಮ ಜೀವಿಗಳ ವರ್ಗ. ಶ್ರಮಜೀವಿಗಳು ಹಿಂದುಳಿದಿದ್ದಾರೆ, ಅವರ ಆರ್ಥಿಕ ಪರಿಸ್ಥಿತಿ ಉತ್ತಮವಾಗ ಬೇಕು. ಬೆಂಗಳೂರಿನಲ್ಲಿ ಶ್ರಮಜೀವಿಗಳು ಬಹಳವಾಗಿದ್ದಾರೆ. ಪಟ್ಟಣ ಬೆಳೆದಿದೆ. ಅದಕ್ಕೆ ತಕ್ಕಂತೆ 39-40ರಲ್ಲಿ 3 ಲಕ್ಷ ಇದ್ದ ಅವರ ಸಂಖ್ಯೆ ಇಂದು 16-18 ಲಕ್ಷಗಳಿಗೇರಿದೆ. ಬಡವರು ಇಲ್ಲಿ ಬಂದು ಸೇರಿದ್ದಾರೆ. ಬೆಂಗಳೂರಿನಲ್ಲಿ ಸ್ಲಂ ಪ್ರದೇಶವಿದೆ. ನಿರ್ಗತಿಕರು ಈ ಪ್ರದೇಶದಲ್ಲಿ ಬಹಳ ವಾಸವಾಗಿದ್ದಾರೆ. ಬಸವನಗುಡಿ, ಚಾಮರಾಜಪೇಟೆ ಮುಂತಾದ ಪ್ರದೇಶಗಳಲ್ಲಿ ಅವರು ವಾಸವಾಗಿದ್ದಾರೆ. ಸಾಧಾರಣವಾಗಿ ತಮಗೆ ಗೊತ್ತಿರುವಹಾಗೆ ಮನುಷ್ಯನಿಗೆ ಐದು ಮುಖ್ಯವಾಗಿ ಬೇಕಾಗಿದೆ, ಊಟ, ವಸತಿ, ಮನೆ, ವಿದ್ಯಾಭ್ಯಾಸ ಮತ್ತು. ಆರೋಗ್ಯ. ಯಾವ ಸರಕಾರವೇ ಬರಲಿ ಈ 5 ಅಂಶಗಳ ಬಗ್ಗೆ ಕಾರ್ಯಕ್ರಮವಿರುವುದು. ಸರಕಾರ ಸಮಾಜವಾದವನ್ನು ಕಾರ್ಯ

(ಶ್ರೀ ಕೆ. ಆರ್. ಶ್ರೀನಿವಾಸಲು ನಾಯಿಡು)

ರೂಪಕ್ಕೆ ತರಲು ಒಪ್ಪಿದೆ. ಇಂದಿರಾಗಾಂಧಿಯವರು ಯಾವುದನ್ನು ಕಳೆದ ಹತ್ತು ತಿಂಗಳಿಂದ ಕಾರ್ಯರೂಪಕ್ಕೆ ತಂದಿದ್ದಾರೆ ಎಂಬುದು ಗೊತ್ತಾಗಿದೆ. ಅವರು ತಾವು ಘೋಷಿಸಿರುವಂತೆ ಸೂಕ್ತ ಕ್ರಮ ಕೈಗೊಳ್ಳುತ್ತಿದ್ದಾರೆ. ಹಿಂದುಳಿದ ಜನಾಂಗಕ್ಕೆ ಅನುಕೂಲವಾಗುವಂತೆ ನ್ಲಂ ಇಂಪ್ರೂವ್ ಮೆಂಟ್ ಬೋರ್ಡ್ ಒಂದನ್ನು ಮಾಡಬೇಕು. ವಸತಿಯ ಪ್ರಶ್ನೆ ನುಲಭವಾದುದಲ್ಲ, ಅದು ರಾಷ್ಟ್ರೀಯ ಪ್ರಶ್ನೆ. ಪ್ರತಿಯೊಬ್ಬರಿಗೂ ಮನೆ ಬೇಕು. ಇದಕ್ಕೆ ಹಣಕಾಸಿನ ಮಂತ್ರಿಗಳು ಸಂಬಂಧಪಟ್ಟ ಸ್ಕೀಂ ಸರಕಾರದ ಮುಂದಿಟ್ಟು ಹೆಚ್ಚು ಹಣ ಒದಗಿಸಬೇಕು. ಇದರ ಜೊತೆಗೆ ಕಾವೇರಿ ನೀರಿನ ಪ್ರಶ್ನೆಯಿದೆ. ಹಿಂದೆ ಹನುಮಂತಯ್ಯನವರಿದ್ದಾಗ ಕೂಡ ಜಾಗ್ರತೆ ತರುವುದಾಗಿ ಹೇಳಿದ್ದರು. ಸಾಧ್ಯವಾದಮಟ್ಟಿಗೆ ಜಾಗ್ರತೆ ಕಾವೇರಿ ನೀರನ್ನು ಬೆಂಗಳೂರಿಗೆ ಒದಗಿಸಬೇಕು. ಆರ್ಥಿಕ ನಚಿವರು ಇದಕ್ಕೆ ಹಣ ಒದಗಿಸಬೇಕು. ಹಾಗೆ ಮಾಡಿ ಕಾರ್ಯರೂಪಕ್ಕೆ ತರಬೇಕು. ಯಾವುದಕ್ಕೂ ಹಣ ಬೇಕು. ಇಲ್ಲದಿದ್ದರೆ ಸಾಧ್ಯವಿಲ್ಲ. ಸಾಧನಸಂಪತ್ತುಗಳ ಕಡೆ ಗಮನ ಕೊಟ್ಟರೆ ಹಣ ಒದಗಿಸಬಹುದು. ಇರುವ ಹಣವನ್ನು ಸರಿಯಾಗಿ ಉಪಯೋಗಮಾಡಬೇಕು. ಯಾವ ಸ್ಕೀಂ ಆಗಲಿ ಅದಕ್ಕೆ ಒದಗಿನುವ ಹಣದಲ್ಲಿ ಸೇಕಡ 60 ಭಾಗ ಮಾತ್ರ ಸರಿಯಾಗಿ ಖರ್ಚಾಗ ಬಹುದು, ಉಳಿದುದು ಲಂಚಕ್ಕೆ ಹೋಗುವುದು. ಅದನ್ನು ತಡೆಗಟ್ಟಬೇಕೆಂದು ನಲಹೆಮಾಡುತ್ತೇನೆ. ವಿಜರೆನ್ಸ್ ಸೆಲ್ ಎಂದಿರುವ ಹಾಗೆ ಫೈನಾನ್‌ಷಿಯರ್ ವಿಜರೆನ್ಸ್ ಸೆರ್ ಆಗಬೇಕು. ಪ್ರತಿಯೊಬ್ಬರೂ ನತ್ಯದಿಂದ ಕೆಲನ ಮಾಡುವುದಾಗಿ ಹೇಳುವರು. ಆದರೆ ಹಾಗೆ ಮಾಡುವುದಿಲ್ಲ. ಆಡಿಟ್ ಮಾಡುತ್ತಾರೆ ಎಂದು ಹೇಳಬಹುದು. ಅನೇಕ ನಂದರ್ಭಗಳಲ್ಲಿ ಚೆಕ್ಕ ಆಂಡ್ ಫೌಂಡ್ ಕರೆಕ್ಟ್ ಎಂದು ಹೇಳುವುದುಂಟು. ಆ ಕಾಲ ಹೋಯ್ತು. ಜನರು ವಿಶೇಷವಾಗಿ ಗಮನಿನುತ್ತಿದ್ದಾರೆ, ಕೆಲನ ಮಾಡುವುದು ಕಣ್ಣಿಗೆ ಕಾಣಬೇಕು, ತೃಪ್ತಿಕರವಾಗಿರಬೇಕು. ಜನರು ಇಂದಿರಾ ಗಾಂಧಿ ಯವರ ಹಿಂದಿದ್ದಾರೆ, ಜನರು ಎಚ್ಚೆತ್ತಿದ್ದಾರೆ. ಒಂದೇ ದಿವನದಲ್ಲಿ ಯೋಜನೆಗಳನ್ನು ಕಾರ್ಯ ರೂಪಕ್ಕೆ ತರುವುದಕ್ಕಾಗುವುದಿಲ್ಲ. ಜನರು ವಿದ್ಯಾವಂತರಾಗಬೇಕು, ಗೌರವದಿಂದ ಬಾಳುವುದನ್ನು ಕಲಯಬೇಕು, ಅರ್ಥ ಮಂತ್ರಿಗಳ ಪಾತ್ರ ಬಹಳ ಮುಖ್ಯವಾದುದು. ನಾರ್ವಜನಿಕರ ಹಣವನ್ನು ನದ್ವಿನಿಯೋಗಮಾಡಿ ಯೋಜನೆಗಳನ್ನು ಜಾಗ್ರತೆ ಕಾರ್ಯರೂಪಕ್ಕೆ ತರಬೇಕು. ಹಾಗೆ ಮಾಡಿದರೆ ಅನುಕೂಲವಾಗುವುದು ಎಂದು ಇಷ್ಟು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿನುತ್ತೇನೆ. ನಾನು ಕೊಟ್ಟ ಕೆಲವು ನಲಹೆಗಳನ್ನು ಕಾರ್ಯರೂಪಕ್ಕೆ ತರಬೇಕೆಂದು ಪ್ರಾರ್ಥಿನುತ್ತೇನೆ.

Sri B. B. SAYANAK (Belgaum).—Madam Speaker, Sir, at the outset, I congratulate the new Ministry headed by Sri Devaraja Urs in general and the new Finance Minister Sri Ghorapade in particular. Though I congratulated Sri Ghorapade as the Finance Minister, I strongly oppose the interim budget and the supplementary demands for grants labled by the hon'ble Minister for Finance before this august House. When my friends were sitting on this side as the opposition members, they were criticising the Veerendra Patil Ministry for not abolishing the land revenue. Sri Ghorapade who had spoken on budget against the abolition of land Revenue in this House, I request the Chief Minister Sri Devaraj Urs and his colleagues to forthwith abolish the land revenue. As regards the education, the primary education, the primary education has been made free and compulsory. But how many poor and downtrodden children are going to schools and what action has been taken by the Government against the erring parents of those children? The Marathi text books are not available in Belgaum market or in any market in Mysore State upto the examination of the students. You can just imagined the plight of the Marathi students in border area. I want to ask why they have started Marathi schools; better close them and start Kannada schools. If you are not in position to supply the Marathi text books, Another thing is, the

Marathi boys are not getting the jobs in Mysore State because they are Marathi. Not a single Marathi boy is a Sub Inspector or a Magistrate or a Judge of the Mysore High Court for the last 16 years. I therefore request the Mysore Government to solve the Mysore-Maharashtra boundary dispute which is pending for more than 16 years. We have fought the general elections on this issue four times successively. Inspite of the opposition by the Communist Candidate supported by Indira Congress which is a very powerfull party in India. We, Maharashtrians have defeated even the Jan Sangh sponsored candidate Swatantra, Muslim Leage, Independent and Congress Organision candidates. Jana Sangh, Swatantra and Muslim Leage parties lost there deposits also. I request, through you Madam, the Central Government and the Mysore Government to the solve this problem which is pending for more than 16 years. We have fought this election on the basis of language. I congratulate the Prime Minister because she has given a scope for Bangla Desh to come up as a free country. Bangla Desh has fought its election on the basis of language. The Prime Minister has given all support to this country. When they have fought the election on the basis of language and Bangali culture, I request Central Government that you must take this issue as a national issue and solve this Maharastra and Mysore border Dispute immediately which is pending for more than 16 years.

Regarding the Civil Hospital in Belgaum, there is only a big building, There are so many Doctors Nurses and Medical students. But there is no medicine at all. There is no drugs. There is no X-Ray plant. There is a deep X-Ray machine, but, no expert has been appointed. There is no cat-guts. There is no ambulance car. This is the situatiou in that Civil Hospital. I request you to give adequate quantity of medicine and all other facilities that are required to the Hospital.

Regarding Judiciary, Judiciary must be free and independent. But the Magistrates and Munisiffs are getting very meagre salary. If you want free and independent Judiciary, you must increase the salary of the Magistrates and Munisiffs. Judicial persons have no quarters in district places. I request the Mysore Government to provide them quarters.

Regarding voters list, though the Central Government had spent a lot over voters list, it is not a correct list. Such a wrong list has been followed in the General Election, The names of Marathi people are intentionly excluded. This is how the list is prepared. Now the Municipal election, Village Panchayat election and the Taluk Board election are going to take place. The voters list must be revised before these elections.

Regarding corruption, corruption is rampent in every walks of life. I think no country in the world has eradicated corruption completely. I request the Home Minister to take drastic action to

(SRI B. B. SAYANAK)

eradicate corruption. I further request the Government to solve the unemploymant problem of graduates so that the educated youths are employed. Otherwise there will be echaos and bloodshed in this state and India.

The Government have given permission to some private owners to run the buses on the routes nationalised. What is the result of it ? The Government buses are running empty so that MSRTC is running in a loss. I request the Government to stop the contract of the private owners' buses and give scope to the Government buses to earn huge profit.

The Finance Minister has stated that this budget contains no proposals for fresh taxation. This Ministry is a new Ministry and they want to please the voters and the public and that is why they have not taxed the general public. It is implied that the full budget will come in the month of June. The people will realised what sort of this Ministry is. There will be a heavy taxation on the public and I doubt that Mr. Ghorapade will not avoid the taxation on the public because he has to make up Rs. 30 crores which is in deficit. Effective implementation means more efficiency and honest administration. I very much doubt there is efficiency and honesty in administration in the State because there is corruption everywhere. The Ministers are policy makers and secretaries and executors of the policy. They are not executing the policies of the Government. You must also see that all the policies of the Government are implemented. With these words I conclude. Thank you.

†Smt. **WINNIFRED F. FERNANDES** (Coondapur).—Mr. Chairman Sir, at the outset I must congratulate the Finance Minister for giving us a tax free budget Firstly I speak on excise. Of-course every year you auction arrack, and toddy shops. These shops are being auctioned at Taluk level. By doing this, you are encouraging monopoly and individuals will have no opportunity to have their share. Therefore, I request the Government to see that these shops are auctioned on shop-wise basis so that individuals will have their share and also the Government will get more profit. The method that is being adopted now makes that rich richer and the common man will have no opportunity to have his share in the profits. I request the Government to instruct the concerned authorities to auction the shops on shop-wise basis.

I want to speak about the voters lists which were prepared during this Assembly Election. During the Parliamentary elections it was perfectly alright, but during Assembly elections, I can say that democracy was murdered. 30 per cent of the voters were deleted from the Voters' List. Red lines were drawn on each voter. Some of the Officials have played some mischeif. Some remuneration was given to

them for each deletion or correction—five paise or so that is what I came to understand; I do not know the correct figure. 30 percent of the voters were dropped. When the doors of the houses were locked they would say 'VASA ILLA'. Many instances came to my notice. Government should take drastic action against Govern nent officials who did this. An up-to-date list should be prepared. I request Government to take immediate action on this.

Thirdly, I want to say something about fisheries. I went through the grants for 71-72, no where is it mentioned about fisheries. So, may I think that Government want every citizen to be vegetarian ? Most of the people live on fishing.

Sri M. S. KRISHNAN.—Mr. Ghorpade does not want to fish in troubled waters.

Smt. WINIFRED FERNANDES.—I do not agree to that. So, I request the Government to see that a lumpsum grant is allotted for this fisheries Department, so that all the fishermen may get all the facilities required by them. Housing problem is great in these areas. Housing and rehabilitation schemes should be taken up for these fishermen. At least boats and nets should in future be given to the most deserving fishermen.

Then of course, we say that land should be distributed to the landless poor. I find in my place this is only in words and not in practice. Of course there were Committees for this in 1970. but within one year, they were abolished. Many thousands of applications are lying in the Revenue Department and I can say they are at a standstill ; no action has been taken. I requsst the Government to take drastic action on those responsible for this and to see that these applications are attended to and land is given to the deserving landless poor, immediately. This should be treated on a war footing, so that land may be distributed to these deserving poor They are like slaves in the eyes of the land owners. I cannot say they are tenants; they are slaves. If land is not given to them, slavery will continue.

Lastly, I want to say something about roads. There are many roads which are neglected. No pedestrians can walk on these roads. May I request the Chief Minister as also the Finance Minister to see that some repairs are taken up in respect of panchayat roads and some consolation is given to the public.

Then, one word about the food problem. Now of course, it is a bit satisfactory, but in the lean months, everything goes underground. So now itself I request the Government to take immediate action to see that some precautions are taken so that in the lean months food is supplied to the common man.

With these words, I thank the Chair for giving me an opportunity to express my views.

† Sri C. M. ARUMUGHAM (Kolar Gold Fields).—Madam Speaker, Please permit me to congratulate you on your election as Speaker of this august House. For the first time, you have permitted me to speak. I heard the Chief Ministers' speech felicitating you on your election. Having in view your wide experience for more than 15 years in this House and your experience of having travelled abroad in the United States, Asian and European countries including Japan, I can say that you have been properly placed as Speaker of this Assembly. Well madam, please permit me to say that having this experience in view, it would have been proper for our very progressive Chief Minister Mr. Devaraj Urs to have appointed you as a Cabinet Minister, if not as Deputy Chief Minister of the Government of Mysore. Your not having been appointed as a Minister has been compensated by your appointment as Speaker. Having in view the relationship of Mr. Devaraj Urs with our revered Prime Minister Mrs. Indira Gandhi all these years and he being the foremost leader of the Mysore State, he could have included a lady Member in his Cabinet. I do not know the reason for excluding you from the Cabinet. I feel that because you have become the Speaker, your attachment to the Congress has been detached. They can no more use your photograph or your poster for the election purposes as they have used the Prime Ministers posters during the General Election.

I will now confine myself to the budget. I will now say a few words about supplementary grants and if there is any time left over, I will talk about the interim budget also. These supplementary grants have been placed before us year after year all these 25 years by the Government, simply because there is provision under Article 205 of the Constitution for doing so. Mr. Ghorpade, who is an economic expert and who has studied in foreign countries, has not said anything about the exact reason why he is coming forward with these grants. He must avoid bringing forward supplementary demands. Either it is a defective budget or the estimates are not correct. The persons who have been preparing the budget all these 25 years, should have looked into this question and should have included this expenditure in the original budget instead of bringing supplementary demands every time. Sometimes, I feel it is a mockery when we see the explanations given for these supplementary demands. I may quote for instance Demand No. 29 on page 18 (c) Irrigation Commercial.Here it is said " The additional Grant is required for the expenditure on account of payment of arrears of Telephone Charges for three years.

Madam, you know that these telephone charges are payable every month or once in three months or six months. What is the meaning in not paying it for three years and coming before the House with a wonderful supplementary demand. Is this correct ? I do not know what our Hon'ble friend the Finance Minister has to say about it.

Another thing is relating to the expenditure of Rs. 38,000 which is stated to be required on account of encashment of leave by the Staff.

Was it not possible to foresee this item, Madam ? These items like salary, T.A. D.A.—they are routine affair.

Then there is an additional demand for Rs. 51,000 for T.B. Board. What is this T.B. Board Madam ? Does it mean Tunga Bhadra Board or Taluk Board ? For what purpose this demand is tabled here, I want to know. Why was this not included in the regular budget ?

At this stage lights went off owing to failure of electricity

When this Assembly is in session, this is the second or third time that this is happening Madam Speaker. Should we compliment the Chairman or the Chief Engineer of the Electricity Board ?

Sri S. BANGARAPPA.—Madam, when the Assembly is in session, I suggest that the Electricity Board authorities should be asked to keep a special eye on this matter. Otherwise, the business of the House will be interrupted like this.

Sri D. DEVARAJ URS (Chief Minister).—We are almost near the Tea Break. We can as well adjourn and meet at 3.30 P.M.

MADAM SPEAKER.—The House will now adjourn and meet at 3.30 P.M.

The house adjourned at fifty five minutes past two of the clock and re-assembled at Forty Minutes past Three of the Clock

[MADAM SPEAKER in the Chair]

Sri C. M. ARUMUGHAM.—Under Demand No. 45 at page 39, the original amount is almost doubled in some cases and in some cases it is 22 times. As we are now in an age of planning, it is necessary that the project work must be completed and comprehensive at least for one year. For Chandrapalli project the original allotment was Rs. 15 lakhs and now there is an additional demand of Rs. 8,59,000, which is more than half. If we look at the Gundal Project, the additional demand is more than double; the original allotment was Rs. 10 lakhs and now the additional demand is Rs. 20 lakhs. Regarding Ghataprabha Project, formerly the amount was Rs. 12 lakhs and now they are asking Rs. 5 lakhs. These items come under the Chief Minister. I hope, in future, he will not allow the officials, the Chief Engineers or the Secretary in charge to bring such supplementary demands. For Tungabhadra High Level Canal I-Stage, originally they had provided Rs. 50,000 and now they ary asking Rs. 11 lakhs. Likewise, there are additional demands for other projects also. This shows that this Government, the present Finance Minister is simply following the past practice or the legacy left over by Sri Veerendra Patil or their great leader Sri S. Nijalingappa. Therefore, if the Government feels that they want to do some good, it is necessary to stop these supplementary demands.

(SRI C. M. ARUMUGHAM)

Coming to Demand No. 9—State Legislature and Elections-the reason for the demand asked for is not very satisfactory. They say that the original Budget provision was found to be inadequate for settlement of pending bills. Can this be taken as a reason Madam ? What were they doing all this time ? Of course, the Constitution provides that they can bring in supplementary demands for an item which was not contemplated in the original budget. But, here, my friend the Hon' ble Finance Minister has brought in supplementary demands for all items. I therefore suggest that at least in future he should call for the explanation of the officers who have under-estimated or over-estimated the projects, and stop such supplementary demands.

You know how the Government was functioning after reorganisation of States. It was unfortunate that the rule of the majority became a communal majority and the majority community person was made the Chief Minister of Mysore for all these years. Now that trend has gone. From 1947 to to-day, Mysore State was ruled by two major communities. Today we are very happy there is a change of leadership and Sri D. Devaraj Urs has become the Chief Minister. I hope his term of office will be full for five years; nobody could topple him. On the opposition side, we are only 51 members. The Ruling Party may feel that the C.P.I. members will support them. They are sitting in the Opposition and they will be in the opposition. But, I do not know how the inner circle is working in their own party. I hope the present Chief Minister will continue to be in power.

[MR. CHAIRMAN (SRI G. RAMEGOWDA) in the Chair]

Comming to the formation of the Ministry, there are 22 Ministers today and there are some rumours that a few more will be added to the Cabinet. I do not know, Sir, whether our Chief Minister has seen the report of the Administrative Reforms Committee. Our friend Sri H.M. Channabasappa, who is now Minister for Public Works, has submitted a report to that Committee even on the Land Reforms. I do remember his three-day speech on Land Reforms; he spoke for 15 hours on Land Reforms.

MR. CHAIRMAN.—But it is not on the floor of this House ?

SRI C. M. ARUMUGHAM.—Sir, had the privilege of hearing Sri Channabasappa for three long days speaking on Land Reforms.

Sri H. M. Channabasappa in his report says that the political parties should put up for election the best candidates available who would command respect by virtue of their ability, efficiency and equipment. The party which is in a position to form the ministry, should have best persons in the Ministry who are known for their integrity and character. Shri Devaraj Urs fulfills all those qualifications. Now

the Chief Minister has selected persons for the posts of Minist ers and State Ministers solely on the basis of qualification and merit, ability, experience and the administrative experience. The Ministry should be a compact one and must be limited to the actual needs of administration. According to the Administrative Reforms Committee report, there should be only two categories of Ministers viz., the Cabinet and the Deputy Ministers. The number of Ministers including the Deputies should not exceed six persons. Today we are having 22 Ministers and some more are expected to be taken in shortly. My only representation on this occasion is that there should be a lady member at the cabinet level in the present Cabinet. There are many ladies who are well qualified, One of them might be selected to the post of cabinet minister. On account of the influence of one lady, they have come to power.

I may tell you one interesting story. During my election campaign, I happened to meet one Anglo Indian lady and requested her for a vote in my favour. She said that 'well, there is a lady candidate in the election viz. the Prime Minister, Indira Gandhi, I will vote for her.' I told her that she is in Delhi and that I am contesting the election. I am very happy to inform you that I have escaped the tidal wave of Indira Gandhi and the wave of Sri Devaraj Urs.

Sir, this budget is more disappointing because nothing has been mentioned about the fulfilment of the points indicated in their election manifesto. They say that a special provision has been made by the Central Government for absorbing the educated unemployed in the field of technical jobs. The State Governments are charged with the responsibility of implementing those schemes. For the benefit of the House, I am furnishing certain figures about the employment in Mysore State.

There are 338 Doctors who are unemployed

20323 graduates	-do-
1328 post graduates	-do-
6394 Diploma holders	-do-

It is said that there are 1,20,000 matriculates who have registered their names in the Employment Exchanges but remain unemployed. The unskilled candidates are about 1,25,296. In all 2,73,678 people who have registered their names in the Employment Exchanges and are awaiting jobs.

The Finance Minister has not mentioned a single word about the Employment of these unemployed persons.

In Mysore State there are 106 units of the Central Government wherein 28,900 people are employed out of which 2,200 are women. In the State Sector, there are 251 employers and in these units about

(SRI C. M. ARUMUGHAM)

50,321 are employed out of which only 6,700 are women. In the quasi Government employers, there are about 119 units in which 92,714 are employed out of which 6,156 are women. There are some local bodies who employ directly and such local bodies are 42 in number. In these local bodies about 1,118 are employed out of which 388 are women. There are private concerns where more than 25 workers are employed. Such concerns are 428 in number in which 65,810 people are employed out of which 6,882 are women. Concerns which employ less than 25 workers, their number is 489 in which 7,016 people are employed.

After making a comparative study of the employed and the unemployed, I have come to the conclusion that there are about 2,73,678 who are still unemployed.

4.00 P.M.

In the election manifesto, it is stated that the Congress will give particular attention to the socio and economic problems faced by Muslims, Christians and other religious linguistic minorities. There is not even a single word about them in the financial statement or in the speeches of the Finance Minister and of the Governor. This is nothing but the same old slogan and same old theory of the Congress. The people expect a change. But I do not think nothing fresh has happened. The same old thing is continued. If any change takes place, it should be complete. A mere change here and there is no use at all. This kind of change is no good. The interim Budget has not provided what the people want. Therefore it is disappointing. Thank you.

ಶ್ರೀ ಗುಟ್ಟಿ ಚಂದ್ರಶೇಖರ (ಗುಬ್ಬಿ).—ನನ್ಮಾನ್ಯ ಅಧ್ಯಕ್ಷರೇ, ಅರ್ಥ ಸಚಿವರು ಮಂಡಿಸಿರುವ ಮಧ್ಯ ಕಾಲೀನ ಆಯವ್ಯಯ.ವನ್ನು ನಾನು ಅತ್ಯ ಏಶ್ವಾನದಿಂದ ಅನುಮೋದಿಸುತ್ತೇನೆ. ಹಾಗೆ ಮಾಡಲು ಮೂರು ಪ್ರಬಲವಾದ ಕಾರಣಗಳಿವೆ. ಚುನಾವಣಾ ಕಾಲದಲ್ಲಿ ದೀನದಲಿತರ ಉದ್ಧಾರ ಮಾಡುವುದಾಗಿ ವಾಗ್ದಾನವೇನು ಮಾಡಿದ್ದಾರೆ ಅದನ್ನು ಅನುಷ್ಠಾನಕ್ಕೆ ತರುವ ಮಾರ್ಗದಲ್ಲಿ ಹೆಜ್ಜೆಯಿಟ್ಟು ತೆರಿಗೆ ರಹಿತವಾದ ಆಯವ್ಯಯವನ್ನು ಮಂಡಿಸಿರುವುದು ಒಂದು ಮುಖ್ಯವಾದ ಕಾರಣ. ಎರಡನೆಯದಾಗಿ ನೆನ್ನೆಯ ದಿವಸ ಅನೇಕ ವಿರೋಧ ಪಕ್ಷದ ಸದಸ್ಯರು ನಮ್ಮ ಅರ್ಥ ಮಂತ್ರಿಗಳನ್ನು ಶ್ಲಾಘಿಸಿದರು. ಇಂಥ ಮಂತ್ರಿಗಳು ನಮ್ಮ ಮಂತ್ರಿಮಂಡಲದಲ್ಲಿರುವುದು ಒಂದು ಹೆಮ್ಮೆಯ ವಿಷಯವಾಗಿದೆ. ಅವರು ದೊಡ್ಡ ಮನೆತನದಿಂದ ಬಂದಿರುವರು, ಘನತೆ ಗಾಂಭೀರ್ಯಗಳಿಂದ ಕೂಡಿದ್ದಾರೆ. ಮೂರನೆಯದಾಗಿ ಇಂದು ಸ್ಯಾಂಪಿನಲ್ಲಿರುವ ಮಂತ್ರಿ ಮಂಡಲದಲ್ಲಿ ಒಳ್ಳೆಯ ವ್ಯಕ್ತಿಗಳಿರುತ್ತಾರೆ. ಜನಸಾಮಾನ್ಯರ ಮುಂದೆ ನಮ್ಮ ಪಕ್ಷದ ನೀತಿಯನ್ನು ವಿವರಿಸಿ 165 ಜನರು ಆರಿಸಿ ಬಂದಿದ್ದಾರೆ ಸುಭದ್ರವಾದ ಸರಕಾರವಿದೆ ಮತ್ತು ಪಕ್ಷದಲ್ಲಿರುವ ಅನೇಕ ಪ್ರತಿಭಾವಂತರಿಂದ ಮಂತ್ರಿಮಂಡಲ ಕೂಡಿದೆ; ಅಲ್ಲದೆ ಹಿಂದೆ ಮಂತ್ರಿಗಳಾಗಿದ್ದವರು ಕೂಡ ಸಚಿವರಾಗಿದ್ದಾರೆ. ಅನೇಕ ಯುವಕರು ಮಂತ್ರಿಮಂಡಲದಲ್ಲಿದ್ದಾರೆ. ಅದರ ಬಗ್ಗೆ ಬಹಳ ಹೆಮ್ಮೆ ಇದೆ. ಸಾಮಾನ್ಯ ಜನರಿಗೆ ಈ ಮಂತ್ರಿಮಂಡಲದಿಂದ ಅನೇಕ ಒಳ್ಳೆಯ ಕಾರ್ಯಗಳಾಗುವುವು ಎಂಬ ನಂಬಿಕೆ ಇದೆ. ಆದುದರಿಂದ ಈ ಆಯವ್ಯಯವನ್ನು ನಾನು ಅತ್ಯ ಏಶ್ವಾನದಿಂದ ಅನುಮೋದಿಸುತ್ತೇನೆ.

ಇನ್ನು ತುಮಕೂರು ಜಿಲ್ಲೆಯ ಪರವಾಗಿ ಮಂತ್ರಿಮಂಡಲದ ಮುಂದೆ ಒಂದು ವಿಷಯವನ್ನಿಡುತ್ತೇನೆ. ಅದು ಬಹಳ ಹಿಂದುಳಿದ ಜಿಲ್ಲೆ, ಆಲ್ಲಿ ಯಾವ ಕೈಗಾರಿಕೆಯೂ ಇಲ್ಲ, ಈ ವಿಚಾರವನ್ನು

ನನ್ನ ದಿವಸ ಕೈಗಾರಿಕಾ ಮಂತ್ರಿಗಳಿಗೆ ಹೇಳಿದೆ. ದಯಮಾಡಿ ತುಮಕೂರು ಜಿಲ್ಲೆಯಲ್ಲಿ ಒಂದು ದೊಡ್ಡ ಕೈಗಾರಿಕೆ ಸ್ಥಾಪನೆ ಮಾಡಬೇಕು. ಎಲ್ಲ ಕೈಗಾರಿಕೆಗಳೂ ಕೂಡ ಬೆಂಗಳೂರಿನಲ್ಲೇ ಸ್ಥಾಪಿಸಲ್ಪಡುತ್ತಿವೆ. ಇದರಿಂದ ಅದರ ಉಪಯೋಗ ಪಡೆಯುವವರೆಲ್ಲರೂ ಬೆಂಗಳೂರಿಗೇ ಬರಬೇಕಾಗಿದೆ. ಇದರಿಂದ ತೊಂದರೆಯಾಗಿದೆ. ಆದುದರಿಂದ ಮುಂದಾದರೂ ಬೆಂಗಳೂರಿಗೆ 50 ಮೈಲುಗಳ ದೂರದಲ್ಲೇ ಕೈಗಾರಿಕೆ ಸ್ಥಾಪಿಸಬೇಕೆಂದು ಕೇಳಿಕೊಳ್ಳುತ್ತೇನೆ. ಸರಕಾರ ಇದನ್ನು ಗಮನಿಸಿ ನಮ್ಮ ಜಿಲ್ಲೆಗೆ ಅನುಕೂಲ ಮಾಡಿಕೊಡಬೇಕು, ನಮ್ಮ ಜಿಲ್ಲೆ ವ್ಯವಸಾಯದ ಮೇರೆ ಅವಲಂಬಿಸಿದೆ. ಆದರೆ ಅಲ್ಲಿ ಯಾವ ನೀರಾವರಿ ಯೋಜನೆಯೂ ಇಲ್ಲ. ರೈತರು ಅಲ್ಲಿ ಕೇವಲ ಕೆರೆಯ ನೀರನ್ನವಲಂಬಿಸಿ ವ್ಯವಸಾಯ ಮಾಡುತ್ತಿದ್ದಾರೆ. ಕೆಲವುವೇಳೆ ಮಳೆಬೆಳೆ ಸರಿಯಾಗಿ ಆಗುವುದಿಲ್ಲ. ಆದುದರಿಂದ ಹೇಮಾವತಿ ನದಿಯ ನೀರನ್ನು ನಮ್ಮ ಜಿಲ್ಲೆಗೆ ಒದಗಿಸಬೇಕೆಂದು ಹಿಂದೆ ಸರ್ ಎಂ. ವಿಶ್ವೇಶ್ವರಯ್ಯನವರಿದ್ದಾಗ ವಿಚಾರಮಾಡಿದ್ದರು. ಆದರೆ ಇದುವರೆಗೆ ಅದು ಕಾರ್ಯರೂಪಕ್ಕೆ ಬಂದಿಲ್ಲ. ಈಗ ನಮ್ಮ ಜಿಲ್ಲೆಯವರೇ ರೆವೆನ್ಯೂ ಮಂತ್ರಿಗಳಾಗಿರುವುದರಿಂದ ಅವರು ಈ ವಿಚಾರವನ್ನು ಸರಕಾರದ ಗಮನಕ್ಕೆ ತಂದು ಹೇಮಾವತಿ ಯೋಜನೆಯ ಕೆಲಸವನ್ನು ಅದಷ್ಟು ಬೇಗ ಮುಗಿಸಿ ನಮ್ಮ ಜಿಲ್ಲೆಯ ರೈತರಿಗೆ ಅನುಕೂಲವಾಗುವಂತೆ ಮಾಡಬೇಕೆಂದು ನಮ್ಮ ಜಿಲ್ಲೆಯ ಪರವಾಗಿ ಪ್ರಾರ್ಥಿಸುತ್ತೇನೆ. ಈ ಸರಕಾರದವರು ಎಲ್ಲಾ ಕಾರ್ಯಗಳನ್ನೂ ಪ್ರಗತಿ ಪರವಾಗಿ ಮಾಡುವರೆಂಬ ನಂಬಿಕೆಯಿದೆ. ಈಗ ಸರಕಾರದ ಯಂತ್ರ, ಕೆಟ್ಟಿದೆ, ಅದಕ್ಕೆ ಒಂದು ರೀತಿಯ ಟ್ರೀಟ್‌ಮೆಂಟ್ ಕೊಡುವುದು ಅವಶ್ಯಕ. ಕಾರಣ ಈ ದಿವಸ ಒಬ್ಬ ಸಾಮಾನ್ಯ ರೈತ ಖಾತೆ ಬದರಾಯಿಸಿಕೊಳ್ಳಬೇಕಾದರೆ ತಾಲ್ಲೂಕು ಕಛೇರಿಗೆ ಎಂಟು ದಿವಸ ತಿರುಗಿ ನೂರಾರು ರೂಪಾಯಿ ಖರ್ಚುಮಾಡಬೇಕು.

ಈ ಹೊತ್ತು ಸರ್ಕಾರದ ಪ್ರತಿಯೊಂದು ಚಕ್ರವೂ ಕೂಡ ದೇಶಮುಖ ಕುಹೆನಿಯ ಕೈಲವನ್ನು ಬಿಡದೆ ಹೋದರೆ, ಯಾವ ಚಕ್ರವೂ ಚಲಿಸುವುದಿಲ್ಲ. ಕೆಲವು ನಿಷ್ಠಾವಂತ ಅಧಿಕಾರಿಗಳಿದ್ದಾರೆ. ಅಂಥವರು ಎಷ್ಟು ಜನರಿದ್ದಾರೆಂದರೆ ಅನೇಕ ತಿಮಿಂಗಲಗಳಿಗಾವ ನಮುದ್ರದಲ್ಲಿ ಎಲ್ಲೋ ಕೆಲವು ಮೀನುಗಳೋಪಾದಿಯಲ್ಲಿ ಇದ್ದಾರೆ.

ಅಧ್ಯಕ್ಷರೇ, ಅಡಳಿತ ಚೆನ್ನಾಗಿರಬೇಕು, ಆಡಳಿತ ಸರಿಯಾಗಿಲ್ಲದೆ ಹೋದರೆ ಆಗ ಯೋಜನೆಗಳನ್ನು ಕಾರ್ಯಗತ ಮಾಡುವುದು ಬಹಳ ನಿಧಾನವಾಗುತ್ತದೆ. ಆದ್ದರಿಂದ ಈ ವಿಚಾರದಲ್ಲಿ ಸರ್ಕಾರ ಬಹಳ ಗಮನಕೊಟ್ಟು ಆಡಳಿತ ಯಂತ್ರವನ್ನು ಚುರುಕುಗೊಳಿಸಬೇಕು ಎಂದು ಮತ್ತೊಮ್ಮೆ ಹೇಳಿ ನಮ್ಮ ಮುಂದೆ ಇರುವ ಅಯುವ್ಯಯಕ್ಕೆ ನಾನು ಹೃತ್ಪೂರ್ವಕವಾಗಿ ಅನುಮೋದನೆ ಕೊಡುತ್ತೇನೆ.

†ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ನನ್ಮಾನ್ಯ ಅಧ್ಯಕ್ಷರೇ ಮೊದಲನೆಯುದಾಗಿ ನಾನು ತಮ್ಮೆಲ್ಲ ಒಂದು ವಿಷಯವನ್ನು ಏನಂತಿ ಮಾಡಿಕೊಳ್ಳಬೇಕು. ನಾನು ಈ ಸಭೆಗೆ ಹೊಸಬ. ಯಾವುದರಮೇರೆಯೂ ಭಾಷಣ ಮಾಡಿ ಅಭ್ಯಾಸವಿಲ್ಲ. ಸಾಧ್ಯವಾದಮಟ್ಟಿಗೂ ವಿಷಯಗಳ ಬಗ್ಗೆಯೇ ಮಾತನಾಡಲು ಪ್ರಯತ್ನ ಪಡುತ್ತೇನೆ. ಒಂದು ವೇಳೆ ವಿಷಯಗಳನ್ನು ಬಿಟ್ಟು ಮುಂದೆ ಹೋದರೆ ಅದಕ್ಕೆ ತಮ್ಮ ಕ್ಷಮಾಪಣೆಯನ್ನು ಯಾಚಿಸುತ್ತೇನೆ.

ಮೊದಲನೆಯುದಾಗಿ ನಾನು ಹೊಸದಾಗಿ ರಚಿತವಾಗಿರುವ ಮಂತ್ರಿ ಮಂಡಲವನ್ನು ಸ್ವಾಗತ ಮಾಡುತ್ತೇನೆ. ಆದರೆ ಹೊಗಳುವುದಕ್ಕೆ ಹೋಗುವುದಿಲ್ಲ. ಸಾಧಾರಣವಾಗಿ ಎಲ್ಲರೂ ಹೊಗಳುತ್ತಾರೆ. ಹೊಗಳುವ ಕಾಲ ಯಾವುದು ಎಂದರೆ ಮಂತ್ರಿಮಂಡಲದವರು ಅಸ್ತಾನವಿಂದ ಕೆಳಗೆ ಇಳಿದಾಗ ಎಪ್ಪರಮಟ್ಟಿಗೆ ಜನಸೇವೆ ಮತ್ತು ಜನಹಿತ ಕಾರ್ಯಗಳನ್ನು ಮಾಡಿದ್ದಾರೆ ಎನ್ನುವುದು ನಿರ್ಧಾರವಾಗುತ್ತದೆ. ಆವಾಗ ಹೊಗಳುವುದಕ್ಕೆ ತಯಾರಾಗಿದ್ದೇನೆ. ಅಧಿಕಾರದಲ್ಲಿರುವವರೆಗೆ ಹೊಗಳುವುದಕ್ಕೆ ಹೋಗುವುದಿಲ್ಲವೆನ್ನುವ ಭರವಸೆಯನ್ನು ಕೊಡುತ್ತೇನೆ.

ಇನ್ನು ಬಡೆಟ್ ಬಗ್ಗೆ ಮಾತನಾಡುವುದಾದರೆ, ಇದರೊಳಗೆ ಕಾವೇರಿ ಯೋಜನೆ ಸಹಿತವಾದ ನೀರಾವರಿ ಯೋಜನೆಗಳಿಗೆ ಆದ ಮೆಚ್ಚದಲ್ಲಿ 11 ಕೋಟಿ ರೂಪಾಯಿ ಹೆಚ್ಚಿದುದೇ ಕೊರತೆಯ ಹೆಚ್ಚಳಕ್ಕೆ ಮುಖ್ಯ ಕಾರಣ ಎಂದು ಹೇಳಿದ್ದಾರೆ. ಇದರಿಂದ ಏನು ಅರ್ಥವಾಗುತ್ತದೆ ಎಂದರೆ ಸರ್ಕಾರದ ಆಡಳಿತಯಂತ್ರವನ್ನು ನಡೆಸುತ್ತಿದ್ದವರು ತಮಗೆ ಬರಬೇಕಾದ ವರಮಾನವನ್ನು ಸರಿಯಾಗಿ ವಸೂಲು ಮಾಡಲಿಲ್ಲ, ಎಂದರೆ ದಕ್ಷತೆಯಿಂದ ಕೆಲಸ ಮಾಡಲಿಲ್ಲ ಎಂದು ಅರ್ಥವಾಗುತ್ತದೆ. ದಕ್ಷತೆಯಿಂದ ವಸೂಲು ಮಾಡದೆ ಹೆಚ್ಚಿನ ದಕ್ಷತೆಯಿಂದ ಖರ್ಚು ಜಾಸ್ತಿ ಮಾಡಿದ್ದಾರೆ. ಇದು ಬಹಳ ಶೋಚನೀಯವಾದುದು ಮತ್ತು ಅದಕ್ಕೆ ಯಾರೂ ಸಂತೋಷ ಪಡಬೇಕಾದುದಿಲ್ಲ. ಆಡಳಿತ ಯಂತ್ರ ಜನಗಳ ಪ್ರತಿನಿಧಿಗಳ ಕೈಯಲ್ಲಿರಲಿಲ್ಲ ರಾಜ್ಯಪಾಲರ ಆಡಳಿತವಿತ್ತು, ಅದುದರಿಂದ ಹೀಗಾಗಿರ

(ಶ್ರೀ ಕೆ. ಎಂ. ನಾಗಣ್ಣ)

ಇದು ಬಹಳ ಎಂದು ಇದಕ್ಕೆ ಕಾರಣವನ್ನು ಹೇಳುತ್ತಿದ್ದಾರೆ. ರಾಜ್ಯಪಾಲರ ಆಡಳಿತ ಬರಲು ಕಾರಣ ರಾದವರು ನಾವೇ. ಯಾವಾಗ ಹಿಂದಿನ ಮಂತ್ರಿಮಂಡಲವನ್ನು ಉರುಳಿಸಿದರೋ, ಆ ಹೊತ್ತೇ ಆಡಳಿತ ಯಂತ್ರವನ್ನು ವಹಿಸಿಕೊಂಡಿದ್ದ ಪಕ್ಷಕ್ಕೆ ಈ ರೀತಿಯಾಗುತ್ತಿರಲಿಲ್ಲ ಎಂದು ನನ್ನ ಭಾವನೆ. ಆದರಲ್ಲಿ ನಮ್ಮದೂ ಸ್ವಲ್ಪ ದೋಷವಿದೆ. ಆಡಳಿತ ಯಂತ್ರವನ್ನು ತಕ್ಷಣ ವಹಿಸಿಕೊಳ್ಳದೆ ಹಿಂದೆ ಬೀಳುವುದಕ್ಕೆ ಕಾರಣಗಳು ಏನೇ ಇರಬಹುದು. ಆದರೆ ಆಡಳಿತ ಯಂತ್ರವನ್ನು ವಹಿಸಿಕೊಳ್ಳದೇ ರಾಜ್ಯಪಾಲರ ಆಡಳಿತ ಬರುವುದಕ್ಕೆ ನಮ್ಮ ಜವಾಬ್ದಾರಿಯೂ ಹೆಚ್ಚಾಗಿರುತ್ತದೆ. ಯಾವಾಗ ಹಿಂದೆ ಇದ್ದ ಮಂತ್ರಿಮಂಡಲವನ್ನು ಉರುಳಿಸಿದರೋ ತಕ್ಷಣ ಆಡಳಿತ ಸೂತ್ರಗಳನ್ನು ವಹಿಸಿಕೊಳ್ಳ ಬೇಕಾಗಿತ್ತು, ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾಗಿತ್ತು. ಇದು ಕರ್ತವ್ಯಲೋಪ. ಕರ್ತವ್ಯಲೋಪವನ್ನು ಒಪ್ಪಿಕೊಳ್ಳಬೇಕು. ಈಗ ಆಡಳಿತ ವಹಿಸಿಕೊಂಡಿರುವವರು ಲೋಪ ಮಾಡಿ ದ್ದಾರೆಂದು ನಾನು ಹೇಳುತ್ತಿದ್ದೇನೆ.

31—3—71ರಂದು ಇದ್ದ ಓವರ್ ಡ್ರಾಫ್ಟ್ 30·38 ಕೋಟಿ ರೂಪಾಯಿ. ಪ್ರಸಕ್ತ ಸಾಲಿನಲ್ಲಿ 40 ಕೋಟಿರೂಪಾಯಿ ಹೆಚ್ಚಾಗಿ ಖರ್ಚು ಮಾಡಿದ್ದಾರೆ. ಇದರಿಂದ ಒಟ್ಟು ಓವರ್ ಡ್ರಾಫ್ಟ್ 70 ಕೋಟಿ ರೂಪಾಯಿ ಆಗಿದೆ. 40 ಕೋಟಿ ರೂಪಾಯಿಗಳನ್ನು ಯಾವ ಬಗ್ಗೆ ಖರ್ಚು ಮಾಡಿದರು ಎನ್ನುವುದರ ಬಗ್ಗೆ ಒಂದು ನೋಟ್ ಕೊಟ್ಟಿದ್ದರೆ ಬಹಳ ಸಹಾಯವಾಗುತ್ತಿತ್ತು. ಅಂಥ ನೋಟ್ ಇಲ್ಲ. ಆದ್ದರಿಂದ ಅದರ ಬಗ್ಗೆ ಮಾತನಾಡಲು ಇಷ್ಟಪಡುವುದಿಲ್ಲ.

1972-73ನೇ ಸಾಲಿನ ಬಜೆಟ್ ಎಸ್ಟಿಮೇಟ್ಸ್ ಪ್ರಕಾರ ವಾಣಿಜ್ಯ ತೆರಿಗೆಯಿಂದ 57 ಕೋಟಿ ರೂಪಾಯಿ, ಅಬಕಾರಿಯಿಂದ 25.60 ಕೋಟಿ ರೂಪಾಯಿ, ಮೋಟಾರು ವಾಹನಗಳ ತೆರಿಗೆಯಿಂದ 11.10 ಕೋಟಿ ರೂಪಾಯಿ, ಮನೋರಂಜನೆ ತೆರಿಗೆಯಿಂದ 14 ಕೋಟಿ ರೂಪಾಯಿ, ವರಮಾನ ತೆರಿಗೆಯಿಂದ 24 ಕೋಟಿ ರೂಪಾಯಿ ಈ ರೀತಿ ಕೊಟ್ಟಿದ್ದಾರೆ. ಇದನ್ನೆಲ್ಲ ನೋಡಿದರೆ ಇವು ನಗರದ ಜನಗಳಿಂದ ಮತ್ತು ದೊಡ್ಡ ದೊಡ್ಡ ಪಟ್ಟಣಗಳ ಜನರಿಂದ ವಸೂಲು ಮಾಡತಕ್ಕ ತೆರಿಗೆಗಳೇ ಆಗಿವೆ. ಎಂದರೆ ಹೆಚ್ಚಾಗಿ ಅರ್ಬನ್ ಏರಿಯಾದಿಂದ ಈ ತೆರಿಗೆಗಳು ಬರುತ್ತಿವೆ, ಮತ್ತು ಆ ಜನ ನಮ್ಮ ಸರ್ಕಾರವನ್ನು ನಡೆಸಲಿಕ್ಕೆ ಸಹಾಯ ಮಾಡುತ್ತಿದ್ದಾರೆ, ಸಾಕಷ್ಟು ತೆರಿಗೆಗಳನ್ನು ಕೊಡುತ್ತಿದ್ದಾರೆ. ಅಂದ ಮಾತ್ರಕ್ಕೆ ಗ್ರಾಮಾಂತರ ಪ್ರದೇಶದಲ್ಲಿರುವವರ ಮೇರೆ ತೆರಿಗೆಯನ್ನು ಹಾಕಿ ಎಂದು ಹೇಳುವುದಕ್ಕೆ ನಾನು ತಯಾರಾಗಿಲ್ಲ. ಆದರೆ ಅರ್ಬನ್ ಏರಿಯಾದಿಂದ ಎಷ್ಟರಮಟ್ಟಿಗೆ ಹಣ ವಸೂಲು ಮಾಡುತ್ತಿದ್ದಾರೆ, ಎಷ್ಟರಮಟ್ಟಿಗೆ ತೆರಿಗೆಗಳನ್ನು ವಸೂಲು ಮಾಡುತ್ತಿದ್ದಾರೆ, ಅಷ್ಟರಮಟ್ಟಿಗೆ ಅವರ ರಕ್ಷಣೆಯ ಕಡೆಗೆ ಯೋಚನೆ ಮಾಡುತ್ತಿಲ್ಲ ಎಂದು ನಾನು ಧಾರಾಳವಾಗಿ ಹೇಳುತ್ತಿದ್ದೇನೆ. ಇದಕ್ಕೆ ನಿದರ್ಶನವೆಂದರೆ, ಬೆಂಗಳೂರು ನಗರದಿಂದ ನಮಗೆ ಬಹಳ ಹಣ ವಸೂರಾಗುತ್ತಿದೆ ಆದರೆ ಬೆಂಗಳೂರು ನಗರದ ಜನತೆಯ ಹಿತರಕ್ಷಣೆಯನ್ನು ಸರ್ಕಾರ ಮಾಡದೆ, ಕಾರ್ಪೊರೇಷನ್ ರದ್ದು ಮಾಡಿದ್ದಾರೆ. ಹೀಗೆ ಮಾಡಲು ಕಾರ್ಪೊರೇಷನ್ ಮಾಡಿದಂಥ ತಪ್ಪು ಏನು? 1966ನೇ ಇಸವಿಯಲ್ಲಿ ಏನಾ ಕಾರಣ ಕಾರ್ಪೊರೇಷನ್ ರದ್ದು ಮಾಡಿದ್ದು ಪಾಪವಲ್ಲವೇ ಎಂದು ಯೋಚನೆ ಮಾಡಿ. ಕೋಟ್ಯಂತರ ರೂಪಾಯಿ ತೆರಿಗೆ ಕೊಡುವ ಜನರ ಹಿತರಕ್ಷಣೆಯನ್ನು ಮಾಡಿದ್ದಾರೆಯೇ? ಕಾರ್ಪೊರೇಷನ್‌ನಲ್ಲಿ ದುರಾಡಳಿತವಿದ್ದರೆ ಅದನ್ನು ಸರಿಪಡಿಸುವುದಕ್ಕೆ ಅಧಿಕಾರವಿದ್ದರೂ ಕೂಡ ಕಾರ್ಪೊರೇಷನ್ ರದ್ದು ಮಾಡಿ ಕರ್ತವ್ಯ ಲೋಪ ಮಾಡಿ ಜನಗಳ ಪ್ರತಿನಿಧಿಗಳನ್ನು ಏನಾ ಕಾರಣ ವಹಿಸಿ ಮಾಡಿದ ಪಾಪಕ್ಕೆ ಗುರಿಯಾಗಿದ್ದಾರೆ. ಈ ಮೂರು ವರ್ಷ ಆಡಳಿತ ನಡೆಸಿದಂಥ ಅಧಿಕಾರಿಗಳು ಬಹುಮಟ್ಟಿಗೆ ಕಾರ್ಪೊರೇಷನ್ ಹಾಳು ಮಾಡಿದ್ದಾರೆ. ಹೈಕೋರ್ಟಿಗೆ ಹೋಗಿದ್ದು ಸರ್ಕಾರ ಮಾಡಿದ್ದು ತಪ್ಪು ಎಂದು ತೀರ್ಮಾನವಾಗಿರಬೇಕಾದರೆ, ಅದಕ್ಕೆ ನಾಚಿಕೆ ಪಟ್ಟುಕೊಳ್ಳದೆ ಇನ್ನೊಂದು ಆರ್ಡಿನೆನ್ಸ್ ಹೊರಡಿಸಿ ಪುನಃ ಕಾರ್ಪೊರೇಷನ್ ರದ್ದು ಮಾಡಿದ್ದಾರೆ. ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರತಕ್ಕ ಜನಗಳು, ಪ್ರಜೆಗಳಿಂದ ಚುನಾಯಿತರಾಗಿ ಬಂದಿರತಕ್ಕ ಮಂತ್ರಿಗಳು ಮಾಡತಕ್ಕ ಕೆಲಸ ಇದಲ್ಲ. ಅಂಥ ಕೆಲಸವನ್ನು ಈ ಸರ್ಕಾರ ಮಾಡಿದೆ. ಅದು ದೊಡ್ಡ ತಪ್ಪು. ಈಗಲಾದರೂ ಇಷ್ಟೊಂದು ತೆರಿಗೆಗಳನ್ನು ಬೆಂಗಳೂರು ನಗರ ಮತ್ತು ಇತರ ದೊಡ್ಡ ಪಟ್ಟಣಗಳ ಜನರಿಂದ ವಸೂಲು ಮಾಡಿ ಅದನ್ನು ಇಡೀ ಮೈಸೂರು ದೇಶಕ್ಕೆ ಖರ್ಚು ಮಾಡುತ್ತಿದ್ದಾರೆ. ಹಾಗೆ ಖರ್ಚು ಮಾಡಬೇಡಿ ಎಂದು ನಾನು ಹೇಳುವುದಿಲ್ಲ. ಯಾರು ಹೆಚ್ಚಿನ ತೆರಿಗೆಯನ್ನು ಕೊಡುತ್ತಾರೆ ಅವರ ಕಡೆ ಸ್ವಲ್ಪ ಗಮನವಿಡಿ ಎಂದು ಅವರಲ್ಲಿ ಪ್ರಾರ್ಥನೆ ಮಾಡುತ್ತಿದ್ದೇನೆ.

ಖರ್ಚು ಬಾಬಿನಲ್ಲಿ ವೈದ್ಯಕೀಯ ಮತ್ತು ಜನಾರೋಗ್ಯ ರಕ್ಷಣೆಗೆ 18·77 ಕೋಟಿ ರೂಪಾಯಿಗಳನ್ನು ಒದಗಿಸಿರುವುದು ಬಹಳ ಕಡಮೆ ಎಂದು ನನ್ನ ಭಾವನೆ. ಯಾವ ಅಸ್ಪತ್ರೆಯಲ್ಲಿ ಹೋದರೂ

ಕೂಡ ಬಡ ಜನಗಳಿಗೆ ಯಾವ ಸೌಕರ್ಯವೂ ಇಲ್ಲ; ಯಾವ ಔಷಧವೂ ಇಲ್ಲ ಎಂದು ಹೇಳುತ್ತೀನಿ. ದುಡ್ಡು ಕೊಟ್ಟರೆ ಬರುತ್ತದೆ, ಇಲ್ಲದೆ ಇದ್ದರೆ ಬರುವುದಿಲ್ಲ. ನಾನು ಒಬ್ಬ ಡಯಬೆಟಿಕ್ ಪೇಷೆಂಟ್. ನಾನು ಆಸ್ಪತ್ರೆಗೆ ಹೋಗುವುದಿಲ್ಲ, ಅಂಗಡಿಯಲ್ಲಿ ಇನ್‌ಜೆಕ್ಷನ್ ಟ್ಯೂಬ್ ಕೊಂಡುಕೊಳ್ಳುತ್ತೇನೆ. ಡಯಬೆಟಿಕ್ ಪೇಷೆಂಟ್ ಬಡವನಾಗಿರುವವನು ಆಸ್ಪತ್ರೆಗೆ ಹೋದರೆ ಇನ್‌ಜೆಕ್ಷನ್ ಟ್ಯೂಬ್ ಇಲ್ಲ ವೆಂದು ಹೇಳುವುದನ್ನು ಕಲತುಕೊಂಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಕದ್ದು ಮಾರಾಟ ಮಾಡುತ್ತಾರೆ.

ಶ್ರೀ ಕೆ. ಎಂ. ನಾಗಣ್ಣ.—ಆಸ್ಪತ್ರೆಯ ಎದುರಿಗಿರುವ ಮೆಡಿಕರ್ ಸ್ಟೋರ್ಸ್‌ನಲ್ಲಿ ದುಡ್ಡು ಕೊಟ್ಟರೆ ಕೊಡುತ್ತಾರೆ. ಸರ್ಕಾರಕ್ಕೆ ಬಾರದೆ ಇರುವ ವಸ್ತುಗಳು ವ್ಯಾಪಾರ ಮಾಡುವವರಲ್ಲಿ ಹೇರಳವಾಗಿ ಸಿಕ್ಕುತ್ತವೆ. ಎಂದರೆ ಆಸ್ಪತ್ರೆಗಳಲ್ಲಿ ಕದ್ದು ಹೊರಗೆ ಮಾರಾಟ ಮಾಡುತ್ತಾರೆ ಎಂದು ಶ್ರೀ ವಾಟಾಳ್ ನಾಗರಾಜ್ ಅವರು ಹೇಳಿದುದನ್ನು ನಾನು ಒಪ್ಪುತ್ತೇನೆ.

ಸರ್ಕಾರಿ ನೌಕರರ ವೇತನ ಪರಿಷ್ಕರಣ ಎಂದು ಇದೆ. ಈ ಸಮಸ್ಯೆ ಎಲ್ಲ ರಾಜ್ಯಗಳಲ್ಲೂ ಇದೆ ಎಂದು ಹೇಳಿದ್ದಾರೆ. ಸರ್ಕಾರದವರು ಇದರ ಬಗ್ಗೆ ಏನಾದರೂ ಕ್ರಮಗಳನ್ನು ಅನುಸರಿಸಿ, ಯಾವುದಾದರೂ ಖರ್ಚನ್ನು ಕಡಮೆ ಮಾಡುವುದಕ್ಕೆ ಯೋಚನೆ ಮಾಡಿದ್ದಾರೆಯೇ ? ಎಲ್ಲ ರಾಜ್ಯಗಳಲ್ಲಿಯೂ ಇದು ಕಾಮನ್ ಪ್ರಾಬ್ಲಮ್ ಎಂದು ಹೇಳಿದ್ದಾರೆ. ಇದು ಸರಿಯಾದ ಮಾತೇ ಎಂದು ಆಲೋಚನೆ ಮಾಡಿ. ಆಮೇಲೆ ಈಗ ಮಂತ್ರಿಮಂಡಲ ರಚನೆ ಮಾಡಿದ್ದೀರಿ, ಈಗಾಗಲೇ ಇದರಲ್ಲಿ 22 ಜನ ಮಂತ್ರಿಗಳಾಗಿದ್ದೀರೀ, ಇನ್ನೂ ಕೆಲವರನ್ನು ಸೇರಿಸಬೇಕು ಎಂದು ಹೇಳುತ್ತಿದ್ದಿರಿ. ಆದರೆ ನನಗೆ ಕೋರುವುದು ಇನ್ನೂ ಹೆಚ್ಚು ಸೇರಿಸುವ ಅಗತ್ಯ ಕಾಣುವುದಿಲ್ಲ, ಈಗ ನೀವು 165 ಜನ ಇದ್ದೀರಿ ನಿಮಗೆ ಮಂತ್ರಿಗಳನ್ನು ನೇಮಿಸಿಕೊಳ್ಳಲು ಅವಕಾಶ ಇದೆ, ನಿಮಗೇನೋ ಸ್ಟ್ರೀಂ ರೋರ್ ಮೆಜಾರಿಟಿ ಎಂದು ಇದೆ, ನಾನು ಬ್ರೂಟ್ ಮೆಜಾರಿಟಿ ಎಂದು ಹೇಳಲು ಹೋಗುವುದಿಲ್ಲ ನಿಮಗೆ ಈಗ ಇರುವ ಮಂತ್ರಿಗಳಿಗಿಂತ ಇನ್ನೂ ಹೆಚ್ಚು ಮಾಡಬೇಕೇ ಎನ್ನುವುದನ್ನು ನೀವೇ ಯೋಚನೆ ಮಾಡಬೇಕು ಆದುದರಿಂದ ನಿಮ್ಮಿಂದಲೇ ಮೊದಲು ಖರ್ಚು ಕಡಿಮೆ ಮಾಡುವ ಕೆಲಸ ಆರಂಭವಾಗಬೇಕು. ಮಂತ್ರಿಮಂಡಲವನ್ನು ಇನ್ನು ಜಾಸ್ತಿ ಮಾಡುವ ಅಗತ್ಯವಿಲ್ಲ ನಮಾರು 20 ಮಂದಿ ಮಂತ್ರಿಗಳಿದ್ದರೇ ಸಾಕಾಗಿತ್ತು. 216 ಕ್ಕೆ ಶೇಕಡಾ ಹತ್ತರಷ್ಟು ಎಂದರೆ 20 ಇರಬೇಕಾಗಿತ್ತು, ಆದರೆ ನೀವು ಇರುವುದು 165 ಜನ ಇದರಲ್ಲಿ ಶೇಕಡಾ ಹತ್ತರಷ್ಟು ಎಂದರೆ ಹದಿನಾರೂವರೆ ಮಂತ್ರಿಗಳು ಇರಬೇಕಾಗಿತ್ತು, ಈಗಾಗಲೇ 20 ಮಂದಿಗಿಂತ ಜಾಸ್ತಿ ಮಾಡಿದ್ದೀರಿ ಇನ್ನೂ ಹೆಚ್ಚು ಮಾಡುವುದಕ್ಕೆ ಹೋಗಬೇಡಿ ಎಂದು ನಯಹೆ ಮಾಡುತ್ತೇನೆ, ನಿಮ್ಮಲ್ಲಿ ನಾನು ಏನಂತಿ ಮಾಡಿಕೊಳ್ಳುವುದು ನೀವೆ ಖರ್ಚನ್ನು ಜಾಸ್ತಿ ಮಾಡಿಕೊಳ್ಳುತ್ತಾ ಹೋಗುವುದಕ್ಕಿಂತ ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಿ ಬಡ ಜನರ ಅಭಿವೃದ್ಧಿಗೆ ಸಹಾಯ ಮಾಡಬಹುದು. ಇನ್ನು ಬಡಜನರಿಗೆ ಬೇಕಾಗಿರುವ ಆಹಾರ ಧಾನ್ಯಗಳ ಬಗ್ಗೆ ಮತ್ತು ಇದರ ಬೆರೆಗಳನ್ನು ಇಳಿಸುವುದರ ಬಗ್ಗೆ ಈ ಬಜೆಟ್ಟಿನಲ್ಲಿ ಏನೂ ಕಾಣುತ್ತಿಲ್ಲ, ಇದರ ಕಡೆಗೆ ತಾವು ಸ್ವಲ್ಪ ಹೆಚ್ಚಿನ ಗಮನ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಇನ್ನು ಇದರಲ್ಲಿ ರೋನುಗಳ ಬಗ್ಗೆ ಹೇಳುತ್ತಾ 63.72 ಕೋಟಿಯಷ್ಟನ್ನು ಕೇಂದ್ರಕ್ಕೆ ಕೊಡಬೇಕಾಗಿದೆ ಎಂದು ಹೇಳಿದ್ದಾರೆ. ಇದರ ಬಗ್ಗೆ ಹಿಂದೆ ಇದ್ದ ರಾಜ್ಯಪಾಲರು ಕೇಂದ್ರ ಸರಕಾರ ದೊಡನೆ ಸ್ವಲ್ಪ ಒರಟಾಗಿ ಜವಾಬು ಕೊಟ್ಟರು ಅವರೂ ಕೂಡ ನಮ್ಮಂತೆ ಒರಟಾಗಿದ್ದರು ಎಂದು ಕಾಣುತ್ತೆ. ಅವರು ದೇಶದ ಪರಿಸ್ಥಿತಿ ಬಗ್ಗೆ ಹೇಳಿದರೆ ಅವರು ನಂಸ್ಥಾ ಕಾಂಗ್ರೆಸ್ಸಿಗರ ಪ್ರಚೋದನೆಗೆ ಒಳಗಾಗಿ ಹೀಗೆ ಹೇಳಿದರು ಎಂದು ಅವರ ಮೇಲೆ ಏನಾ ಕಾರಣ ಅಪಾದನೆ ಮಾಡಿದರು. ಕೊನೆಗೆ ಅವರು ಹೇಳಿದ್ದು ತಪ್ಪು ಎಂದು ಮತ್ತೆ ಅವರ ಮೇಲೆ ಒತ್ತಾಯ ಮಾಡಿ ಹೇಳಿದರು, ಈಗ ನಮ್ಮದೇ ಆಡಳಿತ ಪಕ್ಷ ಬಂದಿರುವುದರಿಂದ ನಮ್ಮ ರಾಜ್ಯಕ್ಕೆ ನ್ಯಾಯವಾಗಿ ಎಷ್ಟು ಬರಬೇಕೋ ಅದರ ಬಗ್ಗೆ ಸೂಕ್ತವಾಗಿ ವ್ಯವಹಾರ ಮಾಡಿ ಅಷ್ಟು ಹಣವನ್ನು ಪಡೆಯಬೇಕು. 63 ಕೋಟಿಯಷ್ಟು ಹಣ ವೆಚ್ಚ ಮಾಡಿರುವುದು ಸರಿಯಾಗಿದೆ ಎಂದು ಕೇಂದ್ರಕ್ಕೆ ಹೇಳುವುದರಲ್ಲಿ ತಪ್ಪೇನಿಲ್ಲ, ಇವೆರ್ಲಾ ಎಮರ್ಜೆನ್ಸಿ ಚಾರ್ಜ್ ಚುನಾವಣೆಗಳನ್ನು ಮಾಡುವಾಗ ಕೇಂದ್ರದವರು ರಾಜ್ಯ ಸರಕಾರಕ್ಕೆ ಕೆಲವು ರಿಯಾಯಿತಿಗಳನ್ನು ಕೊಡಬೇಕಾಗಿತ್ತು, ಕೇಂದ್ರದವರು ಮಾತ್ರಾರಿಗೆ ಬೇಕಾದಷ್ಟು ರಿಯಾಯಿತಿಗಳನ್ನು ಕೊಟ್ಟರು? ಮದರಾಸಿನಲ್ಲಿರುವ ಡಿ. ಎಂ. ಕೆ. ಸರಕಾರಕ್ಕೇ ಸಹಾಯ ಕೊಡುತ್ತಿರುವಾಗ ನಮ್ಮದೇ ಪಕ್ಷದವರು ಕೇಂದ್ರದಲ್ಲಿ ಅಧಿಕಾರದಲ್ಲಿರುವಾಗ ಅವರಲ್ಲಿ ಸರಿಯಾಗಿ ಒತ್ತಾಯ ಹಾಕಿ ನಮಗೆ ನ್ಯಾಯವಾಗಿ ಬರಬೇಕಾದ ಸಹಾಯದ ಹಣವನ್ನು ಪಡೆಯಬೇಕು ಮತ್ತು ಇದಕ್ಕಾಗಿ ತಾವು ಸರಿಯಾದ ರೀತಿಯಲ್ಲಿ ಹೊಡೆದಾಡಿ ಹೆಚ್ಚು ಸಹಾಯ ಪಡೆಯಲು ಪ್ರಯತ್ನ ಮಾಡಬೇಕು ಎಂದು ನಾನು ಇಲ್ಲಿ ತಮ್ಮನ್ನು ಕೇಳಿಕೊಳ್ಳುತ್ತೇನೆ.

†ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ; ಈಗಾಗಲೇ ನಮ್ಮ ಮುಂದೆ ಮುಂಡಿಸಿರತಕ್ಕ ಆಯವ್ಯಯದ ಪಟ್ಟಿಯನ್ನು ಅನುಮೋದಿಸಲು ತುಂಬಾ ಸಂತೋಷಪಡುತ್ತೇನೆ, ಜೊತೆಗೆ ಹಣಕಾಸಿನ ಉಪಯೋಗ ಬಹಳ ಪ್ರಾಮುಖ್ಯವಾಗಿರತಕ್ಕದ್ದು, ಅದರಲ್ಲೂ ನಮಗೆ ಸಿಕ್ಕಿರುವ ಹಣಕಾಸಿನ ಸಚಿವರ ವಿಷಯದಲ್ಲಿ ನಾವು ಮೊದಲಿನಿಂದಲೂ ನಿರೀಕ್ಷೆ ಮಾಡುತ್ತಿದ್ದೆವು. ಇಂತಹ ಹಣಕಾಸಿನ ಇಲಾಖೆ ಅವರಿಗೆ ಈಗ ಸಿಕ್ಕಿರುವುದು ಈ ದೇಶದ ಸ್ಥಿತಿಯನ್ನು ಸಾಕಷ್ಟು ಉತ್ತಮಪಡಿಸಲು ಅನುಕೂಲವಾಗಿದೆ. ಅವರ ಗಮನಕ್ಕೆ ನಾನು ಇಲ್ಲಿ ಕೆಲವು ವಿಷಯುಗಳನ್ನು ತಮ್ಮ ಮೂಲಕ ತಿಳಿಸಲು ಇಷ್ಟಪಡುತ್ತೇನೆ

ರ್ಯಾಂಡ್ ರೆವೆನ್ಯೂ ವಿಷಯದಲ್ಲಿ ಯಾವುದಾದರೂ ಒಂದು ರೀತಿಯಾದ ನಿರ್ಧಾರವಾದ ನೀತಿ ಬರಬೇಕಾಗಿತ್ತು, ಆದರೆ ಕಂದಾಯ ಜಾಸ್ತಿಮಾಡಿ ರೈತರ ಮೇಲೆ ಕಂದಾಯ ಹಾಕಿ ಬಾಕಿಯನ್ನೆಲ್ಲಾ ಸೇರಿಸಿಕೊಡಬೇಕೆಂದು ಒಂದು ಕಡೆ ಹೇಳುತ್ತಾರೆ. ಇನ್ನೂ ಸರಿಯಾದ ಯಾವ ಒಂದು ತೀರ್ಮಾನಕ್ಕೂ ಬರದೆ ಬಡ ಜನರಿಗೆ ತುಂಬಾ ತೊಂದರೆಯಾಗುತ್ತಿದೆ. ಸುಮಾರು 65ನೇ ಸಾಲಿನಿಂದಲೂ ಡಿಮ್ಯಾಂಡು ತೋರಿಸಿ ಬಾಕಿಯನ್ನು ತೋರಿಸಿಕೊಂಡು ಬರುತ್ತಿದ್ದಾರೆ. ಇದನ್ನು ವಜಾಮಾಡಿ ವರ್ಷಂದೆ ಕಂದಾಯ ಜಾಸ್ತಿ ಮಾಡಿ ವಸೂಲಿಗೆ ಕ್ರಮ ಕೈಗೊಳ್ಳಬೇಕು. ಈಗಲಾದರೂ ಸರ್ಕಾರ ಇದರ ಬಗ್ಗೆ ಎಲ್ಲ ವಿಚಾರಗಳನ್ನೂ ಪರಿಶೀಲನೆ ಮಾಡಿ ಒಂದು ತೀರ್ಮಾನಕ್ಕೆ ಬಂದು ಸರಿಯಾದ ರೀತಿ ಕಂದಾಯ ನಿರ್ಧರಿಸಬೇಕೆಂದು ನಾನು ಮಾಡುತ್ತೇನೆ. ಮೊದಲು ಹಿಂದೆ ಇದ್ದ ಕಂದಾಯವನ್ನು ವಜಾ ಮಾಡುತ್ತೇವೆಂದು ಹೇಳಿದ್ದರು. ಈಚೆಗೆ ಇದನ್ನು ಬದಲಾವಣೆ ಮಾಡಿ ಸಣ್ಣ ರೈತರಿಗೆ 5-10 ರೂಪಾಯಿಗಳಂತೆ ವರ್ಷಕ್ಕೆ ವಜಾ ಮಾಡುವುದಾಗಿ ಹೇಳಿದ್ದಾರೆ. ಆದರಿಂದ ಯಾವ ಉಪಯೋಗ ಆಗಲಾರದು. ಆ ರೀತಿ ವಜಾ ಮಾಡುವುದು ಸರಿಯಲ್ಲ. ಯೋಚನೆ ಮಾಡಿ ಮಾಡಿದರೆ ಸರ್ಕಾರಕ್ಕೆ ಹಣಕಾಸಿನ ಪರಿಸ್ಥಿತಿ ಉತ್ತಮಪಡಿಸಲು ಸಹಾಯವಾಗುತ್ತದೆ.

ಇನ್ನು ಅತಿಮುಖ್ಯವಾದ ಒಂದು ವಿಚಾರವನ್ನು ಹಣಕಾಸಿನ ಸಚಿವರ ಗಮನಕ್ಕೆ ತರಬೇಕಾಗಿದೆ. ನಮ್ಮ ದೇಶದಲ್ಲಿ ಅದರಲ್ಲೂ ಮರೆನಾಡಿನಲ್ಲಿ ಒಂದಕ್ಕೆ ಎರಡರಷ್ಟು ಭೂಮಿಯನ್ನು ಅತಿಕ್ರಮಣಮಾಡಿ. ಕಂದಾಯ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಇತ್ಯಾದಿ ಅನೇಕ ರೆವಿನ್ಯೂ ಬಾಬುಗಳು ಮೋಸ ಆಗುತ್ತಿವೆ. ಇದಕ್ಕಾಗಿ ನಾನು ಸಲಹೆ ಮಾಡುವುದು ಫಾರಿನ್‌ನಿಂದ ಸರಿಯಾದ ಎಕ್ಸ್‌ಪರ್ಟ್‌ಗಳನ್ನು ಕರೆಸಿ ಹೆಚ್ಚಾಗಿ ಜಮೀನು ಇರುವ ಭಾಗದಲ್ಲಿ ಸರಿಯಾಗಿ ಸರ್ವೇ ಮಾಡಿಸಬೇಕು. ಆಗ ಎಷ್ಟು ಜನ ಕಂದಾಯ ಕೊಡದೆ ಜಮೀನು ಹೊಂದಿದ್ದಾರೆ ಎನ್ನುವುದು ಸಿಗುತ್ತದೆ ಮತ್ತು ಸರ್ಕಾರಕ್ಕೆ ಜಾಸ್ತಿ ಹಣವೂ ಸಿಗುತ್ತದೆ, ಇದರಲ್ಲಿ ಕಂದಾಯ ಹಾಗೂ ಅಗ್ರಿಕರ್ಚರಲ್ ಇನ್‌ಕಂಟ್ಯಾಕ್ಸ್ ಇತ್ಯಾದಿ ಎಲ್ಲ ರೀತಿಯ ತೆರಿಗೆಗಳೂ ಸರ್ಕಾರಕ್ಕೆ ಹೆಚ್ಚು ಸಿಗುತ್ತದೆ ಎನ್ನುವುದು ನನ್ನ ಖಚಿತವಾದ ಅಭಿಪ್ರಾಯ, ಇದರ ಬಗ್ಗೆ ಸರಿಯಾದ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಇನ್ನು ದರಖಾಸ್ತು ಜಮೀನುಗಳ ಬಗ್ಗೆ ಹೇಳುವಾಗ ಹಿಂದೆ ಒಂದು ಕಮಿಟಿ ಮಾಡಿದ್ದರು. ಈ ಕಮಿಟಿಯವರು ಶಿಫಾರಸು ಮಾಡಿದ ಮೇಲೆ ಅದನ್ನು ಸರ್ಕಾರದ ವತಿಯಿಂದ ತೀರ್ಮಾನ ಕೊಡುವಾಗ ದರಖಾಸ್ತು ರಿಕಾರ್ಡುಗಳೇ ಪೂರ್ತಿಯಾಗಿ ವಿಲೇವಾರಿಯಾಗುವುದಿಲ್ಲ. ಈಗಲೂ ಕೂಡ 57 ರ ರಿಕಾರ್ಡು ಇನ್ನೂ ಮೈನಲು ಆಗಿಲ್ಲ. ಕಮಿಟಿ ಮಾಡಿದರೂ ಅದರಿಂದೇನೂ ಅನುಕೂಲವಾಗಲಿಲ್ಲ. ಇದರ ಬಗ್ಗೆ ರೈತ ಹಾಕುವಾಗ ಅಧಿಕಾರಿಗಳು ಸಹಾಯ ಮಾಡುತ್ತಿಲ್ಲ, ಆದುದರಿಂದ ಸರ್ಕಾರದಲ್ಲಿರುವ ತಹಶೀಲುದಾರರುಗಳೇ ಅಡ್ಜೈನರಿ ಕಮಿಟಿಯ ಶಿಫಾರಸಿಗೆ ಅನುಗುಣವಾಗಿ ದರಖಾಸ್ತು ಜಮೀನುಗಳ ಬಗ್ಗೆ ವಿಲೇವಾರಿ ಮಾಡುವಂತೆ ಸರ್ಕಾರ ರೂಲ್ಸ್ ಮಾಡಬೇಕು. ತಹಶೀಲುದಾರರು ಅಸಿಸ್ಟೆಂಟು ಕಮಿಷನರು ಹಾಗೂ ಡಿ ಸಿ ಕಡೆಗೆ ಪೇಪರು ಕಳುಹಿಸಬೇಕೆಂದು ನಮ್ಮನೆ ನಿಧಾನ ಮಾಡುವುದು ಆಗುತ್ತಿದೆ. ಆದುದರಿಂದ ಸರ್ಕಾರದವರು ಕಮಿಟಿಯ ರೆಕಮೆಂಡೇಷನ್‌ನಂತೆ ಬೇಗ ತಹಶೀಲುದಾರರೇ ದರಖಾಸ್ತು ಜಮೀನು ವಿಲೇ ಮಾಡಬಹುದು ಎಂದು ಸೂಕ್ತವಾದ ಸೂಚನೆಗಳನ್ನು ಕೊಡಬೇಕು ಮತ್ತು ಜಾಗ್ರತೆ ಮಾಡಬೇಕೆಂದು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ವಾಹನಗಳ ಟ್ಯಾಕ್ಸ್ ವಿಚಾರದಲ್ಲಿ ಹೇಳಬೇಕಾಗಿದೆ. ಇದರಲ್ಲಿ ಅಗತಕ್ಕ ಅನ್ಯಾಯಗಳು ಬೇರೆ ಎಲ್ಲೂ ಆಗುತ್ತಿಲ್ಲ. ಇದನ್ನು ನಾನು ಸುಮಾರು ಐದು ವರ್ಷಗಳಿಂದಲೂ ಸರ್ಕಾರಕ್ಕೆ ಹೇಳುತ್ತಲೇ ಬರುತ್ತಿದ್ದೇನೆ. ಇದರ ಬಗ್ಗೆ ಸರ್ಕಾರ ತಕ್ಕ ಕ್ರಮ ತೆಗೆದುಕೊಳ್ಳಲು ಸಾಧ್ಯವೇ ಆಗಲಿಲ್ಲ. ಇದರಲ್ಲಿ ಕೆಲವು ರೂಟುಗಳಲ್ಲಿ ಕಂಟ್ರಾಕ್ಟ್ ಕ್ಯಾರೇಜ್ ಇಲ್ಲವೇ ಟೂರಿಸ್ಟ್ ಎಂದು ಬೋರ್ಡ್ ಹಾಕಿಕೊಂಡು ಮೊದಲು ರಾತ್ರಿ ವೇಳೆ ಹೋಗುತ್ತಿದ್ದರು. ಈಗ ಹಗಲೂ ರಾತ್ರಿ ಹೋಗುತ್ತಲೇ ಇವೆ

ಕಾಂಟ್ರಾಕ್ಟ್ ಕ್ಯಾರೇಜು ಎಂದು ಯಾರದೋ ಹೆಸರಿನಲ್ಲಿ ಪ್ರತಿದಿನವೂ ಪರ್ಮಿಟ್ಟುಗಳನ್ನು ಪಡೆದು ದಿನವೂ ರೆಗ್ಯುಲರ್ ರೂಟು ಬಸ್ಸುಗಳಂತೆ ಓಡಿಸುತ್ತಿದ್ದಾರೆ. ಇವನ್ನು ಯಾವ ಪೋಲೀಸು ಅಧಿಕಾರಿಗಳೇ ಆಗಲಿ, ಇಲ್ಲವೇ ಟ್ರಾನ್ಸ್‌ಪೋರ್ಟು ಅಧಿಕಾರಿಗಳೇ ಆಗಲೀ ಸರಿಯಾಗಿ ಚೆಕ್ ಮಾಡುತ್ತಿಲ್ಲ. ಏಕೆಂದರೆ ಇವೆಲ್ಲಾ ಒರೀ ಮಾಮೂಲಿನಿಂದಲೇ ನಡೆದುಕೊಂಡು ಹೋಗುತ್ತಿದೆ. ನಾನೂ ಕೂಡ ಇದರ ಬಗ್ಗೆ ನಮ್ಮ ಪಕ್ಷದ ಪಾರ್ಟಿ ಮೀಟಿಂಗಿನಲ್ಲಿ ಹಾಗೂ ಸರ್ಕಾರದವರಲ್ಲಿ ಸರಿಯಾದ ರೀತಿಯಲ್ಲಿ ಇದರ ಬಗ್ಗೆ ಚೆಕ್ ಮಾಡುತ್ತಿಲ್ಲ, ಒರೀ ಖಾಸಗಿಯವರಿಗೇ ಹೆಚ್ಚು ಅವಕಾಶ ಕೊಟ್ಟು ಸರ್ಕಾರಕ್ಕೆ ಬರುವ ಹಣಕಾಸು ಕಡಿಮೆಯಾಗುತ್ತಿದೆ ಎಂದು ಹೇಳುತ್ತಲೇ ಬಂದಿದ್ದೇನೆ. ಇದರ ಬಗ್ಗೆ ಇರಾಖೆಯವರು ಸರಿಯಾಗಿ ಇನ್ನೂ ಯೋಚನೆ ಮಾತಿಲ್ಲ. ಈಗ ನಾವು ಎಲ್ಲ ನೋಡಿದರೂ ಕಾಂಟ್ರಾಕ್ಟ್ ಕ್ಯಾರೇಜು ಇಲ್ಲವೇ ಟೂರಿನ್ನು ಎಂದು ಬೋರ್ಡು ಹಾಕಿಕೊಂಡು ನೂರಾರು ಬಸ್ಸುಗಳು ಓಡಾಡುತ್ತಲೇ ಇವೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಅದಷ್ಟು ಬೇಗ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಏನಂತಿ ಮಾಡಿಕೊಳ್ಳುತ್ತೇನೆ. ಖಾಸಗಿ ಬಸ್ಸುಗಳಿಗೆ ಅವಕಾಶ ಇಲ್ಲದಂತೆ ಸರ್ಕಾರಿ ಬಸ್ಸುಗಳನ್ನೇ ಈ ಬಗ್ಗೆ ಓಡಿಸಲು ನಿರ್ಧರಿಸಬೇಕು.

4-30 P.M.

ಇನ್ನು ಮತದಾರರ ಪಟ್ಟಿಯ ಬಗ್ಗೆ ಅನೇಕ ಜನ ಮಾನ್ಯ ಸ್ನೇಹಿತರು ಈಗಾಗಲೇ ಹೇಳಿದ್ದಾರೆ. ನನಗನ್ನಿಸುತ್ತದೆ, ಬಹುಶಃ ಮತದಾರರ ಪಟ್ಟಿಯನ್ನು ಜನಸಂಘದವರ ಕೈಯಲ್ಲಿ ಏನಾದರೂ ಸಂಬಂಧಪಟ್ಟ ಅಧಿಕಾರಿಗಳು ಕೊಟ್ಟು, ಅವರಿಗೆ ಬೇಡವಾದವರ ಹೆಸರುಗಳನ್ನು ತೆಗೆದು ಹಾಕಬಿಡಿ ಎಂದು ಹೇಳಿರಬಹುದೆಂದು ಕೆಲವು ಹೆಸರುಗಳನ್ನು ಪಟ್ಟಿಯಿಂದ ತೆಗೆದು ಹಾಕಿರುವುದಕ್ಕೆ ಆಧವಾ ಹೊಡೆದುಹಾಕಿರುವುದಕ್ಕೆ ಸರ್ಟಿಫಿಕೇಟ್ ಇಲ್ಲ. ನುಮ್ಮನೆ ಕೆಂಪು ಮಸಿಯಲ್ಲಿ ಹೊಡೆದುಹಾಕಿದ್ದಾರೆ. ಬದುಕಿರುವ ಮುನಿಸಿಪರ್ ಪ್ರೆಸಿಡೆಂಟರ ಹೆಸರನ್ನು ಸತ್ತು ಹೋಗಿದ್ದಾರೆ ಎಂದು ಪಟ್ಟಿಯಲ್ಲಿ ತೋರಿಸಿದ್ದಾರೆ. ಹಿಂದೆ ಪಾರ್ಲಮೆಂಟ್ ಚುನಾವಣೆ ನಡೆದಾಗಲೂ ಕೂಡ ಈ ರೀತಿ ಮಾಡಿದ್ದರು. ಈ ಸಲದ ಚುನಾವಣೆಯಲ್ಲಿಯೂ ಕೂಡ ಅದೇ ರೀತಿ ಮಾಡಿದ್ದಾರೆ. ಈ ರೀತಿ ಮಾಡುವುದರಿಂದ ಪ್ರಜಾಪ್ರಭುತ್ವದ ತಳಪಾಯವನ್ನೇ ಕಿತ್ತುಹಾಕಿದಂತಾಗುತ್ತದೆಂದು ಹೇಳುತ್ತೇನೆ. ಜಾತಿಯ ಆಧಾರದ ಮೇಲೆ ಹಲವರ ಹೆಸರನ್ನು ಪಟ್ಟಿಯಲ್ಲಿ ಹೊಡೆದುಹಾಕಿದ್ದಾರೆ. ಈ ಬಗ್ಗೆ ಸರ್ಕಾರದವರು ತನಿಖೆ ಮಾಡಿ, ಹೆಸರುಗಳನ್ನು ಹೊಡೆದುಹಾಕುವುದಕ್ಕೆ ಯಾರು ಕಾರಣರಾಗಿದ್ದಾರೆಂಬುದನ್ನು ಕಂಡುಹಿಡಿಯಬೇಕೆಂದು ಮತ್ತು, ಈ ಬಗ್ಗೆ ನಾಕಷ್ಟು ಗಮನ ಕೊಡಬೇಕೆಂದು ಮಾತ್ರ ಹೇಳುತ್ತೇನೆ.

ವಿದ್ಯಾಭ್ಯಾಸದ ಬಗ್ಗೆ ಒಂದು ವಿಷಯವನ್ನು ಹೇಳುತ್ತೇನೆ. ಹಿಂದಿನ ಸರ್ಕಾರದವರು ತಾಲೂಕಾ ಉಪಾಧ್ಯಾಯರುಗಳನ್ನು 5 ವರ್ಷ ಸರ್ವಿಸ್ ಆದ ಮೇಲೆ ಒಂದು ತಾಲ್ಲೂಕಿಂದ ಇನ್ನೊಂದು ತಾಲ್ಲೂಕಿಗೆ ವರ್ಗ ಮಾಡಬೇಕೆನು ವ ತತ್ವವನ್ನು ಒಪ್ಪಿಕೊಂಡಿದ್ದರು. ಇದನ್ನು ಸಂಬಂಧಪಟ್ಟ ಅಧಿಕಾರಿಗಳು ಜಾರಿಗೆ ತರುತ್ತಿದ್ದಾರೆಯೇ ಎಂದು ನಾನು ಕೇಳಬೇಕಾಗಿದೆ. ನನ್ನ ಕ್ಷೇತ್ರದಲ್ಲಿ ಒಬ್ಬ ಉಪಾಧ್ಯಾಯರಿಗೆ 15 ವರ್ಷ ಸರ್ವಿಸ್ ಒಂದೇ ಸ್ಥಳದಲ್ಲಿ ಆಗಿದೆ. ಅವರಿಗೆ ಮೂರು ಸಲ ವರ್ಗಮಾಡಿದಾಗಲೂ ಕೂಡ ಅವರು ಅದನ್ನು ಕ್ಯಾನ್ಸಲ್, ಮಾಡಿಸಿಕೊಂಡು ಅದೇ ಸ್ಥಳದಲ್ಲಿ ಇದ್ದಾರೆ. ಅವರು ಆ ಸ್ಥಳದಲ್ಲಿ ಇದ್ದುಕೊಂಡು ಲೇವಾದೇವಿ ಮಾಡುತ್ತಿದ್ದಾರೆ, ಮತ್ತು ಅವರಿಗೆ 200 ಮಣ ಅಡಿಕೆ ಬರುವಂತಹ ತೋಟ ಇದೆ. ಇವರ ವರ್ಗದ ಆರ್ಡರನ್ನು ಕ್ಯಾನ್ಸಲ್ ಮಾಡಿದ ಅಧಿಕಾರಿಯ ಮೇಲೆ ಸರ್ಕಾರದವರು ಕ್ರಮ ತೆಗೆದುಕೊಳ್ಳಬೇಕು ಮತ್ತು 5 ವರ್ಷ ಸರ್ವಿಸ್ ಆದಂಥ ಉಪಾಧ್ಯಾಯರುಗಳನ್ನೆರಾ ಬೇರೆ ಕಡೆಗೆ ವರ್ಗ ಮಾಡಬೇಕು. ಒಂದೇ ಸ್ಥಳದಲ್ಲಿ 5 ವರ್ಷಕ್ಕಿಂತ ಹೆಚ್ಚು ಕಾಲ ಇರುವವರ ವಿಷಯದಲ್ಲಿ ಸರ್ಕಾರದವರು ಒಂದು ಕಾರ್ಯಕ್ರಮ ಹಾಕಿಕೊಂಡು ಅದರ ಪ್ರಕಾರ ವರ್ಗಮಾಡಬೇಕು, ಆ ರೀತಿ ಮಾಡುವುದರ ಮೂಲಕ ಈ ದೇಶದಲ್ಲಿ ಒಳ್ಳೆಯ ಆದಳಿತ ಇದೆ ಎಂಬುದನ್ನು ತೋರಿಸಿಕೊಡಬೇಕು.

ಆರೋಗ್ಯ ಇರಾಖೆಯ ಬಗ್ಗೆ ಹೇಳುವುದಾದರೆ, ಈಗ ಎಲ್ಲ ಭಾಗಗಳಿಗೂ ಡಾಕ್ಟರ್‌ಗಳು ಬರುತ್ತಿದ್ದಾರೆ. ಆದರೆ ಸಾಕಷ್ಟು ಔಷಧದ ನರಬರಾಜು ಆಗುತ್ತಿಲ್ಲ. ಸಾಕಷ್ಟು ಔಷಧವನ್ನು ನರಬರಾಜು ಮಾಡುವುದಕ್ಕೆ ಬಜೆಟ್‌ನಲ್ಲಿ ಹಾಸ್ತಿ ಹಣ ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಏನಂತಿ ಮಾಡಿಕೊಳ್ಳುತ್ತೇನೆ.

ತುಂಗಭದ್ರ ಮತ್ತು ಭದ್ರಾ ವ್ಯಾಜೆಕ್ಟ್‌ಗಳನ್ನು ಕಟ್ಟಯಾಗಿದೆ. ಇದರಿಂದ ಸಾಕಷ್ಟು ಜಮೀನು ಮುಳುಗಡೆಯಾಯಿತು. ಈ ಯೋಜನೆಗಳಿಂದ ಎಷ್ಟು ಎಕರೆಗಳಿಗೆ ನೀರಾವರಿಯಾಗಿತ್ತೊ

(ಶ್ರೀ ಕೆ. ಎನ್. ವೀರಪ್ಪಗೌಡ)

ಅಷ್ಟು ಎಕರೆಗಳಿಗೆ ನೀರಾವರಿಯಾಗಿಲ್ಲ. ಏಕೆಂದರೆ ಈ ಯೋಜನೆಗಳನ್ನು ಕೈಗೊಂಡಿದ್ದರಿಂದ ಸಾಕಷ್ಟು ಕಾಡಿನ ಪ್ರದೇಶ ಮುಳುಗಡೆಯಾಗಿ ಮಳೆ ಬರುವುದು ಕಡಿಮೆಯಾಯಿತು. ಪರಿಸ್ಥಿತಿ ಈ ರೀತಿ ಇದ್ದರೂ ಕೂಡ ಆ ಭಾಗದಲ್ಲಿ ಮತ್ತೆ ಮಾಲತಿ ಯೋಜನೆ ಮತ್ತು ಭದ್ರ ಮೇಲ್ದಂಡೆ ಯೋಜನೆ ಕೈಕೊಳ್ಳಬೇಕೆಂದು ಹೊರಟಿರುವುದು ಸರಿಯಲ್ಲ. ಕೋಟಿಗಟ್ಟಲೆ ಹಣವನ್ನು ಖರ್ಚುಮಾಡಿ ದೊಡ್ಡ ದೊಡ್ಡ ಯೋಜನೆಗಳನ್ನು ಕೈಕೊಂಡರೆ ಅದರಿಂದ ಯಾವ ಅನುಕೂಲವೂ ಸಹ ಆಗುವುದಿಲ್ಲ. ಇದರ ಬದಲು ನೀರಾವರಿ ಅನುಕೂಲ ಇರುವ ಕಡೆ ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ಕೈಕೊಂಡರೆ 8 ದಿವಸಗಳಲ್ಲಿಯೇ ಜಮೀನಿಗೆ ನೀರನ್ನು ಒದಗಿಸಬಹುದು. ಮತ್ತು ಹಣವೂ ಸಹ ಜಾಸ್ತಿ ಖರ್ಚಾಗುವುದಿಲ್ಲ. ಆದ್ದರಿಂದ ನಮ್ಮ ಮಲೆನಾಡಿನಲ್ಲಿ ಸ್ಕಾರ್ ಇರಿಗೇಷನ್‌ಗೆ ಮೊದಲ ಪ್ರಾಶಸ್ತ್ಯ ಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಭೂಸುಧಾರಣೆಯ ಬಗ್ಗೆ ಒಂದು ವಿಷಯ ಹೇಳಬೇಕಾಗಿದೆ. ಇದನ್ನು ಮೊದಲು ಬಗೆಹರಿಸಬೇಕು. ಗೇಣಿದಾರರು ಇಂದು ಅತಂತ್ರರಾಗಿದ್ದಾರೆ. ಗೇಣಿದಾರರಿಗೆ ಅನುಕೂಲಪಡಿಸಿಕೊಡಬೇಕೆಂಬ ಕಾರಣದಿಂದ ಎಲ್ಲ ತಾಲ್ಲೂಕ್‌ಗಳಲ್ಲಿಯೂ ಲ್ಯಾಂಡ್ ಟ್ರಿಬ್ಯುನಲ್‌ಗಳು ಇವೆ. ಇಲ್ಲಿ ಕೆಲಸ ಮಾಡುವವರಿಗೆ ಮುನ್ಸಿಫ್ ಎಂದು ಕರೆಯುತ್ತಾರೋ ಅಥವಾ ಮ್ಯಾಜಿಸ್ಟ್ರೇಟ್ ಎಂದು ಕರೆಯುತ್ತಾರೋ ನನಗೆ ಗೊತ್ತಿಲ್ಲ. ಈ ಲ್ಯಾಂಡ್ ಟ್ರಿಬ್ಯುನಲ್‌ಗಳನ್ನು ಮೊದಲು ಕಿತ್ತು ಹಾಕಬೇಕು. ಇವುಗಳಿಂದ ಯಾವ ಪ್ರಯೋಜನವೂ ಕೂಡ ಗೇಣಿದಾರರಿಗೆ ಆಗುತ್ತಿಲ್ಲ. ಓಪನ್ ಕೋರ್ಟ್‌ನಲ್ಲಯೇ ಅಲ್ಲಯ ಮ್ಯಾಜಿಸ್ಟ್ರೇಟರು ಗೇಣಿದಾರರಿಗೆ ಬರೆದುಕೊಟ್ಟು ಹೋಗಿ ಎಂದು ಹೇಳುತ್ತಾರೆ. ಗೇಣಿದಾರರು ದಡ್ಡರು ಮತ್ತು ಬಡವರು. ರೆಕಾರ್ಡ್ ಮೇನ್‌ಟೇನ್ ಮಾಡುವುದು ಅವರಿಗೆ ಗೊತ್ತಿಲ್ಲ. ಇಂತಹವರಿಗೆ ಅಡ್ಜೋಕೇಟ್‌ಗಳನ್ನು ಇಡಗಿಸಿ ಅವರ ಫೀಯನ್ನು ಸರ್ಕಾರದವರೇ ಕೊಡುತ್ತಾರೆಂದು ಹಿಂದಿನ ಸರ್ಕಾರದವರು ಹೇಳಿದ್ದರು. ಆದರೆ ಗೇಣಿದಾರರಿಗೆ ಖರ್ಚುಮಾಡುವುದು 25 ರೂಪಾಯಿಗಳಾದರೆ ಸರ್ಕಾರದವರು ಅಂತಹವರಿಗೆ ಮುಂಜೂರು ಮಾಡುವುದು 15 ರೂಪಾಯಿಗಳನ್ನು ಮಾತ್ರ. ಆ ಹಣವನ್ನು ತೆಗೆದುಕೊಳ್ಳಬೇಕಾದರೆ ಆತ ಮತ್ತೆ 10 ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಇದರಿಂದ ಗೇಣಿದಾರರಿಗೆ ಯಾವ ಅನುಕೂಲವೂ ಸಹ ಆಗುತ್ತಿಲ್ಲ. ಇದರ ಬಗ್ಗೆ ನನ್ನ ನಲಹೆ ಏನೆಂದರೆ ಈ ಲ್ಯಾಂಡ್ ಟ್ರಿಬ್ಯುನಲ್‌ಗಳನ್ನು ಮೊದಲು ಕಿತ್ತು ಹಾಕಿ, ಅದರ ಜಾಗದಲ್ಲಿ ಸ್ಪೆಷಲ್ ತಹಶೀಲ್‌ದಾರರನ್ನು ಅಥವಾ ಅಸಿಸ್ಟೆಂಟ್ ಕಮೀಷನರ್‌ರನ್ನು ನೇಮಕ ಮಾಡಿ ರಿಕಾರ್ಡ್ ಮೇನ್‌ಟೇನ್ ಮಾಡುವ ಅಧಿಕಾರವನ್ನು ಕೊಡಿ ಅಡ್ಜೋಕೇಟ್‌ರನ್ನು ಹಾಜರಾಗಲು ಅವಕಾಶ ಕೊಡಬೇಡಿ. ಅವರು ಗೇಣಿದಾರರು ಯಾವ ಯಾವ ಜಮೀನಿನಲ್ಲಿ ಎಷ್ಟೆಷ್ಟು ವರ್ಷಗಳಿಂದ ಗೇಣಿ ಮಾಡುತ್ತಿದ್ದಾರೆ, ಅವರ ಮನೆ ಎಲ್ಲಿದೆ, ಗೊಬ್ಬರದ ಗುಂಡಿ ಎಲ್ಲಿ ಇದೆ ಎಂಬುದನ್ನೆಲ್ಲಾ ಸ್ಥಳದಲ್ಲಿಯೇ ಹೋಗಿ ಮಹಜರ್ ಮಾಡಿ, ಅಂತಹ ಜಮೀನುಗಳನ್ನು ಅವರಿಗೆ ವಹಿಸಿಕೊಡಲು ತಕ್ಕಂಥ ಏರ್ಪಾಡನ್ನು ಇನ್ನು 6 ತಿಂಗಳೊಳಗೆ ಮಾಡುವಂತೆ ಏರ್ಪಾಡು ಮಾಡಬೇಕು. ನಿಧಾನ ಮಾಡಿದರೆ ಅದರಿಂದ ಬೇರೆಯವರಿಗೆ ಅನುಕೂಲವಾಗುತ್ತದೆ. ನಮ್ಮ ನರಸಿಂಹರಾಜಪುರದಲ್ಲಿ ಇಬ್ಬರು ಸಾವುಕಾರರಿಗೋಸ್ಕರ ಹಳೆಯ ರೆಕಾರ್ಡ್‌ನ್ನು ತೆಗೆದು ಬೇರೆ ರೆಕಾರ್ಡ್‌ನ್ನು ಬರೆದು ಇಟ್ಟಿದ್ದಾರೆ. ಗೇಣಿದಾರರು ಸಾಹುಕಾರರಿಗೆ ತಮ್ಮ ಪಾಲಿನ ಗೇಣಿಯನ್ನು ಕೊಟ್ಟಿದ್ದರೂ ಕೂಡ ಅವರಿಗೆ ಅನ್ಯಾಯ ಮಾಡಿದ್ದಾರೆ. ಮತ್ತೊಬ್ಬ ಗೇಣಿದಾರರು ತಾನು ರಾಯರನ್ನು ಇಟ್ಟಿದ್ದೇನೆ, ತನಗೆ ಅನುಕೂಲವಾಗುತ್ತದೆಂದು ತಿಳಿದುಕೊಂಡಿದ್ದ. ಆದರೆ ಆ ಕೇಸ್ ಅವನಿಗೆ ವಿರುದ್ಧವಾಗಿ ಆಗಿದ್ದರೂ ಕೂಡ, ಅವನ ರಾಯರ್ ಅದನ್ನು ತಿಳಿಸದೆ, ನಿನ್ನ ಕೇಸ್ ಹೈಕೋರ್ಟ್‌ಗೆ ಹೋಗಿದೆ, ಇನ್ನೂ ತೀರ್ಮಾನವಾಗಿಲ್ಲವೆಂದೇ ಹೇಳುತ್ತಿದ್ದ. ಈ ರೀತಿಯೆಲ್ಲಾ ಗೇಣಿದಾರರಿಗೆ ಅನ್ಯಾಯವಾಗುತ್ತಿದೆ. ದಯವಿಟ್ಟು ಅತಿ ಜಾಗ್ರತೆಯಾಗಿ ಈ ಭೂ ಟ್ರಿಬ್ಯುನಲ್‌ಗಳನ್ನು ವಜಾ ಮಾಡಿ,ಅದರ ಜಾಗದಲ್ಲಿ ಸ್ಪೆಷಲ್ ತಹಶೀಲ್‌ದಾರರನ್ನು ಅಥವಾ ಅಸಿಸ್ಟೆಂಟ್ ಕಮೀಷನರನ್ನು ನೇಮಕ ಮಾಡಿ ಭೂಸುಧಾರಣೆಯನ್ನು ಜಾಗ್ರತೆ ಜಾರಿಗೆ ತರಬೇಕೆಂದು ಮಾತ್ರ ಹೇಳಿ ನನಗೆ ಮಾತನಾಡಲು ಹೆಚ್ಚು ಸಮಯ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಬಿ. ಎ. ಕಕ್ಕಿರಾಯ (ಬಂಟ್ವಾಳ).—ಸ್ಪೀಕರ್, ನಮ್ಮ ಅರ್ಥ ಸಚಿವರು ಒಂದು ತಾತ್ಕಾಲಿಕವಾದ ಬಡ್ಜೆಟ್‌ನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಈ ಬಡ್ಜೆಟ್‌ನಲ್ಲಿ ಅನೇಕ ರೋಪ ದೋಷಗಳು ಇವೆ ಎನ್ನುವ ಮಾತನ್ನು ಈ ಹಿಂದೆ ಮಾತನಾಡಿದಂಥ ಈ ಸಭೆಯ ಎರಡೂ ಕಡೆಯ ಸದಸ್ಯರು ಹೇಳಿದರು. ಈ ರೋಪದೋಷಗಳನ್ನು ಹಿಂದಿನ ಸರ್ಕಾರದ ತಲೆಯ ಮೇಲೆ ಹೊರಿಸಿದ್ದಾರೆ. ನನಗೆ ಅದರ ಮೇಲೆ ಅನುಕಂಪ ಬರುತ್ತದೆ. ಇನ್ನು ಮುಂದೆ ಹೊಸ ಬಡ್ಜೆಟ್ ಬರುವುದಿದೆ.

ಆಗ ನಾವು ಅನೇಕ ವಿಚಾರಗಳನ್ನು ಚರ್ಚೆ ಮಾಡುವವರಿದ್ದೇವೆ. ಮಾನ್ಯ ಅರ್ಥ ಸಚಿವರು ಬಹಳ ದೊಡ್ಡ ಕಟ್ಟಪ್ಪಣೆಯನ್ನು ಇಟ್ಟುಕೊಂಡು ಅಧಿಕಾರಕ್ಕೆ ಬಂದಿದ್ದೇವೆಂದು ಹೇಳಿದರು. ಅದು ಸಂತೋಷ. ಜನರ ಕಟ್ಟಪ್ಪಣೆ ಎಲ್ಲರೂ ಒಪ್ಪುವುದಿಲ್ಲ. ದೆಹಲಿಯ ಗಾಳಿ ರಾಜ್ಯದಲ್ಲಿ ಬೀಸಿತು, ಅದರ ಕಾರಣದಿಂದ ಕೆಲವರು ಸುಲಭವಾಗಿ ಆರಿಸಿ ಬಂದೆವೆಂದು ತಿಳಿಯುವವರೂ ನಿಮ್ಮಲ್ಲಿ ಇರಬಹುದು. ಜನರ ಕಟ್ಟಪ್ಪಣೆಯನ್ನು ಆದಷ್ಟು ಜಾಗ್ರತೆ ಜಾರಿಗೆ ತರಬೇಕೆನ್ನುವವರು ನಿಮ್ಮಲ್ಲೂ ಬಹುಮಂದಿ ಇದ್ದಾರೆಂದು ಗೊತ್ತಿತ್ತು. ಸಮತಾವಾದದ ವಿಚಾರವನ್ನು ನಾವು ಮಾತನಾಡುತ್ತೇವೆ. ಇವತ್ತಿನ ಪರಿಸ್ಥಿತಿಯಲ್ಲಿ ಸಮತಾವಾದವನ್ನು ಒಂದೇ ಸಲ ಜಾರಿ ಮಾಡುತ್ತೇವೆಂದು ಈ ಸಭೆಯಲ್ಲಿ ಸರ್ಕಾರದವರು ಹೇಳಿದರೆ ಅದನ್ನು ನಂಬುವುದು ಕಷ್ಟ. ನಮ್ಮ ಅರ್ಥ ಸಚಿವರು ಮತ್ತು ನಮ್ಮ ಸರ್ಕಾರದವರು ಚಿಕ್ಕ ಚಿಕ್ಕ ಹೆಜ್ಜೆಗಳನ್ನು ದಿಟ್ಟತನದಿಂದ ಇಟ್ಟರೆ ಅವರು ಸರಿಯಾದ ದಿಕ್ಕಿಗೆ ಹೋಗುತ್ತಾರೆಂದು ಹೇಳುತ್ತೇನೆ. ನಾನು ಈಗ ಹೆಡ್ಡಾಗಿ ಸರ್ಕಾರದ ಧೋರಣೆ ವಿಚಾರಕ್ಕೆ ಹೋಗದೆ, ಸಧ್ಯದಲ್ಲಿ ಇಡಬೇಕಾದ ದಿಟ್ಟವಾದ ಹೆಜ್ಜೆ ಏನು ಎಂಬುದನ್ನು ಹೇಳುತ್ತೇವೆ. ಭೂಸುಧಾರಣೆ ಬಗ್ಗೆ ಅನೇಕರು ಮಾತನಾಡಿದರು. ಇವೊತ್ತು ಇರುವ ಶಾಸನವನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಪಟ್ಟರೆ ನಾವು ಎಲ್ಲಿಗೂ ತಲುಪುವುದಿಲ್ಲವೆಂದು ಹೇಳುತ್ತೇನೆ. ಮತ್ತು ಈ ಬಗ್ಗೆ ನಾವು ತಿದ್ದುಪಡಿ ಮಾಡುವ ವಿಚಾರದಲ್ಲಿ ಕಾಲಹರಣ ಮಾಡಿದರೂ ಕೂಡ, ಈಗ ಜನತೆಗೆ ಕೊಟ್ಟಿರುವ ಆಶ್ವಾಸನೆಯನ್ನು ಪೂರ್ತಿ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಸರ್ಕಾರದವರು ಕಾಲ ವಿಳಂಬ ಮಾಡದೆ ಕೆಲವೇ ಸಮಯದಲ್ಲಿ ಭೂಸುಧಾರಣೆ ವಿಚಾರವಲ್ಲಿ ದಿಟ್ಟ ಹೆಜ್ಜೆ ಇಡುತ್ತಾರೆಂದು ನಾನು ಆಶಿಸುತ್ತೇನೆ. ನನ್ನ ದೃಷ್ಟಿಯಿಂದ ಹೇಳುವುದಾದರೆ, ಮತ್ತು ವ್ಯಸನದಿಂದ ಹೇಳಬೇಕಾದುದು ಏನೆಂದರೆ, ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಂತ್ರಿಮಂಡಲದವರು ಅಧಿಕಾರ ಸ್ವೀಕಾರ ಮಾಡಿದ ಕೂಡಲೇ ಒಂದೆರಡು ಆಜ್ಞೆಗಳನ್ನು ಹೊರಡಿಸಬೇಕಾಗಿತ್ತು. ಆದರೆ ಹೊರಡಿಸಲಿಲ್ಲ. ಈಗಲಾದರೂ ಆ ಆಜ್ಞೆಗಳನ್ನು ಹೊರಡಿಸಬೇಕೆಂದು ನಾನು ಹೇಳುತ್ತೇನೆ. ಇದರಲ್ಲಿ ಒಂದನೆಯದು ಎಂದರೆ, ದಕ್ಷಿಣಕನ್ನಡ ಜಿಲ್ಲೆಯಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಮತ್ತು ಇತರೇ ಮಲೆನಾಡು ಜಿಲ್ಲೆಗಳಲ್ಲಿರುವ ಒಂದೊಂದು ಕೋರ್ಟಿನಲ್ಲಿ ಯೂ ಕೂಡ ಸಾವಿರಾರು ಸಿವಿಲ್ ಕೇಸ್‌ಗಳು ಇತ್ಯರ್ಥವಾಗದೆ ಉಳಿದಿವೆ.

ಅಲ್ಲಿ ರೈತರು ಹೊಲ ಮನೆ ಸಹ ಬಿಟ್ಟು ಹೊರಟು ಹೋಗುತ್ತಿದ್ದಾರೆ. ಸಾವಿರಾರು ಗೇಣಿದಾರರು ಹಿಂದಿನ ಹಲವು ವರ್ಷಗಳ ಗೇಣಿ ಕೊಡಬೇಕು ಎಂದು ದಾವಾಮಾಡಿ, ಡಿಕ್ರಿಯಾಗಿ ಸಾವಿರಾರು ದಾವಾಗಳು ಕೋರ್ಟಿನಲ್ಲಿ ಇವೆ. ಕೆಲವು ಕೇಸುಗಳು ನಡೆಯುವ ಹಂತದಲ್ಲಿ ಇವೆ. ಇಂಥವುಗಳು ಕೋರ್ಟಿನಲ್ಲಿ ಜಾಸ್ತಿಯಾಗಿವೆ. ಅಂಥಾ ದಾವಾಗಳ ವಿಚಾರದಲ್ಲಿ ಅವುಗಳನ್ನು ವಿಚಾರಣೆಗೆ ತೆಗೆದುಕೊಳ್ಳಬಾರದು. ಎಗ್ಜಿಕ್ಯೂಶನ್ ಮಾಡಗೊಡಬಾರದು ಎಂದು ನಾನು ಹೇಳುತ್ತೇನೆ.

ಭೂಸುಧಾರಣೆಯ ಬಗ್ಗೆ ಒಂದು ತೀರ್ಮಾನ ತೆಗೆದುಕೊಂಡು ಅದನ್ನು ಜಾರಿಗೆ ತರುವ ಸಂಬಂಧದಲ್ಲಿ ಅದಕ್ಕೆ ಬೇಕಾದಂತಹ ತಿದ್ದುಪಡಿಗಳನ್ನು ಈ ಸಭೆಯಲ್ಲಿ ತಂದು ಅದಕ್ಕೆ ಈ ಸಭೆಯು ಒಪ್ಪಿಗೆಯನ್ನು ಪಡೆಯಬೇಕು. ಅಲ್ಲಿಯತನಕ ಈಗ ಕೋರ್ಟಿನಲ್ಲಿ ದಾವಾಗಳು ಏನಿವೆ ಅವುಗಳನ್ನು ಸಂಪೂರ್ಣವಾಗಿ ತಡೆಹಿಡಿಯಬೇಕು. ನಮ್ಮ ರೈತರಿಗೆ ಗೇಣಿ ಹೊರಬಾರದಂತಹ ಒಂದು ಹೊರೆಯಾಗಿದೆ. ಅದನ್ನು ರೈತರು ಕೊಡುವುದಕ್ಕಾಗುವುದಿಲ್ಲ. ರೂರಲ್‌ಸೆಕ್ಟಾರಿನಲ್ಲಿ ಅಗ್ರಿಕಲ್ಚರ್‌ಸೆಕ್ಟಾರಿನಲ್ಲಿ ಕೇಂದ್ರ ಸರ್ಕಾರದವರು ತಮ್ಮ ಬೊಕ್ಕಸಕ್ಕೆ ಹಣವನ್ನು ಪಡೆಯುತ್ತಿದ್ದಾರೆ. ಅವರು ನಮ್ಮ ಸರ್ಕಾರಕ್ಕೆ ಓವರ್ ಡ್ರಾಫ್ಟ್ ತೀರಿಸುವ ಬಗ್ಗೆ ಹಣ ಸಹಾಯ ಮಾಡಬೇಕು ಎಂದು ನಾನು ಹೇಳುತ್ತೇನೆ. ನಮ್ಮ ಸರ್ಕಾರ ತಮ್ಮ ಸ್ವಂತಕಾಲನ ಮೇಲೆ ನಿಲ್ಲಬೇಕಾದರೆ, ರೂರಲ್ ಸೆಕ್ಟಾರಿನಿಂದ, ಅಗ್ರಿಕಲ್ಚರಲ್ ಸೆಕ್ಟಾರಿನಿಂದ ಹಣ ಬರಬೇಕಾದರೆ ಅಗ್ರಿಕಲ್ಚರ್ ಸೆಕ್ಟಾರಿನಲ್ಲಿ ದುಡಿಯುವಂತಹ ಜನ ಯಾರು ಇದ್ದಾರೆ ಅವರ ಆರ್ಥಿಕ ಸ್ಥಿತಿ ನಿಜವಾಗಿ ಸುಧಾರಣೆ ಆಗಬೇಕು. ರೈತರು ಗೇಣಿ ಸಾಲ ಕೊಡಬೇಕಾಗಿರುವವರು 100 ಕ್ಕೆ 70 ಜನ ಇದ್ದಾರೆ. ಅವರೆಲ್ಲರೂ ಏನು ಜಮೀನಿನಲ್ಲಿ ಬೆಳೆಯುತ್ತಾರೆ ಅದರಲ್ಲಿ ಗೇಣಿಗಾಗಿ, ಸಾಲಕ್ಕಾಗಿ, ಬಡ್ಡಿಗಾಗಿ ಮತ್ತು ಇನ್ನೂ ಇತರ ರೀತಿಯಲ್ಲಿ ಅವರು ಕೊಡಬೇಕಾಗುತ್ತದೆ. ಅವರಿಗೆ ಸರ್ಕಾರದಿಂದ ಕೋ-ಆಪರೇಟೀವ್ ಸೊಸೈಟಿಯಿಂದ ಸಾಲ ಕೊಟ್ಟರೂ ಕೂಡ ಅವರು ಇನ್ನೂ ಕಷ್ಟ ಸ್ಥಿತಿಯಲ್ಲಿಯೇ ಇದ್ದಾರೆ. ಗೇಣಿ ಕೊಡುವಂತಹ ಕ್ರಮ ನಮ್ಮ ರಾಜ್ಯದಲ್ಲಿ ಶತಮಾನಗಳಿಂದ ಬಂದಿದೆ. ಅದನ್ನು ಈಗ ಸರ್ಕಾರದವರು ಕೂಡಲೇ ಕೊನೆಗಾಣಿಸಿದರೆ ಅದು ಕ್ರಾಂತಿಕಾರಕ ಎಂದು ಅನಿಸುತ್ತದೆ. ಕೇರಳದಲ್ಲಿ 1970 ನೇ ಇಸವಿ ಜನವರಿ 1 ನೇ ತಾರೀಖಿನಿಂದ ಗೇಣಿದಾರ ಜಮೀನ್ದಾರನಿಗೆ ಇರುವಂತಹ ಸಂಬಂಧ ಸಂಪೂರ್ಣವಾಗಿ ಹೋಗಿದೆ. ಗೇಣಿ ವಸೂಲು ಮಾಡುವುದು ಕಾನೂನು ಬಾಹಿರವಾದದ್ದು. ಹೀಗಿರುವಾಗ ಗೇಣಿದಾರರನ್ನು

(ಶ್ರೀ ಬಿ. ಏ. ಕಕ್ಕಯ್ಯರಾಯ)

ಗೇಣಿ ಪದ್ಧತಿಯಿಂದ ವಿಮೋಚನೆ ಮಾಡಲು ಸರ್ಕಾರದವರು ಏನು ಮಾಡಿದ್ದಾರೆ! ಗೇಣಿ ಪದ್ಧತಿಯಿಂದ ಗೇಣಿದಾರರನ್ನು ವಿಮೋಚನೆ ಮಾಡಲು ಒಂದು ತಾರೀಖನ್ನು ನಿಗದಿ ಮಾಡಿ ನಮ್ಮ ರಾಜ್ಯದಲ್ಲಿ ಗೇಣಿ ಪದ್ಧತಿಯನ್ನು ನಿರ್ಮೂಲ ಮಾಡತಕ್ಕಂಥಾ ಒಂದು ಆಶ್ವಾಸನೆಯನ್ನು ಸರ್ಕಾರದವರು ಕೊಡಬೇಕು ಎಂದು ನಾನು ಹೇಳುತ್ತೇನೆ. ನಮ್ಮ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರು ಮೊನ್ನೆ ಬೆಂಗಳೂರಿಗೆ ಬಂದಿದ್ದಾಗ ಇಲ್ಲಿ ಮಾಡಿದ ಭಾಷಣದಲ್ಲಿ ಅದಷ್ಟು ಜಾಗ್ರತೆಯಾಗಿ ಭೂಸುಧಾರಣಾ ಕಾನೂನನ್ನು ಜಾರಿಗೆ ತರುವುದಾಗಿ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ಭೂಸುಧಾರಣೆಯನ್ನು ತ್ವರಿತವಾಗಿ ಜಾರಿಗೆ ತರಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಜಮೀನ್ದಾರರಿಗೆ ಗೇಣಿಯನ್ನು ವಸೂಲು ಮಾಡುವಂತಹ ಹಕ್ಕು ಮತ್ತು ಇನ್ನೂ ಇತರೇ ಕೆಲವು ಹಕ್ಕುಗಳು ಇವೆ. ಆ ಎಲ್ಲಾ ಹಕ್ಕುಗಳನ್ನೂ ಕೂಡ ಸಂಪೂರ್ಣವಾಗಿ ಸರ್ಕಾರದವರು ಕೂಡಲೇ ತಮ್ಮ ವಶಕ್ಕೆ ತೆಗೆದುಕೊಳ್ಳಬೇಕು ಎಂದು ನಾನು ಹೇಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ನಮ್ಮಲ್ಲಿ ಅನೇಕ ಜನ ಕೂಲಿ ಕೆಲಸ ಮಾಡುವವರಿದ್ದಾರೆ. ಅವರು ಜಮೀನ್ದಾರರ ಭೂಮಿಯಲ್ಲಿ ಹಾಗೂ ತೋಟಗಳ ಒಳಗಡೆ ಅವರು ಮನೆ ಕಟ್ಟಿಕೊಂಡಿದ್ದಾರೆ. ಆ ಮನೆಯಲ್ಲಿ ಕೂಡ ಅವರಿಗೆ ಯಾವುದೇ ಭದ್ರತೆ ಇಲ್ಲ. ಅವರು ಹಿಂದಿನ ಗುರಾಮರ ರೀತಿಯಲ್ಲಿ ಜೀವನ ಮಾಡಬೇಕಾದಂತಹ ಸ್ಥಿತಿ ಇದೆ. ಬೇಸಾಯದ ಕೆಲಸಗಾರರು, ಕೂಲಿ ಕೆಲಸಗಾರರು, ಅರ್ಟಿಜಾನ್ಸ್, ಬಡಗಿಗಳು, ಕಮ್ಮಾರರು, ಹಿಂದುಳಿದ ಜನಾಂಗದವರು, ಹರಿಜನರು ಗಿರಿಜನರು ಇವರುಗಳು ವಾಸವಾಗಿರುವ ಮನೆಗಳು ಮತ್ತು ಗುಡಿಸಲುಗಳು ಏನಿವೆ ಅವುಗಳಿಂದ ಆ ಜನರನ್ನು ಯಾವಕಾರಣದಿಂದಲೂ ಹೊರಗೆ ಹಾಕದೆ ಅವರಿಗೆ ಅವರು ವಾಸವಾಗಿರುವ ಜಾಗದ ಹಕ್ಕು ಪಡೆಯಲು ಬೇಕಾದಂತಹ ಅವಕಾಶಗಳನ್ನು ಮಾಡಿಕೊಡಬೇಕು ಎಂದು ನಾನು ಹೇಳುತ್ತೇನೆ.

ಇನ್ನೊಂದು ಸೂಚನೆ ಏನೆಂದರೆ 42 ನೇ ಬೇಡಿಕೆಯಲ್ಲಿ ಭೂಮಾಲೀಕರಿಗೆ ಪರಿಹಾರ ಕೊಡಬೇಕಂದು 36 ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ. ಬಹುಶಃ ಇದು 3 ತಿಂಗಳಿಗೆ ಬೇಕು ಎಂದು ಕೇಳಿದ್ದಾರೆ ಎಂದು ಕಾಣುತ್ತದೆ. ಈ ಬಾಬಿಗೆ ಒಂದು ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇದಕ್ಕೆ ಬಡ್ಜೆಟ್ಟಿನಲ್ಲಿ ಎಷ್ಟು ಹಣ ಬೇಕೆಂದು ಕೇಳಿದರೂ ಅದನ್ನು ಕೊಡುವುದಕ್ಕೆ ನಾವು ತಯಾರಾಗಿದ್ದೇವೆಂದು ನಾನು ಹೇಳಬಯಸುತ್ತೇನೆ.

ಇನ್ನೊಂದು ವಿಷಯ ತಮ್ಮಲ್ಲಿ ಹೇಳುವುದೇನೆಂದರೆ ಎಕ್ಸೈಜ್ ಡಿಪಾರ್ಟ್‌ಮೆಂಟಿಗೋಸ್ಕರ 19 ಲಕ್ಷ ರೂಪಾಯಿಗಳುಬೇಕೆಂದು ಕೇಳಿದ್ದಾರೆ. ಆ ಹಣ ಅವರಿಗೆ ವ್ಯಾನ್‌ಗಳನ್ನು ಕೊಂಡು ಕೊಳ್ಳುವುದಕ್ಕೆ, ಇಂಟಿಲಿಜೆನ್ಸ್ ಬ್ಯೂರೋ ಮಾಡುವುದಕ್ಕೆ ಬೇಕಾಗಿದೆ ಎಂದು ಹೇಳಿದ್ದಾರೆ. ಎಕ್ಸೈಜ್ ಡಿಪಾರ್ಟ್‌ಮೆಂಟಿನ ವಿಷಯದಲ್ಲಿ ನಾನು ಒಂದು ಸೂಚನೆಯನ್ನು ಮಾಡುವುದಕ್ಕೆ ಬಯಸುತ್ತೇನೆ. ಅದೇನೆಂದರೆ ಇವೊತ್ತು ಲಕ್ಕರ್ ಮತ್ತು ಟಾಡಿ ಷಾಪುಗಳನ್ನು ಡಿಸ್ಟ್ರಿಕ್ಟ್‌ವೈಜ್ ಮತ್ತು ತಾಲ್ಲೂಕ್‌ವೈಜ್ ಆಕ್ಷನ್ ಮಾಡುತ್ತಿದ್ದಾರೆ. ಇದನ್ನು ಈಗಾಗಲೇ ಕೆಲವು ಮಾನ್ಯಸದಸ್ಯರು ಹೇಳಿದ ಹಾಗೆ ಇದನ್ನು ರದ್ದು ಮಾಡಿ ಒಂದೊಂದು ಎಂಗಡಿಯನ್ನೂ ಕೂಡ ಆಕ್ಷನ್ ಮಾಡುವ ಕ್ರಮವನ್ನು ಜಾರಿಗೆ ತರಬೇಕೆಂದು ನಾನು ಹೇಳಬಯಸುತ್ತೇನೆ. ಲಕ್ಕರ್ ಮತ್ತು ಟಾಪಿಗಳನ್ನು ಮಾರಾಟ ಮಾಡುವ ಕಡೆ ಅದಕ್ಕೆ ಸಂಬಂಧಪಟ್ಟ ಕಂಟ್ರಾಕ್ಟರುಗಳಿಂದ ಮನಾಪಲ ಬೆಳೆಯುತ್ತದೆ. ಈ ಮನಾಪಲಯವರಿಗೂ ಇಲಿಸಿಟ್ ಲಕ್ಕರ್ ತಯಾರಿಕರಿಗೂ ತಿಕ್ಕಾಟ ಕಾವೇರುತ್ತಿದೆ. ಎಲ್ಲಿ ಒಂದು ಅರಾಜಕತೆಯ ಪರಿಸ್ಥಿತಿ ಉಂಟಾಗುವ ಹಾಗೆ ಕಾಣುತ್ತಿದೆ. ನಾನು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಆರ್ಥಿಕ ದೃಷ್ಟಿಯಿಂದ ಸಮಾಜದ ಅಭಿವೃದ್ಧಿ ದೃಷ್ಟಿಯಿಂದ ಮನಾಪಲ ಬೆಳೆಸುವ ಹವ್ಯಾಸವನ್ನು ಬಿಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಕೆಲವರು ನಮ್ಮಜಿಲ್ಲೆಯಲ್ಲಿ ಹೆಂಡ ಸಾರಾಯಿ, ಲಕ್ಕರ್ ಇತ್ಯಾದಿಗಳು ಏನಿವೆ ಇವುಗಳನ್ನು ಅಡರ್ಟ್‌ರೇಟ್ ಮಾಡಿ ಮಾಡುತ್ತಾರೆ. ಇಂಥಾದ್ದನ್ನು ಅನೇಕ ಮಂದಿ ಕುಡಿದು ಸಾಯುತ್ತಾರೆ. ಅವ್ರರಿಂದ ಅಡರ್ಟ್‌ರೇಟ್ ಮಾಡತಕ್ಕವರ ಮೇಲೆ ಕಡ್ಡಾಯವಾಗಿ ಶಿಕ್ಷೆ ಕೊಡುವಂತಹ ಕ್ರಮವನ್ನು ತೆಗೆದು ಕೊಳ್ಳುತ್ತೇವೆ ಎಂದು ಸರ್ಕಾರ ಅವರಿಗೆ ಎಚ್ಚರಿಕೆಯನ್ನು ಕೊಡಬೇಕೆಂದು ನಾನು ಹೇಳುತ್ತೇನೆ.

ಕೊನೆಯದಾಗಿ ನಮ್ಮಲ್ಲಿ ಬಂದರು ಯೋಜನೆ ಆಗುತ್ತಿದೆ. ಆ ಬಂದರು ಕಟ್ಟತಕ್ಕ ಸ್ಥಳದಲ್ಲಿ ಸಾಮಾನ್ಯವಾಗಿ ಕಾರ್ಮಿಕರು, ರೈತರು, ಕೂಲಿಕೆಲಸಗಾರರು ಮುಂತಾದವರು ಸಾವಿರಾರು ಮಂದಿ ಇದ್ದರು. ಅವರುಗಳೆಲ್ಲಾ ಆ ನಿವೇಶನವನ್ನು ಬಂದರಿಗೋಸ್ಕರ ಬಿಟ್ಟು ಕೊಟ್ಟಿದ್ದರಿಂದ ಅವರು ನಿರುದ್ಯೋಗಿಗಳಾಗುವ ಪರಿಸ್ಥಿತಿ ಬಂದಿದೆ. ಆ ಜಮೀನಿಗೆ ಯಾರು ಮಾಲೀಕರಾಗಿದ್ದರೋ

ಅವರಿಗೆ ಸರ್ಕಾರದಿಂದ ಪರಿಹಾರ ಸಿಕ್ಕಿದೆ. ಆದರೆ ವಾಸ್ತವವಾಗಿ ಯಾರು ಆ ಜಮೀನಿನಲ್ಲಿ ಬಾಡಿಗೆ ಮಾಡಿಕೊಂಡಿದ್ದರು, ಮತ್ತು ಆ ಭೂಮಿಯನ್ನು ಯಾರು ಅಭಿವೃದ್ಧಿ ಮಾಡಿದರೋ ಅಂಥಾ ರೈತರಿಗೆ ಒಂದು ನ್ಯಾಯ್ಯೆಸೆ ಕೂಡ ಪರಿಹಾರ ಸಿಕ್ಕಿಲ್ಲ. ಇದನ್ನು ನಾನು ಸಾಬೀತು ಮಾಡುವುದಕ್ಕೆ ತಯಾರು ಇದ್ದೇನೆ. ಆ ಬಂದರಿನ ಯೋಜನೆಗೆ ತಗೆದುಕೊಂಡ ಜಮೀನಿನ ಸಂಬಂಧದಲ್ಲಿ ಮುಂದೆ ಯಾರಿಗಾದರೂ ಪರಿಹಾರವನ್ನು ಕೊಡುವುದಾದರೆ ಅಥವಾ ಹಂಪೆ ಕೊಟ್ಟದ್ದನ್ನು ವಸೂಲು ಮಾಡುವುದಕ್ಕೆ ಸಾಧ್ಯವಿದ್ದರೆ ಅದನ್ನೂ ಸಹ ಆ ಜಮೀನಿನಲ್ಲಿ ಬಾಡಿಗೆ ಇದ್ದವರಿಗೆ ಕೊಡುವ ಹಾಗೆ ಮಾಡಬೇಕು. ಮತ್ತು ಆ ಜಾಗದಲ್ಲಿದ್ದ ಬಾಡಿಗೆದಾರರಿಗೆ ಸಾಲದ ಸವಲತ್ತು ಕೊಡಬೇಕೆಂದು ಸುಮಾರು 18 ಲಕ್ಷ ರೂಪಾಯಿಗಳನ್ನು ಕೋ-ಆಪರೇಟೀವ್ ಡಿಪಾರ್ಟ್‌ಮೆಂಟಿನಿಂದ ಕೊಟ್ಟರು. ಈಗ ಅದನ್ನು ವಸೂಲು ಮಾಡುವುದಕ್ಕೆ ಹೊರಟಿದ್ದಾರೆ. ಈಗ ಅವರು ವಾಸಮಾಡತಕ್ಕ ಜಾಗದಿಂದ ಅವರನ್ನು ಎವಿಕ್ಟ್ ಮಾಡಿಸುವುದಕ್ಕೆ ಹೊರಟಿದ್ದಾರೆ. ಇದು ಸರಿಯಲ್ಲ. ಅವರನ್ನು ಎವಿಕ್ಟ್ ಮಾಡಬಾರದು. ಸಾಧ್ಯವಿದ್ದರೆ ಅವರಿಗೆ ಕೈಗಾರಿಕೆಗಳನ್ನು ಮಾಡುವಂತಹ ಅವಕಾಶವನ್ನು ಕಲ್ಪಿಸಿಕೊಡಬೇಕು ಅವರಿಗೆ ಉದ್ಯೋಗದ ಅವಕಾಶವನ್ನು ಒದಗಿಸಬೇಕು. ಅವರ ಆರ್ಥಿಕ ಸ್ಥಿತಿ ಸುಧಾರಣೆ ಆಗುವ ತನಕ ಆ ಹಣವನ್ನು ವಸೂಲು ಮಾಡುವುದನ್ನು ತಡೆಹಿಡಿಯಬೇಕು. ಅದಕ್ಕೆ ಸರ್ಕಾರದವರು ಗಮನಕೊಡಬೇಕೆಂದು ಕೇಳಿಕೊಂಡು ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಮಾನ್ಯ ಅರ್ಥ ಸಚಿವರು ಉತ್ತರ ಕೊಡಬಹುದು.

ಶ್ರೀ ಟಿ. ಆರ್. ಶಾಮಣ್ಣ.—ನಾನು ರೂಲ್ 170ರ ಪ್ರಕಾರ ಕೆಲವು ಅಮೆಂಡ್‌ಮೆಂಟ್‌ಗಳನ್ನು ಕಳಿಸಿದ್ದೇನೆ. ನಮ್ಮ ಸೆಕ್ರೆಟರಿಯವರು ಅದರ ಬಗ್ಗೆ ಒತ್ತಾಯ ಮಾಡಬೇಡಿ ನಿಮಗೆ ಮಾತನಾಡಲು ಅವಕಾಶ ಕೊಡೋಣ ಎಂದು ಹೇಳಿದ್ದರು. ಅದರ ಬಗ್ಗೆ ತಾವು ಸ್ವಲ್ಪ ಹೇಳಬೇಕು ಇಲ್ಲದಿದ್ದರೆ ಈ ಸೆಕ್ಷನ್ ತೆಗೆದು ಹಾಕಿದರೆ ಉತ್ತಮವೆಂದು ಕಾಣುತ್ತದೆ.

ಅಧ್ಯಕ್ಷರು.—ತಾವು ಎರಡು ನಿಮಿಷ ಮಾತನಾಡಬಹುದು.

†ಶ್ರೀ ಟಿ. ಆರ್. ಶಾಮಣ್ಣ (ಬೆಂಗಳೂರು–ಕೋಚೆ).—ಮಾನ್ಯ ಅಧ್ಯಕ್ಷಣಿಯವರೇ, ಈಗ ನಮ್ಮ ಅರ್ಥ ಸಚಿವರು ನ್ಯಾಯವಾಗಿ ದಕ್ಷತೆಯಿಂದ ಕೆಲಸ ಮಾಡತಕ್ಕಂತಹ ಒಬ್ಬ ಮೇಧಾವಿ ವ್ಯಕ್ತಿ ಎಂಬುದು ನನಗೆ ಗೊತ್ತಿದೆ. ಏಕೆಂದರೆ ಮೊನ್ನೆ ತಾನೆ ಬೆಂಗಳೂರು ನಗರದ ನೀರಿನ ಸಮಸ್ಯೆಯ ಬಗ್ಗೆ ಅವರು ಎಸ್ಟಿಮೇಟ್ ಕಮಿಟಿಯ ಅಧ್ಯಕ್ಷರಾಗಿ ಒಂದು ಒಳ್ಳೆಯ ಮುತುವರ್ಜಿಯಿಂದ ಕೆಲಸ ಮಾಡಿ ಒಳ್ಳೆಯ ಹೆಸರನ್ನು ಗಳಿಸಿದ್ದಾರೆ. ಅವರು ತಮ್ಮ ಸ್ವಶಕ್ತಿಯಿಂದ ಆ ಒಂದು ಜಟಿಲ ಸಮಸ್ಯೆಯನ್ನೇ ಬಗೆಹರಿಸಿದ್ದಾರೆ. ಆದ್ದರಿಂದ ಅವರಿಗೆ ನಮ್ಮ ರಾಜ್ಯದ ಎಂತಹ ಸಮಸ್ಯೆಯನ್ನೂ ಕೂಡ ಬಗೆಹರಿಸುವಂತಹ ಶಕ್ತಿ ಇದೆಯೆಂದು ನಾನಾದರೂ ತಿಳಿದುಕೊಂಡಿದ್ದೇನೆ. ಆದರೆ, ಈಗಿರ ತಕ್ಕಂತಹ ಪರಿಸ್ಥಿತಿಯಲ್ಲಿ ಅವರು ಹೇಗೆ ಈ ಹಣಕಾಸಿನ ಕೊರತೆಯನ್ನು ಪರಿಹರಿಸುತ್ತಾರೆಂದು ಕಾಯ್ದು ನೋಡಬೇಕಾಗಿದೆ. 476ಕೋಟಿ ರೂಪಾಯಿ ಸಾಲದ ಜೊತೆಗೆ ಈ ವರ್ಷದ ಕೊನೆಯಲ್ಲಿ 76ಕೋಟಿ ರೂಪಾಯಿ ಓವರ್‌ಡ್ರಾಫ್ಟ್ ಇವೆ, ಮತ್ತು ಮುಂದೆ ಓವರ್‌ಡ್ರಾಫ್ಟ್ ಮಾಡ ಬೇಡಿ ಎಂದು ಕೇಂದ್ರಸರ್ಕಾರದವರು ಹೇಳುತ್ತಿದ್ದಾರೆ. ಅದರ ಜೊತೆಗೆ ಈಗಿರುವ ಬೇಡಿಕೆಗಳ ಮೇಲೆ ಒಂದಲ್ಲ ಒಂದು ಬೇರೆ ರೀತಿಯ ಬೇಡಿಕೆಗಳು ಕೂಡ ಬರುತ್ತಿವೆ. ಹೀಗಿರುವಾಗ ನಮ್ಮ ಆರ್ಥಿಕ ಸಚಿವರು ಇವನ್ನೆಲ್ಲಾ ಸರಿದೂಗಿಸಿಕೊಂಡು ಯಾವ ರೀತಿ ಸರಿಪಡಿಸಿಕೊಂಡು ಹೋಗುತ್ತಾರೆಂಬುದನ್ನು ಕಾದು ನೋಡಬೇಕಾಗಿದೆ. ಆಲ್ಲದೆ ನಮ್ಮಲ್ಲಿ ಆಶಾದಾಯಕವಾದ ವರಮಾನ ಏನೂ ಕಾಣುತ್ತಿಲ್ಲ. ಇವರು ಆದಾಯ ಹೆಚ್ಚು ತೋರಿಸಬೇಕಾದರೆ ಪುನಃ ತೆರಿಗೆ ಹಾಕಬೇಕು. ಒಂದು ಕಡೆ ಕೇಂದ್ರ ಸರ್ಕಾರದವರು ಮೇಲಿಂದ ಮೇಲೆ ತೆರಿಗೆಗಳನ್ನು ಹಾಕುತ್ತಿದ್ದಾರೆ, ಇನ್ನೊಂದು ಕಡೆ ರಾಜ್ಯಸರ್ಕಾರದವರೂ ಹಾಕುತ್ತಿದ್ದಾರೆ. ಆದರ ಮೇಲೆ ಪುನಃ ರಾಜ್ಯಸರ್ಕಾರದವರು ಹಾಕಿದರೆ, ಜನತೆಯ ಪರಿಸ್ಥಿತಿಯೇನಾಗಬೇಕು ಎಂಬುದನ್ನು ತಾವು ಯೋಚನೆ ಮಾಡಬೇಕು. ಬರುವ ಜೂನ್ ತಿಂಗಳಲ್ಲಿ ಸರ್ಕಾರದವರು ವರ್ಷದ ಬಜೆಟನ್ನು ಮಂಡಿಸುವಾಗ ಯಾವ ರೀತಿ ತೆರಿಗೆಯನ್ನು ಹಾಕದೆ, ಬಡಜನರಿಗೆ ಅನ್ಯಾಯವಾಗದ ಹಾಗೆ ಇದುತ್ತಾರೆಂಬುದನ್ನು ನಾವೆಲ್ಲರೂ ಕಾದು ನೋಡುತ್ತಿದ್ದೇವೆ. ನಾನಾದರೂ ಹೇಳುತ್ತೇನೆ—ಈಗ ನಮ್ಮ ರಾಜ್ಯದಲ್ಲಿ ಹೊಸ ತೆರಿಗೆಯನ್ನು ಹಾಕುವುದು ಸರಿಯಲ್ಲ; ಜನತೆ ಅದಕ್ಕೆ ಸಿದ್ಧವಾಗಿಲ್ಲ. ಏಕೆಂದರೆ, ಈಗಾಗಲೇ ಕೇಂದ್ರಸರ್ಕಾರದವರು ತೆರಿಗೆಯ ಮೇಲೆ ತೆರಿಗೆಯನ್ನು ಹಾಕಿ ನಾಗರೀಕರನ್ನು ನಿರ್ವೀರ್ಯರನ್ನಾಗಿ ಮಾಡಿದ್ದಾರೆ ಈಗಿರತಕ್ಕಂತಹ ಕೇಂದ್ರಸರ್ಕಾರದ ತೆರಿಗೆಯನ್ನು ಬಿಟ್ಟರೆ ಇನ್ನು ಉಳಿದಿರುವುದು ಭೂಕಂದಾಯ ಇಲ್ಲದಿದ್ದರೆ ಸೇಲ್ಸ್ ಟ್ಯಾಕ್ಸ್. ಅಥವಾ ಮನೋರಂಜನಾ

(ಶ್ರೀ ಟಿ. ಆರ್. ಶಾಮಣ್ಣ)

ತೆರಿಗೆ ಮಾತ್ರ. ಈ ಸಂದರ್ಭದಲ್ಲಿ ಒಂದು ಮಾತನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಇಪ್ಪೊತ್ತಿನ ದಿವಸ ಸರ್ಕಾರಕ್ಕೆ ಬರತಕ್ಕಂತಹ ಅನೇಕ ತೆರಿಗೆಗಳು ಸರಿಯಾಗಿ ವಸೂಲಾಗದೆ ಹೋಗಾಗುತ್ತಿದೆ. ಆದ್ದರಿಂದ ಸರ್ಕಾರಕ್ಕೆ ಬರಬೇಕಾದಂತಹ ಸೇಲ್ಸ್ ಟ್ಯಾಕ್ಸನ್ನು ಸರಿಯಾಗಿ ವಸೂಲು ಮಾಡಿದರೆ ಎಷ್ಟೋ ಹೆಚ್ಚು ಆದಾಯ ಸರ್ಕಾರಕ್ಕೆ ಬಂದಂತಾಗುತ್ತದೆ. ಇದರಿಂದಾಗಿ ಪುನಃ ಸೇಲ್ಸ್ ಟ್ಯಾಕ್ಸ್ ಹಾಕತಕ್ಕಂತಹ ಪ್ರಮೇಯವೇನೂ ಬರುವುದಿಲ್ಲ. ಇವತ್ತು ಅನೇಕ ಕಡೆ ಕಳ್ಳ ರಕ್ಕಗಳನ್ನು ಬರೆದು ನ್ಯಾಯವಾಗಿ ಸರ್ಕಾರಕ್ಕೆ ಬರಬೇಕಾದ ತೆರಿಗೆಗಳನ್ನು ಜನರು ಕೊಡದೆ ತಪ್ಪಿಸಿ ಕೊಳ್ಳುತ್ತಿದ್ದಾರೆ. ಆದ್ದರಿಂದ ಸರ್ಕಾರದವರು ಇದನ್ನು ಸರಿಯಾಗಿ ವಸೂಲು ಮಾಡುವುದಕ್ಕೆ ತಕ್ಕ ಏರ್ಪಾಡು ಮಾಡಬೇಕೇ ಹೊರತು, ಪುನಃ ತೆರಿಗೆಯನ್ನು ಹೆಚ್ಚು ಮಾಡಬಾರದೆಂದು ಸಲಹೆ ಮಾಡುತ್ತೇನೆ. ಅದೇ ರೀತಿಯಲ್ಲಿ ಎಕ್ಸ್ಟ್ರಾ ಡ್ಯೂಟಿಯಲ್ಲೂ ಕೂಡ, ಈ ಕಳ್ಳಭಟ್ಟಿಯನ್ನು ತಪ್ಪಿಸಿದರೆ ನಿಜವಾಗಿಯೂ ಹೆಚ್ಚಿನ ವರಮಾನ ಸರ್ಕಾರಕ್ಕೆ ಬರುತ್ತದೆ. ಇದಕ್ಕೆಲ್ಲಾ ನನ್ನ ಮುಖ್ಯವಾದ ಸಲಹೆ ಏನೆಂದರೆ, ಸಾಧ್ಯವಾದಷ್ಟು ಸರ್ಕಾರಕ್ಕೆ ಬರಬೇಕಾದಂತಹ ತೆರಿಗೆಗಳನ್ನು ವಸೂಲು ಮಾಡುವ ವ್ಯವಸ್ಥೆಯನ್ನು ಮಾಡಿದರೆ, ಇನ್ನೂ ಹೆಚ್ಚಿನ ತೆರಿಗೆಯನ್ನು ಹಾಕಬೇಕಾದ ಪ್ರಮೇಯವಿಲ್ಲ.

ಅದೇ ರೀತಿ ಸರ್ಕಾರದವರು ಮಾಡುತ್ತಿರುವ ಹೆಚ್ಚಿನ ಖರ್ಚುಗಳನ್ನು ಉಳಿಸಿ, ಅದಷ್ಟು ಮಿತ ವ್ಯಯ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಅದೇ ರೀತಿ ಪೆನ್ಶನ್‌ದಾರರ ಬಗ್ಗೆ ಒಂದು ಮಾತು ಏನೆಂದರೆ, ಈಗಿರತಕ್ಕಂತಹ ನೌಕರರಿಗೆ ಡಿ.ಎ.ಯನ್ನು ಹೆಚ್ಚು ಮಾಡಲಾಗಿದೆ. ಅದೇ ರೀತಿ ಪೆನ್ಶನ್‌ದಾರರಿಗೂ ಸ್ವಲ್ಪ ಹೆಚ್ಚು ಮಾಡಲು ಗಮನ ಕೊಡಬೇಕು. ಮತ್ತು ಈ ರಾಜಕೀಯ ಸಂತ್ರಸ್ತರು ಏನಿದ್ದಾರೆ ಅವರಿಗೆ ಕೊಡುವ ಪೆನ್ಶನ್ ಸರಿಯಾಗಿ ಕೊಡುತ್ತಾ ಇಲ್ಲ. ಅವರಲ್ಲಿ ಯಾರು ಹೆಚ್ಚು ಪ್ರಭಾವವನ್ನು ಬೀರುತ್ತಾರೋ ಅಂಥವರಿಗೆ ಮಾತ್ರ ಈ ಪೆನ್ಷನ್ ಸಿಗುತ್ತದೆ, ಅಲ್ಲದೆ ಇತರ ಅನೇಕ ಜನರು ಜೈಲಿಗೆ ಹೋಗಿದ್ದರೂ, ಅವರ ಆಸ್ತಿಪಾಸ್ತಿಯನ್ನು ಕಳಕೊಂಡಿದ್ದರೂ, ಅಂಥವರಿಗೆ ಈ ಪೆನ್ಷನ್ ಸಿಗುತ್ತಾ ಇಲ್ಲ. ಆದ್ದರಿಂದ ಯಾರ್ಯಾರು ಜೈಲಿಗೆ ಹೋಗಿದ್ದಾರೆ, ದೇಶಕ್ಕಾಗಿ ತಮ್ಮ ಆಸ್ತಿಪಾಸ್ತಿಗಳನ್ನು ಕಳಕೊಂಡಿದ್ದಾರೆ, ಅಂಥವರಿಗೂ ಸಿಗುವಂತೆ ಮಾಡಬೇಕೆಂದು ಸೂಚನೆ ಮಾಡುತ್ತೇನೆ.

ಕೊನೆಯದಾಗಿ ಯಾರು ತಮ್ಮ ಪೆನ್ಶನನ್ನು ಕಮ್ಯೂಟ್ ಮಾಡಿರುತ್ತಾರೆ, ಅಂಥವರಿಗೆ ಅಂದರೆ 10-20ವರ್ಷ ತೆಗೆದುಕೊಂಡವರಿಗೆ ಅವರ ಪೆನ್ಶನ್‌ನಲ್ಲಿ ಸ್ವಲ್ಪ ಹೆಚ್ಚುವಾಡಿ ಕೊಡುವುದಕ್ಕೆ ಏರ್ಪಾಡು ಮಾಡಿ, ಅವರ ಮೇಲೆ ಕೃಪಾದೃಷ್ಟಿಯನ್ನು ಬೀರಬೇಕೆಂದು ಹೇಳಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

5-00 P. M.

†ಶ್ರೀ ಎಂ. ವೈ. ಘೋರ್ಪಡೆ (ಹಣಕಾಸಿನ ಶಾಖೆಯ ಮಂತ್ರಿಗಳು).—ಮಾನ್ಯ ಸಭಾಧ್ಯಕ್ಷಣಿಯವರೇ, ಇವತ್ತು ಈ ಸಭೆಗೆ ನಾನು 15-20 ನಿಮಿಷಗಳು ತಡವಾಗಿ ಬಂದುದಕ್ಕೆ ಸದಸ್ಯರು ಕ್ಷಮಿಸುತ್ತಾರೆಂದು ನಾನು ನಂಬಿದ್ದೇನೆ. ಇಲ್ಲಿಗೆ ನಾನು ತಡವಾಗಿ ಬರಲಿಕ್ಕೆ ಒಂದು ಮುಖ್ಯ ಕಾರಣವೇನೆಂದರೆ, ಮಾನ್ಯ ಮುಖ್ಯಮಂತ್ರಿಗಳ ಚೇಂಬರ್‌ನಲ್ಲಿ ಅತಿ ಮುಖ್ಯವಾದಂಥ ಮೀಟಿಂಗ್ ನಡೆಯುತು. ಅದು ಮಂಗಳೂರು ಕೆಮಿಕರ್ಸ್ ಅಂಡ್ ಫರ್ಟಿಲೈಜರ್ಸ್‌ಗೆ ಸಂಬಂಧಪಟ್ಟ ವಿಷಯ. ಒಂದು ಸಂತೋಷದ ವಿಷಯವೇನೆಂದರೆ, ಮಂಗಳೂರು ಕೆಮಿಕರ್ಸ್ ಮತ್ತು ಫರ್ಟಿಲೈಜರ್ಸ್ ಯೋಜನೆಗಳು ಏನಿವೆ ಅವೆಲ್ಲವೂ ಕಾರ್ಯಗತವಾಗುವ ಕಾಲ ಈಗ ಬಂದಿದೆಯೆಂಬುದಾಗಿ ನಾನು ಸ್ಪಷ್ಟವಾಗಿ ಹೇಳಬಹುದು. ಈ ಫರ್ಟಿಲೈಜರ್ಸ್ ಪ್ರಾಜೆಕ್ಟ್‌ಗೋಸ್ಕರ ಏನೊಂದು 58ಕೋಟಿ ರೂಪಾಯಿಗಳನ್ನು ನಾವು ಪಡೆದವೋ ಅದರಲ್ಲಿ 42ಕೋಟಿ ರೂಪಾಯಿಗಳನ್ನು ಸಾಲವಾಗಿ ಕೊಡುವುದಕ್ಕೆ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಬ್ಯಾಂಕ್ ಆಫ್ ಇಂಡಿಯಾ ಅವರು ಒಪ್ಪಿದ್ದಾರೆ. ಇದು ಸಂತೋಷದ ಸಂಗತಿ. ಇದು ಒಂದು ದೊಡ್ಡ ಪ್ರಾಜೆಕ್ಟ್. ಈ ಪ್ರಾಜೆಕ್ಟ್ ಹಲವಾರು ವರ್ಷಗಳಿಂದ ನಮ್ಮ ರಾಜ್ಯದಲ್ಲಿ ಆಗಬೇಕೆಂಬ ನಿರೀಕ್ಷಣೆ ಮಾಡಿದ್ದರು. ಇದು ಕಾರ್ಯಗತವಾಗುವ ಕಾಲ ಈಗ ಬಂದಿದೆ. 1974ನೇ ವರ್ಷದಲ್ಲಿ ಇದು ಒಂದು ಕಾರ್ಪೊರೇಷನ್ ಆಗಬಹುದೆಂದು ನಾನು ಈ ಸಭೆಗೆ ಹೇಳಲಿಕ್ಕೆ ಸಂತೋಷಪಡುತ್ತೇನೆ.

ಇನ್ನು ಈಗ ಇಂಟರಿಂ ಬಡ್ಜೆಟ್ ಮೇಲೆ ಭಾಷಣ ಮಾಡುವುದು ಅಷ್ಟು ಸುಲಭವಾದುದಲ್ಲ ವೆಂಬುದು ಎಲ್ಲ ಸದಸ್ಯರಿಗೂ ಗೊತ್ತಿದೆ. ಸ್ಪಷ್ಟವಾಗಿ ಹೇಳಬೇಕಾದರೆ, ಇಂಟೆರಿಂ ಬಡ್ಜೆಟ್ಟನ್ನು

ನಾನು ಈ ಸಭೆಯಮುಂದೆ ಮಂಡಿಸುವಾಗ, ಅದಕ್ಕಿಂತ ಮುಂಚೆ ನನ್ನ ಸ್ನೇಹಿತರೊಬ್ಬರು ನನಗೆ ಒಂದು ಕಾಗದವನ್ನು ಬರೆದರು. ಅದರಲ್ಲಿ ಇವತ್ತು ಮೈಸೂರು ದೇಶದ ಹಣಕಾಸಿನ ಪರಿಸ್ಥಿತಿಯಲ್ಲಿ ಬಡ್ಜೆಟ್ ತಯಾರುಮಾಡುವುದು ಹೇಗಿದೆಯೆಂದರೆ ಇಂಗ್ಲಿಷ್‌ನಲ್ಲಿ "It is like asking a man to make an omelet without breaking eggs" ಎಂಬುದಾಗಿದೆಯೆಂದು ಹೇಳಿದರು. ನಮ್ಮ ರಾಜ್ಯದಲ್ಲಿ ಈಗ ಕ್ಲಿಷ್ಟವಾದ ಹಣಕಾಸಿನ ಪರಿಸ್ಥಿತಿ ಇದೆಯೆಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೂ ಕೂಡ ನಾವು ಧೈರ್ಯ ಕಳೆದುಕೊಳ್ಳಬೇಕಾದುದು ಇಲ್ಲ. ಇಂತಹ ಪರಿಸ್ಥಿತಿ ಇದ್ದರೂ ಸಹ ಬಡ್ಜೆಟ್ಟಿನಲ್ಲಿ ನೋಡಿದ ಪ್ರಕಾರ ನಮ್ಮ 350 ಕೋಟಿ ರೂಪಾಯಿಗಳ ಪ್ಲಾನ್ ಏನಿದೆ ಅದನ್ನು ಯಶಸ್ವಿಯಾಗಿ ಮಾಡುವ ತಾಕತ್ತು ಮೈಸೂರು ಸರ್ಕಾರಕ್ಕೆ ಇದೆ. ಇದು ಸಮಾಧಾನ ಕರವಾದ ವಿಷಯ. ಅದಕ್ಕಿಂತ ಸ್ವಲ್ಪಮಟ್ಟಿಗೆ ಜಾಸ್ತಿಮಾಡುವುದಕ್ಕೂ ಸಾಧ್ಯವಿದೆ. ಆ ಪ್ರಕಾರ ಮೈಸೂರು ಸರ್ಕಾರ ಮಾಡುತ್ತದೆ ಎಂಬುದಾಗಿ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಪ್ಲಾನ್ ಆಫ್ಸೇ ಅಲ್ಲ, ಪ್ಲಾನ್ ಮೊತ್ತ, ಬಟ್ಟು ನಾನ್-ಪ್ಲಾನ್ ಏನಿದೆಯೋ ಅದರಲ್ಲಿಯೂ ಪ್ರಮುಖ್ಯ ಕಾರ್ಯವಾದ ಕಾವೇರಿ ಪ್ರಾಜೆಕ್ಟ್ ಏನಿದೆಯೋ ಅದರ ಮೇಲೂ ಸಾಕಷ್ಟು ಹಣ ಖರ್ಚು ಆಗಿದೆ. ಜೊತೆಗೆ 72—73ನೇ ವರ್ಷದ ಬಡ್ಜೆಟ್ಟಿನಲ್ಲಿಯೂ ಹೆಚ್ಚಿಗೆ ಆ ಬಾಬಿಗೆ ಖರ್ಚುಮಾಡಬೇಕಾಗಿ ಬರುತ್ತದೆ. ಹೆಚ್ಚು ಹಣವನ್ನು ಬಡ್ಜೆಟ್ಟಿನಲ್ಲಿ ಒದಗಿಸಬೇಕಾಗುತ್ತದೆ.

ಇನ್ನು ಓವರ್‌ಡ್ರಾಫ್ಟ್ ವಿಷಯವಾಗಿ ಮಾನ್ಯ ಶ್ರೀ ಬಂಗಾರಪ್ಪನವರು ಬಹಳ ಕಳಕಳಿಯಿಂದ ಮಾತನಾಡಿದರು. ಇದು ಒಂದು ದೊಡ್ಡ ಗಂಡಾಂತರ ನಮ್ಮ ದೇಶಕ್ಕೆ ಬಂದಿದೆ. ಇದಕ್ಕೆ ಧೈರ್ಯ ದಿಂದ ಹೇಳಿದ್ದೇನೆ. ಇದರ ಬಗ್ಗೆ ಅಷ್ಟು ಭಯಪಡಬೇಕಾಗಿಲ್ಲವೆಂದು. 76 ಕೋಟಿ ರೂಪಾಯಿಗಳ ಓವರ್‌ಡ್ರಾಫ್ಟ್ ಇದ್ದರೂ ಕೂಡ ಕೇಂದ್ರಸರ್ಕಾರದವರು ಅದನ್ನು ತಕ್ಷಣ ಕೊಡಬೇಕೆಂದು ಕೇಳುತ್ತಿದ್ದಾರೆಂಬುದಾಗಿ ಕೆಲವು ಸದಸ್ಯರು ಹೇಳಿದರು. ಓವರ್‌ಡ್ರಾಫ್ಟ್‌ಗೆ ಕಲವಾರು ಮುಖ್ಯ ಕಾರಣಗಳೂ ಇವೆ. ಪೇ ರಿವಿಷನ್ 1969ರಲ್ಲಿ ಮಾಡಿದ್ದು. ಅದರಿಂದ ವರ್ಷಕ್ಕೆ 17 ಕೋಟಿ ರೂಪಾಯಿಗಳ ಕಮಿಟ್‌ಮೆಂಟ್ ಜಾಸ್ತಿಯಾಗಿದೆ. ನಮಗೆ ಬೇಕಾಗುವಷ್ಟು ದುಡ್ಡು ಕೇಂದ್ರಸರ್ಕಾರದಿಂದ ಬರುತ್ತಾ ಇಲ್ಲ. ಹೆಚ್ಚು ಕಡಿಮೆ ಸುಮಾರು 31 ಕೋಟಿ ರೂಪಾಯಿಗಳು ಪೇ ರಿವಿಜನ್ನಿಗೆ ಮತ್ತು 30 ಕೋಟಿ ರೂಪಾಯಿಗಳು ಕಾವೇರಿ ನದಿ ಯೋಜನೆಗೆ ಖರ್ಚಾಗಿದೆ. ಕರೆಕ್ಟ್ ಫಿಗರ್ಸ್ ಹೇಳಬೇಕೆಂದರೆ, ಅದನ್ನೂ ಸಹ ಹೇಳುತ್ತೇನೆ. ಪೇ ರಿವಿಷನ್ನಿಗೆ 31 ಕೋಟಿ ರೂಪಾಯಿಗಳು 1969ನೇ ಇಸವಿಯಿಂದ 1972ನೇ ಇಸವಿಯವರೆಗೆ ಖರ್ಚಾಗಿದೆ. ಕಾವೇರಿ ಪ್ರಾಜೆಕ್ಟ್‌ಗೆ 28 ಕೋಟಿ ರೂಪಾಯಿಗಳು ಅಂದರೆ ಒಟ್ಟು 59 ಕೋಟಿ ರೂಪಾಯಿಗಳು ಖರ್ಚಾಗಿದೆ.

Sri H. D. DEVE GOWDA.—Does it exclude your budget provision made for medium and major irrigation ?

Sri M. Y. GHORPADE.—This is the amount spent so far on Cauvery project and pay revision commitment. This explains the bulk of these overdrafts. These are not covered by any grants from the Central Government. ಓವರ್‌ಡ್ರಾಫ್ಟ್‌ನಲ್ಲಿ ಮೈಸೂರು ಸರ್ಕಾರ ಸ್ವಲ್ಪ ಭಾಗವನ್ನಾದರೂ ಕೇಂದ್ರ ಸರ್ಕಾರಕ್ಕೆ ಕೊಡಬೇಕೆಂಬ ವಿಷಯ ಪತ್ರಿಕೆಗಳಲ್ಲಿ ಬಂದಿದೆಯೇ ಹೊರತು ಅವರು ನಮ್ಮನ್ನು ಇನ್ನೂ ಕೇಳಲಿಕ್ಕೆ ಬರಲಿಲ್ಲ. ಈ ವಿಚಾರವಾಗಿ ನಾನು ಕೇಂದ್ರಸರ್ಕಾರ ದೊಡನೆ ಚರ್ಚೆಮಾಡುವಾಗ ಎಲ್ಲ ವಿಷಯಗಳು ಗೊತ್ತಾಗುತ್ತದೆ. ಈಗ ಅದರ ಬಗ್ಗೆ ನನ್ನಲ್ಲಿ ಸ್ಪಷ್ಟವಾದ ಚಿತ್ರ ಇಲ್ಲ. ಆ ಓವರ್‌ಡ್ರಾಫ್ಟ್‌ನ್ನು ಎಷ್ಟು ಕಾಲಾವಧಿಯಲ್ಲಿ ಕೇಂದ್ರ ಸರ್ಕಾರಕ್ಕೆ ನಾವು ವಾಪಸ್ಸು ಮಾಡಬೇಕೆಂಬುದನ್ನು ಈಗ ನಾನು ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ. ಆ ವಿಷಯ ನನಗೆ ಗೊತ್ತಿಲ್ಲ. ಓವರ್‌ಡ್ರಾಫ್ಟ್ ಒಮ್ಮೆಯೇ ಕೊಡಬೇಕಾಗುತ್ತದೆ, ಅದರಿಂದ ನಮ್ಮ ಪ್ರಗತಿ ನಿಂತುಹೋಗುತ್ತದೆಂಬ ಪರಿಸ್ಥಿತಿ ಇವತ್ತು ನಮಗೆ ಇಲ್ಲ.

ಇನ್ನು ಡೆಟ್ ರೀಪೇಮೆಂಟ್ ಏನಿದೆಯೋ ಅದು ಒಂದು ದೊಡ್ಡ ಪ್ರಶ್ನೆ. ಈ ವಿಚಾರವಾಗಿ 6ನೇ ಫೈನಾನ್ಸ್ ಕಮಿಷನ್ನಿನವರು ಸಮಗ್ರವಾಗಿ ಯೋಚನೆಮಾಡಿ ಇದು ಕೇವಲ ಮೈಸೂರು ರಾಜ್ಯಕ್ಕೆ ಮಾತ್ರ ಸಂಬಂಧಪಟ್ಟುದಲ್ಲ, ಎರ್ಲಾ ರಾಜ್ಯಗಳಿಗೂ ಸಂಬಂಧ ಪಟ್ಟದ್ದು ಎಂಬುದಾಗಿ ನಾನು ಈಗ ಇಲ್ಲಿ ಮಂತ್ರಿಯಾಗುವುದಕ್ಕೆ ಮುಂಚಿತವಾಗಿಯೇ ಹೇಳಿದ್ದಾರೆ. ಸುಮಾರು 10-15 ವರ್ಷಗಳಿಂದಲೂ ರೋನ್ ಕೊಡುವುದಕ್ಕೆ ಮತ್ತು ಅದನ್ನು ರೀಪೇ ಮಾಡುವುದಕ್ಕೆ ಒಂದು ನಿಕಟ ಫಾದ ಸಂಬಂಧವಿರಲಿಲ್ಲ. ಏಕೆಂದರೆ, ಯಾವ ಕಾರ್ಯಗಳಿಗೋಸ್ಕರ ಸಾಲ ಕೊಟ್ಟರೂ, ಆ ಒಂದು

(SRI M. Y. GHORPADE)

ಕೆಲಸಕಾರ್ಯದಿಂದ ಸಾಕಷ್ಟು ಆದಾಯ ಬರುತ್ತಾ ಇರಲಿಲ್ಲ. ರಾಜಮನ್ನಾರ್ ಅವರು ಚೇರ್‌ಮನ್ ಆಗಿದ್ದಂಥ ನಾಲ್ಕನೇ ಫೈನಾನ್ಸ್ ಕಮಿಷನ್ನಿನವರು ಈ ವಿಚಾರವಾಗಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಅದು ಈ ರೀತಿ ಇದೆ :

> " As the burden of Central loans began to pile up and as the unproductive, *i.e.*, non-revenue earning nature of a large part of it, e.g., education, health, protective irrigation, etc., became clear, the States felt that any further continuance of this policy by the Government of India could only mean that the Centre would ultimately take care not only of the interest, but also of the repayment liability of the whole debt, a net return equal to these obligations. "-

ಈ ವಿಚಾರದಲ್ಲಿ ಅವರು ರೀಪೆಡ್ಯೂಲಿಂಗ್ ಮಾಡಲೇ ಬೇಕಾಗುತ್ತದೆ. ಇದು ಆರ್ ಇಂಡಿಯಾ ಪ್ರಶ್ನೆ. ಈ ವಿಚಾರವನ್ನು ಆರನೇ ವಿತ್ತೀಯ ಆಯೋಗದವರು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಕೇಂದ್ರಸರ್ಕಾರದೊಡನೆ ನಮ್ಮ ರಾಜ್ಯದ ಪ್ಲಾನಿಂಗ್ ವಿಚಾರವಾಗಿ ಪ್ರಶ್ನೆ ಮಾಡಬೇಕಾಗಿದೆ. ಇದು ಅವಸರದಲ್ಲಿ ತೀರ್ಮಾನಮಾಡತಕ್ಕ ಪ್ರಶ್ನೆಯಲ್ಲವೆಂದು.

ಇನ್ನು ಟ್ಯಾಕ್ಸೇಷನ್ ಬಗ್ಗೆ ಕೆಲವು ಮಾನ್ಯ ಸದಸ್ಯರು ಬಹಳ ಕಳಕಳಿಯಿಂದ ಹೇಳಿದ್ದಾರೆ. ಟ್ಯಾಕ್ಸ್ ಹಾಕಲೇಬೇಡಿ, ಬಹಳ ಯೋಚನೆಮಾಡಿ ಹಾಕಿ, ಸಾಮಾನ್ಯ ಜನರ ಮೇಲೆ ಭಾರ ಬೀಳಬಾರದೆಂದು ಹೇಳಿದ್ದಾರೆ. ನನ್ನ ಅಭಿಪ್ರಾಯವೂ ಕೂಡ ಅದೇ ರೀತಿ ಇದೆ. ಸರ್ಕಾರದವರು ಆ ವಿಚಾರವನ್ನು ಕೂಲಂಕಷವಾಗಿ ಯೋಚನೆಮಾಡದೆ ಹೆಚ್ಚು ತೆರಿಗೆಯನ್ನು ಹಾಕುವುದಿಲ್ಲ. ಆ ರೀತಿ ಒಂದುವೇಳೆ ತೆರಿಗೆಯನ್ನು ಹಾಕಬೇಕಾದರೆ, ನಮ್ಮ ರಾಜ್ಯದಲ್ಲಿ ಹಿಂದೆ ಸ್ಥಾಪಿತವಾಗಿದ್ದಂಥ ಭೂತಲಿಂಗಂ ಕಮಿಟಿ, ಮತ್ತು ವಾಂಡೂ ಕಮಿಟಿ ವರದಿಗಳಲ್ಲಿ ಏನು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೋ ಅವೆಲ್ಲವನ್ನೂ ಪರಿಶೀಲಿಸಿ, ತಜ್ಞರ ಸಲಹೆಗಳನ್ನು ತೆಗೆದುಕೊಂಡು, ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿಯ ಸಂಬಂಧವಾಗಿ ಆಳವಾಗಿ ಯೋಚನೆಮಾಡಿ ಒಂದು ತೀರ್ಮಾನಕ್ಕೆ ಬರಬೇಕಾಗಿದೆ. ಅನಂತರ ನಮ್ಮ ಟ್ಯಾಕ್ಸೇಷನ್ ಪಾಲಿಸಿ ಏನೆಂಬುದನ್ನು ಇತ್ಯರ್ಥಮಾಡಿ ಒಂದು ತೀರ್ಮಾನಕ್ಕೆ ಬರುತ್ತೇವೆಯೇ ಹೊರತು ಸುಮ್ಮನೆ ಬೇಜವಾಬ್ದಾರಿಯಾಗಿ ಯಾವ ಒಂದು ಕೆಲಸವನ್ನೂ ಮಾಡುವುದಕ್ಕಾಗುವುದಿಲ್ಲವೆಂಬುದನ್ನು ನಾನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಎಸ್. ಎಂ. ಲಿಂಗಪ್ಪ.—ಆ ಕಮಿಟಿಗಳ ಶಿಫಾರಸಿನಂತೆ ಟ್ಯಾಕ್ಸ್‌ಗಳನ್ನು ಹಾಕುತ್ತೀರೋ ಅಥವಾ ಯಾವುದಾದರೂ ಒಂದು ಟ್ಯಾಕ್ಸೇಷನ್ ಪಾಲಿಸಿ ಪ್ರಿನ್ಸಿಪರ್ಸ್ ನೀವು ಹಿಂದೆ ಏನು ಘೋಷಣೆ ಮಾಡಿದಿರೋ ಅದರ ಒಂದು ಆಧಾರದ ಮೇಲೆ ಹಾಕುತ್ತೀರೋ ?

ಶ್ರೀ ಎಂ. ವೈ. ಘೋರ್ಪಡೆ.—ಎಕ್ಸ್‌ಪರ್ಟ್ ಕಮಿಟಿ ಎಂಬುದಾಗಿ ಮಾಡುವಾಗ ಅಲ್ಲಿ ಎಲ್ಲ ಕೂಲಂಕಷವಾಗಿ ವಿಚಾರಮಾಡದೆ ಸುಮ್ಮನೆ ಕಣ್ಣುಮುಚ್ಚಿಕೊಂಡು ತೀರ್ಮಾನ ಮಾಡುವುದಿಲ್ಲ. ಅದರ ಲಾಭ ನಮ್ಮ ರಾಜ್ಯದ ಜನತೆಗೆ ಬೇಕು. ಅದರಲ್ಲಿ ತಪ್ಪೇನೂ ಇಲ್ಲ. ಇಲ್ಲದೇ ಹೋದರೆ ಎಕ್ಸ್‌ಪರ್ಟ್ ಕಮಿಟಿ ಎಂಬುದಾಗಿ ಏಕೆ ಇರಬೇಕು ! ಈಗಾಗಲೇ 6ನೇ ಫೈನಾನ್ಸ್ ಕಮಿಷನ್ ರಚನೆ ಮಾಡುವಾಗ ಅವರ ಮುಂದೆ ಯಾವ್ಯಾವ ರೀತಿ ನಮ್ಮ ಕೇಸುಗಳನ್ನು ಮಂಡಿಸಬೇಕು, ಅವನ್ನು ಯಾವ ರೀತಿಯಲ್ಲಿ ತಯಾರುಮಾಡಬೇಕೆಂಬುದನ್ನು ಪ್ರಾರಂಭಮಾಡಿದ್ದೇವೆ. 5ನೇ ಫೈನಾನ್ಸ್ ಕಮಿಷನ್‌ನಿಂದ ನಮ್ಮ ರಾಜ್ಯಕ್ಕೆ ನ್ಯಾಯವಾಗಿ ಸಿಗಬೇಕಾದುದು ಸಿಗಲೇ ಇಲ್ಲ. ಆದ್ದರಿಂದ 6ನೇ ಫೈನಾನ್ಸ್ ಕಮಿಷನ್ನಿನ ಮುಂದೆ ನಾವು ಹೋಗುವಾಗ ಬಹಳ ದಕ್ಷತೆಯಿಂದ, ಬಹಳ ಭದ್ರವಾಗಿ, ಧೈರ್ಯವಾಗಿ ನಮ್ಮ ಯೋಜನೆಗಳನ್ನು ಇಟ್ಟು ಮೈಸೂರು ರಾಜ್ಯಕ್ಕೆ ಆಗಿರುವ ಅನ್ಯಾಯವನ್ನು ಸರಿಪಡಿಸಿಕೊಳ್ಳುವುದಕ್ಕೆ ನಾನು ಸರ್ವಪ್ರಯತ್ನವನ್ನೂ ಮಾಡುತ್ತೇನೆಂದು ಹೇಳುತ್ತೇನೆ.

ಶ್ರೀ ಎಸ್. ಎಂ. ಲಿಂಗಪ್ಪ.—ಇಲ್ಲಿನ ಕಾಂಗ್ರೆಸ್ ಸರ್ಕಾರಕ್ಕಿಂತ ಮದ್ರಾಸ್‌ನಲ್ಲಿರುವ ಡಿ.ಎಂ.ಕೆ. ಸರ್ಕಾರ ಬಹಳ ಚೆನ್ನಾಗಿ ಕೆಲಸಮಾಡುತ್ತಿದೆ.

ಶ್ರೀ ಎಂ. ವೈ. ಘೋರ್ಪಡೆ.—ಡಿ.ಎಂ.ಕೆ. ಸರ್ಕಾರದ ಬಗ್ಗೆ ನಾವು ಇಲ್ಲಿ ಮಾತನಾಡುವುದು ಬೇಡ.

ಇನ್ನು ಮೇಜರ್ ಇರ್ರಿಗೇಷನ್ ಬಗ್ಗೆ ಮಾನ್ಯ ಸದಸ್ಯರನೇಕರು ಬಹಳವಾಗಿ ಮಾತನಾಡಿದ್ದಾರೆ. ಆದ್ದರಿಂದ ಮೇಜರ್ ಇರ್ರಿಗೇಷನ್ ಬಗ್ಗೆ ಇದುವರೆಗೆ ಎಷ್ಟು ಖರ್ಚಾಗಿದೆ ಎಂಬ ಬಗ್ಗೆ ಕೆಲವು ಅಂಕಿ ಅಂಶಗಳನ್ನು ಈ ಸಭೆಯಲ್ಲಿ ಕೊಡಬೇಕೆಂದು ನನಗನ್ನಿಸುತ್ತದೆ.

ಇನ್ನು 1972-73ಕ್ಕೆ ಮೇಜರ್ ಇರಿಗೇಷನ್ ಬಗ್ಗೆ ಖರ್ಚುಮಾಡಬೇಕಾಗಿರತಕ್ಕ ಹಣದ ವಿಚಾರಕ್ಕೆ ಬಂದರೆ 222 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕಾಗಿದೆ. ಆ ಹಣವನ್ನು ಯಾವ ಯಾವ ಸ್ಕೀಮುಗಳಿಗೆ ಎಂದು ಕೇಳುವುದಾದರೆ—ತುಂಗಭದ್ರ ಪ್ರಾಜೆಕ್ಟ್, ಭದ್ರಾ ಪ್ರಾಜೆಕ್ಟ್, ಮಲಪ್ರಭ, ಆಪ್ಪರ್ ಕೃಷ್ಣಾ, ಘಟಪ್ರಭಾ ಸ್ಟೇಜ್ ಒಂದು ಮತ್ತು ಎರಡು; ಹೈವೇ ಕೆನಾಲ್, ಹೇಮಾವತಿ, ಕಪಿನಿ, ಹಾರಂಗಿ ಮತ್ತು ಕಂಬದ ಕಡ, ಈ ಎಲ್ಲ ಯೋಜನೆಗಳಿಗೂ 222 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ತಮ್ಮ ರಿಪ್ಲೈನಲ್ಲಿ ಹೇಮಾವತಿಗೆ 20.62 ಕೋಟಿ ರೂಪಾಯಿಗಳನ್ನು ಒದಗಿಸಲಾಗಿತ್ತು. ಅದರೆ ಅವಕೆ ಬಡ್ಜೆಟ್ಟಿನಲ್ಲಿ ಪ್ರೊವೈಡ್ ಮಾಡಿದುದ್ದು 24.2 ಕೋಟಿ ರೂಪಾಯಿಗಳು.....

ಶ್ರೀ ಎಂ. ವೈ. ಘೋರ್ಪಡೆ.—ಅದಕ್ಕೆ ಒಟ್ಟಿನಲ್ಲಿ ಕ್ಯುಮಿಲೇಟಿವಾಗಿ ಖರ್ಚಾಗಬೇಕಾಗಿರತಕ್ಕ ಹಣ 29 ಕೋಟಿ. ಅಂತೂ ಈ ಎರ್ರಾ ಸ್ಕೀಮುಗಳಿಗೂ ಕ್ಯುಮಿಲೇಟಿವಾಗಿ ಒಟ್ಟಾಗಿ ಖರ್ಚಾಗಬೇಕಾದುದು 483 ಕೋಟಿ ರೂಪಾಯಿಗಳು. ಆದರ ಬಗ್ಗೆ ಈ ಸಾಲಿಗೆ 222 ಕೋಟಿ ರೂ. ಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಲಾಗಿದೆ. ಇನ್ನುಳಿಯತಕ್ಕ 261 ಕೋಟಿ ರೂಪಾಯಿಗಳನ್ನು ಒದಗಿಸಿಕೊಂಡರೆ ಮಾತ್ರ ಈ ಯೋಜನೆಗಳ ಕಾರ್ಯವನ್ನು ಸಂಪೂರ್ಣವಾಗಿ ಮುಗಿಸುವುದಕ್ಕೆ ಸಾಧ್ಯ. ಆದ್ದರಿಂದ ಈ ಬಾಬುಗಳಿಗೆಲ್ಲಾ ಹಣವನ್ನು ಹೇಗೆ ಖರ್ಚುಮಾಡಬೇಕು? ಆ ಹಣವನ್ನು ಎಲ್ಲಿಂದ ಒದಗಿಸಿಕೊಳ್ಳಬೇಕು ಅನ್ನತಕ್ಕ ವಿಚಾರದಲ್ಲಿ ಈ ಸಭೆಯ ಮಾನ್ಯ ಸದಸ್ಯರೆಲ್ಲರೂ ನನಗೆ ಸಂಪೂರ್ಣ ಸಹಕಾರ ಕೊಡುತ್ತಾರೆಂದು ನಾನು ನಂಬಿದ್ದೇನೆ.

ಇನ್ನು ಕಾಳಿ ನದೀ ವಿಚಾರಕ್ಕೆ ಬಂದರೆ ಆ ಪ್ರಾಜೆಕ್ಟಿಗೆ 10 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಈ ಪವರ್ ಪ್ರಾಜೆಕ್ಟುಗಳ ವಿಷಯದಲ್ಲಿ ಮಾತನಾಡುವುದಾದರೆ ಶರಾವತಿ ಪ್ರಾಜೆಕ್ಟಿಗೆ ಈ ವರ್ಷದಲ್ಲಿ 4 ಕೋಟಿರೂಪಾಯಿ ಖರ್ಚಾಗಬೇಕಾಗಿದೆ. ಕಾಳೀನದಿ ಪ್ರಾಜೆಕ್ಟಿಗೆ 36 ಕೋಟಿ ರೂಪಾಯಿಗಳು ಬೇಕಾಗಿದೆ. ಅಂತೂ ಒಟ್ಟಿನಲ್ಲಿ ಈ ಎರಡಕ್ಕೂ 46 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕಾಗಿದೆ. ಹೀಗೆ ಖರ್ಚುಮಾಡಬೇಕಾಗಿರತಕ್ಕ ಹಣದಲ್ಲಿ 14 ಕೋಟಿ ರೂಪಾಯಿಗಳು ವಿದ್ಯುಚ್ಛಕ್ತಿ ಮಾರಾಟದಿಂದ ಬರುತ್ತದೆ. ಇನ್ನುಳಿಯಕತ್ತ 32 ಕೋಟಿ ರೂಪಾಯಿಗಳನ್ನು ಹೊರಗಡೆಯಿಂದ ಬರಮಾಡಿಕೊಳ್ಳಬೇಕಾಗಿದೆ. ಈ ವಿಚಾರದಲ್ಲಿ ನಾವೀಗ ಕೇಂದ್ರ ಸರ್ಕಾರದೊಂದಿಗೆ ಚರ್ಚೆ ಮಾಡುತ್ತಿದ್ದೇವೆ. ಇವುಗಳ ವಿಚಾರದಲ್ಲಿ ಒಂದು ಹೊಸ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಎಂದಿದ್ದೇವೆ.

ನಮ್ಮ ರಾಜ್ಯದಲ್ಲಿ ಈಗ ಇಂಥ ಒಂದು ಪರಿಸ್ಥಿತಿ ಇದ್ದಾಗ್ಯೂ ನಾವು ನಮ್ಮ ಡೆವಲಪ್‌ಮೆಂಟ್ ಕೆಲಸ ಕಾರ್ಯಗಳನ್ನು ನಿಲ್ಲಿಸಿಲ್ಲ. ಅವುಗಳನ್ನು ನಡೆಸಿಕೊಂಡೇಬರಲಾಗಿದೆ. ಬರಲರತಕ್ಕ 1972-73ಕ್ಕೆ ಸೆಂಟ್ರಲ್ ಸೆಕ್ಟಾರಿನಲ್ಲಿ 72 ಕೋಟಿ ಮತ್ತೆ, 18 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕೆಲವು ಯೋಜನೆಗಳು ಆಗುವುವಿವೆ. ರಾಜ್ಯದ ಪರವಾಗಿ ಈಗ ಮತ್ತೆ 40 ಕೋಟಿ ರೂಪಾಯಿಗಳ ಸ್ಕೀಮನ್ನು ಮಂಜೂರು ಮಾಡಲಾಗಿದೆ. 19 ಕೋಟಿ ರೂಪಾಯಿಗಳು ಕಾವೇರಿ ಸ್ಕೀಮಿಗೆ ಮಂಜೂರಾಗಿದೆ. ಬಳ್ಳಾರಿಯಲ್ಲರತಕ್ಕ ಹೊಸಪೇಟೆ ಸ್ಟೀಲ್ ಪ್ಲಾಂಟಿಗೆ ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ದುಡ್ಡು ಖರ್ಚಾಗುತ್ತದೆ ಅಷ್ಟನ್ನೂ ಒದಗಿಸಬೇಕು ಎಂದರೆ ಅದಕ್ಕೆ ಜಾಸ್ತಿ ದುಡ್ಡು ಬೇಕಾಗುತ್ತದೆ. ಮುಂದೆ ಬರಲರುವ ನಾಲ್ಕಾರು ವರ್ಷಗಳಲ್ಲಿ ಅದಕ್ಕೆ ಇನ್ನೂ ಹೆಚ್ಚಿನ ಹಣವನ್ನು ಒದಗಿಸಿಕೊಳ್ಳಬೇಕಾಗಿದೆ.

ಇನ್ನು ಅಪ್ಪರ್ ಕೃಷ್ಣಾ ಪ್ರಾಜೆಕ್ಟಿನ ಬಗ್ಗೆ ಹೇಳುವುದಾದರೆ ಅದಕ್ಕೆ ಇಲ್ಲಿಯವರೆಗೆ 14 ಕೋಟಿ 79 ಸಾವಿರ ರೂಪಾಯಿಗಳು ಖರ್ಚಾಗಿದೆ. ಅವಕ್ಕೆ ಇನ್ನೂ 101 ಕೋಟಿ ಖರ್ಚಾದರೆ ಅದು ಪೂರ್ತಿಯಾಗುತ್ತದೆ. ನಾವು ಇಂಥ ದೊಡ್ಡ ದೊಡ್ಡ ಕೆಲಸ ಕಾರ್ಯಗಳನ್ನು ಕೈಗೊಳ್ಳಲು ಕಾರ್ಯಕ್ರಮಗಳನ್ನು ಹಾಕಿಕೊಂಡಿರುವಾಗ ಅವುಗಳಿಗೆಲ್ಲಾ ಎಷ್ಟು ಹಣ ಬೇಕಾಗುತ್ತದೋ ಅಷ್ಟನ್ನೂ ನಾವು ಒದಗಿಸಿಕೊಳ್ಳಲೇಬೇಕು. ಅದಕ್ಕೆ ನಾವೆಲ್ಲರೂ ಸೇರಿ ಪ್ರಯತ್ನ ಮಾಡಬೇಕಾಗಿದೆ.

ಶ್ರೀ ಎಂ. ವೈ. ಘೋರ್ಪಡೆ.—ಇನ್ನು ಬ್ಯಾಲೆಟ್ ಪೇಪರ್ ಬಗ್ಗೆ ಶ್ರೀಮಾನ್ ದೇವೇಗೌಡರು ಮಾತನಾಡಿದರು. 2—3 ಬಣ್ಣದ ಬ್ಯಾಲೆಟ್ ಪೇಪರ್‌ಗಳಿರುವುದರಿಂದ ಚುನಾವಣೆಯಲ್ಲಿ ಅನ್ಯಾಯವಾಗಿದೆ ಎಂದು ತಿಳಿದುಕೊಳ್ಳಬಹುದು ಎಂದು ಭಾಷಣ ಮಾಡಿದರು. ಬ್ಯಾಲೆಟ್ ಪೇಪರ್ ಬಣ್ಣಕ್ಕೂ ಚುನಾವಣೆಗೂ ಯಾವ ಸಂಬಂಧವಿಲ್ಲ ಎಂದು ನನಗನ್ನಿಸುತ್ತದೆ. ಏತಕ್ಕೆ ಆ ರೀತಿ ಮಾತನಾಡಿದರೋ ಗೊತ್ತಾಗಲಿಲ್ಲ. ಇದಕ್ಕೆ ಮುಂಚೆ ನಿಮ್ಮ ಪಕ್ಷಕ್ಕೆ ಸೇರಿರತಕ್ಕಂಥ ಹಿರಿಯ ನಾಯಕರು ಎರಡನೆಯ ನಲ ದೇಶದಲ್ಲಿ ಚಮತ್ಕಾರವಾಗಿದೆ ಎಂದು ಹೇಳಿದರು. ಚಮತ್ಕಾರ ಏತಕ್ಕೆ, ಏನು ಅರ್ಥ ? ಈ ವಿಚಾರದ ಬಗ್ಗೆ ನಾನು ಪಕ್ಷದ ವತಿಯಿಂದ ಹೇಳುತ್ತಿದ್ದೇನೆ, ಯಾವ ಘಟನೆಯಿಂದ ಯಾವ ಕಾರಣದಿಂದ ಚಮತ್ಕಾರವಾಗಿದೆ ಎನ್ನುವುದು ಮಾನ್ಯ ಸದಸ್ಯರಿಗೆ ಗೊತ್ತಿಲ್ಲದೆ ಹೋದರೆ ಅದನ್ನು ಚಮತ್ಕಾರ ಎಂದು ಹೇಗೆ ಕರೆಯುತ್ತೀರಿ. ?

ಶ್ರೀ ಎಚ್. ಡಿ. ದೇವೇಗೌಡ.—ಚಮತ್ಕಾರ, ಹಾವಾಡಿಗರ ಆಟ ಎಂದು ನಾನು ಹೇಳಲಿಲ್ಲ.

This matter was made known to the Returing Officer. Different coloured ballot papers were there. Why did it happen ? That is all I want to know.

ಶ್ರೀ ಎಂ. ವೈ. ಘೋರ್ಪಡೆ.—ಚಮತ್ಕಾರದ ಕಾರಣ ಗೊತ್ತಿಲ್ಲವೆಂದು ಒಪ್ಪಿದ್ದೀರಿ. ಕಾರಣ ಹುಡುಕುವುದು ಮನುಷ್ಯನ ಸ್ವಭಾವ ಇರುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಗೆದ್ದು ಬಂದು ಹೇಳುತ್ತಿದ್ದೇನೆ, ಸೋತುಬಂದಿಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ಒಂದು ಉದಾಹರಣೆ ಕೊಡಬೇಕಾದರೆ, ಹಿಂದೆ ಮೀಟಿಯೋರ್, ಆಕಾಶದಿಂದ ಬಿದ್ದರೆ ಯಾರಿಗೋ ದೊಡ್ಡವರಿಗೆ ಅಪಾಯ ಆಗುತ್ತದೆ ಎನ್ನುವ ವಿಚಾರವಿತ್ತು. ಅದರೆ ನಕ್ಷತ್ರ ಅಥವಾ ಮೀಟಿಯೋರ್ ಬೀಳುವುದಕ್ಕೂ ದೊಡ್ಡವರಿಗೆ ಅಪಾಯ ಆಗುವುದಕ್ಕೂ ಏನು ಸಂಬಂಧ, ಏನು ಕಾರಣ ಎಂದು ಯಾರಿಗೂ ಗೊತ್ತಿರಲಿಲ್ಲ. ಮಿಟ್‌ಯೋರ್ ಯಾತಕ್ಕೆ ಬಿತ್ತು ಎಂದು ಗೊತ್ತಾದ ಮೇಲೆ ಮೀಟಿಯೋರ್ ಬೀಳುವುದಕ್ಕೂ ದೊಡ್ಡವರಿಗೆ ಅಪಾಯವಾಗುವುದಕ್ಕೂ ಸಂಬಂಧವಿಲ್ಲವೆಂದು ಗೊತ್ತಾಯಿತು.

ಶ್ರೀ ಕೋಣಂದೂರು ಲಿಂಗಪ್ಪ.—ಸ್ವತಂತ್ರ ನಕ್ಷತ್ರ ಸುಳ್ಳಿನ ಪ್ರತೀಕ, ಹರಿಶ್ಚಂದ್ರನ ನಕ್ಷತ್ರ ಸತ್ಯದ ಪ್ರತೀಕ.

ಶ್ರೀ ಎಂ. ವೈ. ಘೋರ್ಪಡೆ.— ಸ್ವತಂತ್ರ ಪಕ್ಷ ಚುನಾವಣೆಯಲ್ಲಿ ಬದ್ಧು ಹೋಯಿತು ಎಂದು ಒಪ್ಪುತ್ತೀನೆ. ಮಾನ್ಯ ಲಿಂಗಣ್ಣನವರಿಗೆ ಅದರ ಮೈತ್ರಿಕೂಟ್, ವಿಚಿತ್ರ ಮೈತ್ರಿಕೂಟ ಎಂದು ಹೇಳುತ್ತೀನೆ. ಆ ವಿಚಿತ್ರ ಕೂಟಕ್ಕೂ ಎಲೆಕ್ಷನ್ ರಿಸಲ್ಟ್‌ಗೂ ಸಂಬಂಧಿಯಿರಬಹುದು. ಬ್ಯಾಲೆಟ್ ಪೇಪರ್ ಬಣ್ಣಕ್ಕೂ ಮತ್ತು ಎಲೆಕ್ಷನ್ ರಿಸಲ್ಟ್‌ಗೂ ಸಂಬಂಧ ಇದೆಯೆಂದು ಹೇಳುತ್ತಾ ಹೋದರೆ ಅದು ಸರಿಯಲ್ಲ. ಬಹುಶಃ ಮಾನ್ಯ ಸದಸ್ಯರಿಗೆ ಚುನಾವಣೆ ಹೊಸದೇನೂ ಅಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ನಮಗೆ ಹೊಸದೇನೂ ಅಲ್ಲ. ಬ್ಯಾಲೆಟ್ ಪೇಪರ್ ಬದಲಾವಣೆ ಆಗುವ ಅವಶ್ಯಕತೆ ಏನು ಇದೆ ? ಪ್ರಿಂಟ್ ಮಾಡುವ ಪೇಪರ್ ಷಾರ್ಟೇಜ್ ಇತ್ತೇ ಏನು !

ಶ್ರೀ ಎಂ. ವೈ. ಘೋರ್ಪಡೆ.—ಇಂದಿರಾಗಾಂಧಿಯವರ ರಕ್ಷಣೆ ಇದೆ ; ಎಲ್ಲಿಯವರೆಗೆ ಅವರ ರಕ್ಷಣೆ ಇರುತ್ತದೆ ಎನ್ನುವ ಮಾತು ಹೇಳಿದರು. ಇಂದಿರಾಗಾಂಧಿಯವರ ಕತೆ ಪ್ರಾಕ್ಟಿಕ್ ಇಲ್ಲ. ಇಂದಿರಾಗಾಂಧಿಯವರನ್ನು ಕಾಪಾಡುವ ಪಾಲ್ಸಿ, ಸಮಾಜವಾದದ ಪಾಲ್ಸಿ. ಅದು ನಮ್ಮನ್ನು ಎಲ್ಲಾ ಕಾಪಾಡುತ್ತದೆ. ಮತ್ತೆ ನಮ್ಮದು ಕೇಂದ್ರದ ಸೆಟ್‌ಲೈಟ್ ಗವರ್ನಮೆಂಟು ಎಂದು ಹೇಳಿದರು.

ಶ್ರೀ ಕೋಣಂದೂರು ಲಿಂಗಪ್ಪ.—ಆನ್ ಎ ಪಾಯಿಂಟ್ ಆಫ್ ಇನ್‌ಫರ್ಮೇಷನ್ ಸರ್, ನಮ್ಮರಾಷ್ಟ್ರದ ಪ್ರಧಾನ ಮಂತ್ರಿಗಳಿಗೆ ಒಂದು ದಿನಕ್ಕೆ ಸರ್ಕಾರದ ಬಜಾನೆಯಿಂದ ಇಪ್ಪತ್ತೈದು ಸಾವಿರ ರೂಪಾಯಿಗಳು ಖರ್ಚಾಗುತ್ತದೆ. ಅದೇ ರೀತಿ ನಮಾಜವಾದ ಇದೆ ಎನ್ನುವುದಾದರೆ ಅದನ್ನು ಒಪ್ಪಿಕೊಳುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ.—ಡಿ.ಎಂ.ಕೆ. ಸರ್ಕಾರದ ಬಗ್ಗೆ ನಾವು ಇಲ್ಲಿ ಮಾತನಾಡುವುದು ಬೇಡ.

ಇನ್ನು ಮೇಜರ್ ಇರ್ರಿಗೇಷನ್ ಬಗ್ಗೆ ಮಾನ್ಯ ಸದಸ್ಯರನೇಕರು ಬಹಳವಾಗಿ ಮಾತನಾಡಿದ್ದಾರೆ. ಆದ್ದರಿಂದ ಮೇಜರ್ ಇರ್ರಿಗೇಷನ್ ಬಗ್ಗೆ ಇದುವರೆಗೆ ಎಷ್ಟು ಖರ್ಚಾಗಿದೆ ಎಂಬ ಬಗ್ಗೆ ಕೆಲವು ಅಂಕಿ ಅಂಶಗಳನ್ನು ಈ ಸಭೆಯಲ್ಲಿ ಕೊಡಬೇಕೆಂದು ನನಗನ್ನಿಸುತ್ತದೆ.

ಇನ್ನು 1972-73ಕ್ಕೆ ಮೇಜರ್ ಇರಿಗೇಷನ್ ಬಗ್ಗೆ ಖರ್ಚುಮಾಡಬೇಕಾಗಿರತಕ್ಕ ಹಣದ ವಿಚಾರಕ್ಕೆ ಬಂದರೆ 222 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕಾಗಿದೆ. ಆ ಹಣವನ್ನು ಯಾವ ಯಾವ ಸ್ಕೀಮುಗಳಿಗೆ ಎಂದು ಕೇಳುವುದಾದರೆ—ತುಂಗಭದ್ರಾ ಪ್ರಾಜೆಕ್ಟ್, ಭದ್ರಾ ಪ್ರಾಜೆಕ್ಟ್, ಮಲಪ್ರಭ, ಆಪ್ಪರ್ ಕೃಷ್ಣಾ, ಘಟಪ್ರಭಾ ಸ್ಟೇಜ್ ಒಂದು ಮತ್ತು ಎರಡು, ಹೈವೇ ಕೆನಾಲ್, ಹೇಮಾವತಿ, ಕಪಿನಿ, ಹಾರಂಗಿ ಮತ್ತು ಕಂಬಿದ ಕಡ, ಈ ಎಲ್ಲ ಯೋಜನೆಗಳಿಗೂ 222 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ತಮ್ಮ ರಿಪ್ಲೈನಲ್ಲಿ ಹೇಮಾವತಿಗೆ 20.62 ಕೋಟಿ ರೂಪಾಯಿಗಳನ್ನು ಒದಗಿಸಲಾಗಿತ್ತು. ಅದರೆ ಅವಕೆ ಬಡ್ಜೆಟ್ಟಿನಲ್ಲಿ ಪ್ರೊವೈಡ್ ಮಾಡಿದುದ್ದು 24.2 ಕೋಟಿ ರೂಪಾಯಿಗಳು.....

ಶ್ರೀ ಎಂ. ವೈ. ಘೋರ್ಪಡೆ.—ಅದಕ್ಕೆ ಒಟ್ಟಿನಲ್ಲಿ ಕ್ಯುಮಿಲೇಟಿವಾಗಿ ಖರ್ಚಾಗಬೇಕಾಗಿರತಕ್ಕ ಹಣ 29 ಕೋಟಿ. ಅಂತೂ ಈ ಎರ್ರಾ ಸ್ಕೀಮುಗಳಿಗೂ ಕ್ಯುಮಿಲೇಟಿವಾಗಿ ಒಟ್ಟಾಗಿ ಖರ್ಚಾಗಬೇಕಾದುದು 483 ಕೋಟಿ ರೂಪಾಯಿಗಳು. ಅದರ ಬಗ್ಗೆ ಈ ಸಾಲಿಗೆ 222 ಕೋಟಿ ರೂ. ಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಲಾಗಿದೆ. ಇನ್ನುಳಿಯತಕ್ಕ 261 ಕೋಟಿ ರೂಪಾಯಿಗಳನ್ನು ಒದಗಿಸಿಕೊಂಡರೆ ಮಾತ್ರ ಈ ಯೋಜನೆಗಳ ಕಾರ್ಯವನ್ನು ಸಂಪೂರ್ಣವಾಗಿ ಮುಗಿಸುವುದಕ್ಕೆ ಸಾಧ್ಯ. ಆದ್ದರಿಂದ ಈ ಬಾಬುಗಳಿಗೆಲ್ಲಾ ಹಣವನ್ನು ಹೇಗೆ ಖರ್ಚುಮಾಡಬೇಕು? ಆ ಹಣವನ್ನು ಎಲ್ಲಿಂದ ಒದಗಿಸಿಕೊಳ್ಳಬೇಕು ಅನ್ನತಕ್ಕ ವಿಚಾರದಲ್ಲಿ ಈ ಸಭೆಯ ಮಾನ್ಯ ಸದಸ್ಯರೆಲ್ಲರೂ ನನಗೆ ಸಂಪೂರ್ಣ ಸಹಕಾರ ಕೊಡುತ್ತಾರೆಂದು ನಾನು ನಂಬಿದ್ದೇನೆ.

ಇನ್ನು ಕಾಳಿ ನದೀ ವಿಚಾರಕ್ಕೆ ಬಂದರೆ ಆ ಪ್ರಾಜೆಕ್ಟಿಗೆ 10 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಈ ಪವರ್ ಪ್ರಾಜೆಕ್ಟುಗಳ ವಿಷಯದಲ್ಲಿ ಮಾತನಾಡುವುದಾದರೆ ಶರಾವತಿ ಪ್ರಾಜೆಕ್ಟಿಗೆ ಈ ವರ್ಷದಲ್ಲಿ 4 ಕೋಟಿರೂಪಾಯಿ ಖರ್ಚಾಗಬೇಕಾಗಿದೆ. ಕಾಳೀನದಿ ಪ್ರಾಜೆಕ್ಟಿಗೆ 36 ಕೋಟಿ ರೂಪಾಯಿಗಳು ಬೇಕಾಗಿದೆ. ಅಂತೂ ಒಟ್ಟಿನಲ್ಲಿ ಈ ಎರಡಕ್ಕೂ 46 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕಾಗಿದೆ. ಹೀಗೆ ಖರ್ಚುಮಾಡಬೇಕಾಗಿರತಕ್ಕ ಹಣದಲ್ಲಿ 14 ಕೋಟಿ ರೂಪಾಯಿಗಳು ವಿದ್ಯುಚ್ಛಕ್ತಿ ಮಾರಾಟದಿಂದ ಬರುತ್ತದೆ. ಇನ್ನುಳಿಯಕತ್ಕ 32 ಕೋಟಿ ರೂಪಾಯಿಗಳನ್ನು ಹೊರಗಡೆಯಿಂದ ಬರಮಾಡಿಕೊಳ್ಳಬೇಕಾಗಿದೆ. ಈ ವಿಚಾರದಲ್ಲಿ ನಾವೀಗ ಕೇಂದ್ರ ಸರ್ಕಾರದೊಂದಿಗೆ ಚರ್ಚೆ ಮಾಡುತ್ತಿದ್ದೇವೆ. ಇವುಗಳ ವಿಚಾರದಲ್ಲಿ ಒಂದು ಹೊಸ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಎಂದಿದ್ದೇವೆ.

ನಮ್ಮ ರಾಜ್ಯದಲ್ಲಿ ಈಗ ಇಂಥ ಒಂದು ಪರಿಸ್ಥಿತಿ ಇದ್ದಾಗ್ಯೂ ನಾವು ನಮ್ಮ ಡೆವಲಪ್‌ಮೆಂಟ್ ಕೆಲಸ ಕಾರ್ಯಗಳನ್ನು ನಿಲ್ಲಿಸಿಲ್ಲ. ಅವುಗಳನ್ನು ನಡೆಸಿಕೊಂಡೇಬರಲಾಗಿದೆ. ಬರಲರತಕ್ಕ 1972-73ಕ್ಕೆ ಸೆಂಟ್ರರ್ ಸೆಕ್ಟಾರಿನಲ್ಲಿ 72 ಕೋಟಿ ಮತ್ತೆ 18 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕೆಲವು ಯೋಜನೆಗಳು ಆಗುವುವಿವೆ. ರಾಜ್ಯದ ಪರವಾಗಿ ಈಗ ಮತ್ತೆ 40 ಕೋಟಿ ರೂಪಾಯಿಗಳ ಸ್ಕೀಮನ್ನು ಮಂಜೂರು ಮಾಡಲಾಗಿದೆ. 19 ಕೋಟಿ ರೂಪಾಯಿಗಳು ಕಾವೇರಿ ಸ್ಕೀಮಿಗೆ ಮಂಜೂರಾಗಿದೆ. ಬಳ್ಳಾರಿಯಲ್ಲಿರತಕ್ಕ ಹೊಸಪೇಟೆ ಸ್ಟೀಲ್ ಪ್ಲಾಂಟಿಗೆ ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ದುಡ್ಡು ಖರ್ಚಾಗುತ್ತದೆ ಅಷ್ಟನ್ನೂ ಒದಗಿಸಬೇಕು ಎಂದರೆ ಅದಕ್ಕೆ ಜಾಸ್ತಿ ದುಡ್ಡು ಬೇಕಾಗುತ್ತದೆ. ಮುಂದೆ ಬರಲರುವ ನಾಲ್ಕಾರು ವರ್ಷಗಳಲ್ಲಿ ಅದಕ್ಕೆ ಇನ್ನೂ ಹೆಚ್ಚಿನ ಹಣವನ್ನು ಒದಗಿಸಿಕೊಳ್ಳಬೇಕಾಗಿದೆ.

ಇನ್ನು ಆಪ್ಪರ್ ಕೃಷ್ಣಾ ಪ್ರಾಜೆಕ್ಟಿನ ಬಗ್ಗೆ ಹೇಳುವುದಾದರೆ ಅದಕ್ಕೆ ಇಲ್ಲಿಯವರೆಗೆ 14 ಕೋಟಿ 79 ಸಾವಿರ ರೂಪಾಯಿಗಳು ಖರ್ಚಾಗಿದೆ. ಅವಕ್ಕೆ ಇನ್ನೂ 101 ಕೋಟಿ ಖರ್ಚಾದರೆ ಅದು ಪೂರ್ತಿಯಾಗುತ್ತದೆ. ನಾವು ಇಂಥ ದೊಡ್ಡ ದೊಡ್ಡ ಕೆಲಸ ಕಾರ್ಯಗಳನ್ನು ಕೈಗೊಳ್ಳಲು ಕಾರ್ಯಕ್ರಮಗಳನ್ನು ಹಾಕಿಕೊಂಡಿರುವಾಗ ಅವುಗಳಿಗೆಲ್ಲಾ ಎಷ್ಟು ಹಣ ಬೇಕಾಗುತ್ತದೋ ಅಷ್ಟನ್ನೂ ನಾವು ಒದಗಿಸಿಕೊಳ್ಳಲೇಬೇಕು. ಅದಕ್ಕೆ ನಾವೆಲ್ಲರೂ ಸೇರಿ ಪ್ರಯತ್ನ ಮಾಡಬೇಕಾಗಿದೆ.

(ಶ್ರೀ ಎಂ. ವೈ. ಘೋರ್ಪಡೆ)

ಇನ್ನು ನಾವು ೀಕರ್ ಸೆಕ್ಷನ್‌ಗಳ ಬಗ್ಗೆ ನೇರವಾದ ಯೋಜನೆಗಳೇನಿವೆ ಅವುಗಳತ್ತ ನಮ್ಮ ಗಮನವನ್ನು ಕೇಂದ್ರೀಕರಿಸಬೇಕಾಗಿದೆ; ಎಂದು ಹೇಳಿದ್ದಾರೆ. ಈ ಬಗ್ಗೆ ನನ್ನ ಅಭಿಪ್ರಾಯ ಕೂಡ ಹಾಗೇ ಇದೆ. ಎೀಕರ್ ಸೆಕ್ಷನ್ನುಗಳು ಮುಂದೆ ಬರಬೇಕಾದರೆ ಯಾವ ಸ್ಕೀಮುಗಳನ್ನು ಹಾಕಿ ಕೊಂಡರೆ ಅವರಿಗೆ ಅನುಕೂಲವಾಗುತ್ತದೆ ಎಂಬುದನ್ನು ನಿರ್ಧಾರಮಾಡಬೇಕು. ಅವರಿಗೆ ಅತ್ಯಗತ್ಯವಾಗಿ ಬೇಕಾಗಿರತಕ್ಕ ಕುಡಿಯುವ ನೀರಿನ ಬಾವಿ, ವ್ಯವಸಾಯಕ್ಕೆ ಬೇಕಾದ ನೀರಾವರಿ ಸೌಕರ್ಯ, ಮನೆಗಳನ್ನು ಕಟ್ಟಿಕೊಳ್ಳಲು ಅವರಿಗೆ ನಿವೇಶನಗಳನ್ನು ಒದಗಿಸುವುದು ಇವುಗಳನ್ನು ತ್ವರಿತವಾಗಿ ನಡೆಸಬೇಕೆಂಬ ಆಸೆ ಇದೆ. ಈ ದಿವಸ ಇವರಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ಮನೆ ಕಟ್ಟಿಕೊಳ್ಳಲು ಸುಲಭವಾಗಿ ನಿವೇಶನಗಳು ಸಿಕ್ಕುತ್ತಿಲ್ಲ. ಇತ್ತಕಡೆಗೆ ಕೇಂದ್ರ ಸರ್ಕಾರ ಕೂಡ ಸಾಕಷ್ಟು ವಿಚಾರ ಮಾಡುತ್ತಿದೆ. ಮೊದಲು ಅವರಿಗೆ ಮನೆಗಳನ್ನು ಕಟ್ಟಿಕೊಳ್ಳಲು ಸರ್ಕಾರ ವಾರ್ ಫುಟಿಂಗಿನಲ್ಲಿ ನಿವೇಶನಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕಾಗಿದೆ. ಹಾಗೆ ಮಾಡಿದರೆ ಮಾತ್ರ ಅವರಿಗೆ ಅನುಕೂಲವಾಗುತ್ತದೆ. ಇಂಥ ನೇರವಾದ ಅನೇಕ ಸ್ಕೀಮುಗಳ ಬಗ್ಗೆ ಕಾರ್ಯ ಕ್ರಮ ಕೈಗೊಳ್ಳಲು ಏನು ಮಾಡಬೇಕೆಂಬುದನ್ನು ಸರ್ಕಾರ ತೀವ್ರವಾಗಿ ಆಲೋಚಿಸುತ್ತಿದೆ.

ಇನ್ನು ಭೂಸುಧಾರಣೆಯ ಬಗ್ಗೆ ಹೇಳುವುದಾದರೆ ಇಲ್ಲಿ ಸರ್ಕಾರದವರು ಪ್ರಾಮುಖ್ಯವಾಗಿ ಮಾಡಬೇಕಾಗಿರುವುದು ಒಂದು ಸೆಕ್ಯೂರಿಟಿ ಆಫ್ ಟೆನ್ಯೂರ್, ಎರಡನೇಯದು ಫೇರ್ ರೆಂಟನ್ನು ಫಿಕ್ಸ್ ಮಾಡುವುದು, ಮೂರನೆಯದು ರಿಜಂಪಷನ್ ಮತ್ತು ನಾಲ್ಕನೇದು ಸೀಲಿಂಗ್ ಇವು ಭೂಸುಧಾರಣೆಯಲ್ಲಿ ಬಹಳ ಪ್ರಾಮುಖ್ಯವಾದವುಗಳೆಂದು ನಾನು ಭಾವಿಸುತ್ತೇನೆ. ಇದರ ಬಗ್ಗೆ ನನಗೂ ಬಹಳ ಕಳಕಳಿಯಿದೆ. ಕೇಂದ್ರ ಸರ್ಕಾರಕ್ಕೂ ಬಹಳ ಆಸಕ್ತಿ ಇದೆ. ಮುಖ್ಯಮಂತ್ರಿಗಳಿಗೂ ಬಹಳ ಆಸಕ್ತಿ ಇದರಲ್ಲಿದೆ. ಇದನ್ನು ಯಶಸ್ವಿಯಾಗಿ ಅನುಷ್ಠಾನಕ್ಕೆ ತರಲು ವಿರೋಧಪಕ್ಷದವರು ಏನು ಉಪಯುಕ್ತ ಸಲಹೆಗಳನ್ನು ಕೊಡುತ್ತಾರೋ ಅವುಗಳಿಗೂ ಹೆಚ್ಚಿನ ಮನ್ನಣೆ ಕೊಡಲಾಗುತ್ತೆ. ಅವರು ಕೊಡತಕ್ಕ ಸಲಹೆಗಳಿಗೂ ಪುರಸ್ಕಾರವುಂಟು.

ಇನ್ನು ತೆರಿಗೆ ಬಾಕಿಯ ವಿಚಾರಕ್ಕೆ ಬಂದರೆ...

ಶ್ರೀ ಕೋಣಂದೂರು ಲಿಂಗಪ್ಪ.—ಏನು ತಾವು ಭೂಸುಧಾರಣೆ ಬಗ್ಗೆ ತೀರ್ಮಾನಿಸಿ ಮಾತನಾಡಿದಿರಿ?

ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿಗಳು).—ಮಾನ್ಯ ಆರ್ಥಿಕ ನಿಪುಣರ ಭಾಷಣ ಮುಗಿದ ಮೇಲೆ ನನಗೆ ಮಾನ್ಯ ಅಧ್ಯಕ್ಷರು ಮೂರು ನಾಲ್ಕು ನಿಮಿಷಗಳ ಅವಕಾಶ ಕೊಟ್ಟರೆ ನಾನು ಭೂಸುಧಾರಣೆಯ ಬಗ್ಗೆ ಎರಡು ಮಾತುಗಳನ್ನಾಡಬೇಕೆಂದಿದ್ದೇನೆ.

ಶ್ರೀ ಎಂ. ವೈ. ಘೋರ್ಪಡೆ.—ನಾನು ತೀರ್ಮಾನಿಸಿ ಮಾತನಾಡಿಲ್ಲ. ಬೇಕಾದರೆ ದಿನಗಟ್ಟಲೆ ಅದರ ಬಗ್ಗೆ ಭಾಷಣ ಮಾಡಬಲ್ಲೆ. ಆದರೆ ಬಡ್ಜೆಟ್ ಕಾಲಕ್ಕೆ ಅದರ ಬಗ್ಗೆ ಎಷ್ಟನ್ನು ಹೇಳಬೇಕೋ ಅಷ್ಟನ್ನು ಮಾತ್ರ ಹೇಳಿದೆ. ಈ ವಿಚಾರವಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳೆರಡೂ ಹೈಯೆಸ್ಟ್ ಪ್ರಯಾರಿಟಿ ಕೊಟ್ಟು ಕೆಲಸ ಮಾಡುವುದಕ್ಕೆ ಹೊರಟಿವೆ. ಅಲ್ಲದೆ ಈ ವಿಚಾರದಲ್ಲಿ ನಾವೂ ನೀವೂ ಎಲ್ಲರೂ ಕುಳಿತು ಇದರ ಯಶಸ್ವಿಗೆ ಸಕಲ ಪ್ರಯತ್ನಗಳನ್ನೂ ಮಾಡೋಣ.

ಇನ್ನು ಟ್ಯಾಕ್ಸ್ ಆರಿಯರ್ಸಿನ ಬಗ್ಗೆ ಹೇಳಬೇಕಾದ್ದು ಒಂದು ಮಾತಿದೆ. 45 ಕೋಟಿ ರೂಪಾಯಿಗಳ ಬಾಕಿ ವಸೂಲಾಗದೆ ಬಾಕಿನಿಂತಿದೆ.

ಸಪ್ಲಿಮೆಂಟರಿ ಡಿಮ್ಯಾಂಡ್ಸ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಎಪ್ಪತ್ತು ನಾಲ್ಕು ಕೋಟಿ ರೂಪಾಯಿಗಳ ಸಪ್ಲಿಮೆಂಟರಿ ಡಿಮ್ಯಾಂಡು ನಮ್ಮ ಮುಂದಿದೆ. ಮಾನ್ಯ ಸದಸ್ಯರು ಹೇಳಿದ ಪ್ರಕಾರ ಇದನ್ನು ಈ ಸರ್ಕಾರ ಮಾಡಿದ್ದು ಅಲ್ಲ, ಈಸರ್ಕಾರ ಬರುವುದಕ್ಕಿಂತ ಮುಂಚೆ ಇದ್ದಂಥ ಪರಿಸ್ಥಿತಿಯಲ್ಲಿ ಮಾಡಿದ್ದು ನನ್ನ ಗಮನಕ್ಕೆ ಬಂದಾಗ ಈ ಡಿಮ್ಯಾಂಡನ್ನು ಬಡ್ಜೆಟ್ಟಿನಲ್ಲಿ ಏತಕ್ಕೆ ಸೇರಿಸಲು ಸಾಧ್ಯವಾಗಲಿಲ್ಲ ಎಂದು ಪ್ರಶ್ನೆ ಕೇಳಿದೆ. ಈ ಪ್ರಶ್ನೆಯನ್ನು ಎಲ್ಲರೂ ಕೇಳಬೇಕಾದ್ದೇ. ನನಗೆ ಗೊತ್ತಾದ ಕೆಲವು ವಿಷಯಗಳನ್ನು ನಿಮ್ಮ ಮುಂದೆ ಇಡುತ್ತಿದ್ದೇನೆ. ಈ ಎಪ್ಪತ್ತನಾಲ್ಕು ಕೋಟಿ ರೂಪಾಯಿ ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ಇಪ್ಪತ್ತೊಂದು ಕೋಟಿ ರೂಪಾಯಿಗಳು ಮಾತ್ರ ಹೊಸದಾಗಿ ಖರ್ಚಾಗಿದ್ದು ಬೇರೆ ಬಿಟಂಗಳು ಆಗಿವೆ. ಶ್ರೀಮಾನ್ ದೇವೇಗೌಡರವರಿಗೆ ಇದರ ಬಗ್ಗೆ ಸಾಕಷ್ಟು ಅನುಭವವಿದೆ. ಒಂದೇ ಉದಾಹರಣೆ ಕೊಡಬೇಕಾದರೆ, 31-73 ಕೋಟಿ ರೂಪಾಯಿ ಪಬ್ಲಿಕ್ ಡೆಟ್, ಇದು ಅಡ್ವೆನ್ಸ್‌ಮೆಂಟ್ ಖಾತೆ. ಹೋದ ಬಜೆಟ್‌ನಲ್ಲಿ ಒಂದು ನೂರು ಕೋಟಿ ರೂಪಾಯಿಗಳ ಓವರ್ ಡ್ರಾಫ್ಟ್‌ನ್ನು ಪಾಪಾನ್ ಕೊಡುವುದಕ್ಕೆ ಲೆಕ್ಕ ಮಾಡಿ ಬಜೆಟ್ಟಿನಲ್ಲಿ

ಹಾಕಿದರು. ಕೊಡುವಾಗ 125ಕೋಟಿ ರೂಪಾಯಿ ಕೊಟ್ಟರು, ಹೊಸದಾಗಿ ಮೈಸೂರು ರಾಜ್ಯ ದಿಂದ ದುಡ್ಡು ಹೋಯಿತು ಎಂದು ಯಾರೂ ತಿಳಿದುಕೊಳ್ಳಬಾರದು. ಬಡ್ಜೆಟ್ ತಯಾರುಮಾಡುವ ಕಾಲಕ್ಕೆ 100ಕೋಟಿ ರೂಪಾಯಿ ಮಾತ್ರ ಪ್ರೊವೈಡ್ ಮಾಡಿರುತ್ತಾರೆ. 125ಕೋಟಿ ರೂಪಾಯಿ ಗಳನ್ನು ಓವರ್ ಡ್ರಾಫ್ಟ್‌ಗೋನ್ಸ್‌ರ ಕೊಟ್ಟಿರುವುದರಿಂದ 25ಕೋಟಿ ರೂಪಾಯಿ ಹೆಚ್ಚಿಗೆ ಏನು ಕೊಟ್ಟಿದೆ ಅದನ್ನು ಈ ಸಭೆಯ ಗಮನಕ್ಕೆ ಕಾನೂನು ಪ್ರಕಾರ ತರಬೇಕಾಗಿದೆ. It is not a net out go. ಎಪ್ಪತ್ತನಾಲ್ಕು ಕೋಟಿ ರೂಪಾಯಿನಲ್ಲಿ ಇಪ್ಪತ್ತೊಂದು ಕೋಟಿ ರೂಪಾಯಿ ಮಾತ್ರ ಕ್ಯಾಷ್ ಔಟ್ ಗೋ. ಈ ಕ್ಯಾಪಿಟಲ್ ನಲ್ಲಿ ಹತ್ತು ಕೋಟಿ ರೂಪಾಯಿ ಕಾವೇರಿ ಪ್ರಾಜೆಕ್ಟಿಗೆ ಸಂಬಂದಪಟ್ಟದ್ದು. ಆದ್ದರಿಂದ ಎಪ್ಪತ್ತನಾಲ್ಕು ಕೋಟಿ ರೂಪಾಯಿ ನಪ್ಲಿಮೆಂಟರಿ ಡಿಮ್ಯಾಂಡ್ಸ್ ಈ ಸಭೆಯ ಮುಂದೆ ತಂದಿರುವುದಕ್ಕೆ ಯಾರೂ ಆಶ್ಚರ್ಯ ಪಡಬೇಕಾಗಿಲ್ಲ.

ನನ್ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀಮಾನ್ ಎಚ್. ಡಿ. ದೇವೇಗೌಡರು ನಪ್ಲಿಮೆಂಟರಿ ಡಿಮ್ಯಾಂಡ್ಸ್ ಬಗ್ಗೆ ಭಾಷಣ ಮಾಡುವಾಗ ಕೆಲವು ವಿಷಯಗಳನ್ನು ಹೇಳಿದ್ದಾರೆ. ಅದಕ್ಕೆ ಉತ್ತರ ಕೊಡಬೇಕಾಗಿದೆ. ಒಂದನೆಯದು, ರ್ಯಾಂಡ್ ರೆವಿನ್ಯೂ ಕಲೆಕ್ಟ್ ಮಾಡುವಾಗ ಕೋ-ಎಸ್ಟೇಪ ಸ್ಟೆಪ್ಸ್ ತೆಗೆದುಕೊಳ್ಳುತ್ತಾರೆ, ಒಮ್ಮೆಲೇ ಕಲೆಕ್ಟ್ ಮಾಡಬೇಡಿ ಎಂಬುದು. ಇದರ ಬಗ್ಗೆ ಸರ್ಕಾರದವರು ಒಂದು ಆರ್ಡರ್ ಮಾಡಿದ್ದಾರೆ. ಎಂದು ಹೇಳಿದ್ದಾರೆ. ಸರ್ಕಾರ ಆರ್ಡರ್ ಮಾಡಿದ್ದು ಇಷ್ಟೇ. It should be collected in suitable instalments ಎಂದು. "Suitable Instalments" ಎಂಬ ಶಬ್ದ ಉಪಯೋಗಿಸಿದ್ದಾರೆ. ತತ್‌ಕ್ಷಣ ಒಂದೇ ದಿನದಲ್ಲ ಕರೆಕ್ಟ್ ಮಾಡಬೇಕು ಎಂದು ಆರ್ಡರ್ ಮಾಡಿಲ್ಲ. ನ್ಯಾಯವಾದ ರೀತಿಯಲ್ಲಿ ವಸೂಲಿಯಾಗುತ್ತಿದೆ. ಅಮೇರೆ ಫ್ಯಾಮಿನ್ ರಿಲೀಫ್ ಎರ್ಲೆಲ್ಲಿ ಅವಶ್ಯಕವಿದೆಯೋ ಅಂಥಾ ಕಡೆಗಳಲ್ಲಿ ಅದನ್ನು ಬರುವ ತಿಂಗಳವರೆಗೂ ಕೊಡಬೇಕಾಗುವುದು ಎಂದು ಅಭಿಪ್ರಾಯ ಇದೆ. ಅದರಲ್ಲಿ ಭಿನ್ನಾಭಿಪ್ರಾಯವಿಲ್ಲ. ರ್ಯಾಂಡ್ ಗ್ರಾಂಟ್ಸ್ ತಾಲ್ಲೂಕು ಕಮಿಟಿಗಳನ್ನು ಕಾಂಗ್ರೆಸ್ (ಆರ್) ನವರು ಗವರ್ನರಿಗೆ ಹೇಳಿ ಅಬಾಲಿಷ್ ಮಾಡಿಸಿದ್ದಾರೆ ಎಂದು ಹೇಳಿದ್ದಾರೆ. ಇದು ಸರಿಯಾದ ಮಾತಲ್ಲ. ಮತ್ತು ಕಾಂಗ್ರೆಸ್ (ಆರ್) ಮಾಡಿದ್ದೂ ಅಲ್ಲ. ಆದ್ದರಿಂದ ಈ ಜವಾಬ್ದಾರಿಯನ್ನು ನಮ್ಮಮೇಲೆ ಹಾಕಬೇಕಾದದ್ದು ಇಲ್ಲ ಎಂದು ಹೇಳಬಹುದು.

Sri H. D. DEVEGOWDA.—What prompted the Government to abolish these Committees. ?

Sri M. Y. GHORPADE.—I know as much as the hon. Member knows. I do not have any special knowledge about it. ಅಂತೂ ಇದು ಕಾಂಗ್ರೆಸ್ (ಆರ್) ಗವರ್ನರ್‌ಗೆ ಹೇಳಿ ಮಾಡಿದ್ದು ಅಲ್ಲ.

ಇನ್ನು ಶ್ರೀಮಾನ್ ದೇವೇಗೌಡರು ಅಸೆಟ್ಸ್ ಅಂಡ್ ಲಯಬಿಲಟೀಸ್ ಬಗ್ಗೆ ಹೇಳುತ್ತಾ ಮಂತ್ರಿಗಳ ಅಸೆಟ್ಸ್ ಮತ್ತು ಲಯಬಲಟೀಸ್ ಹೇಳಬೇಕು ಎನ್ನುವ ಮಾತನ್ನು ಹೇಳಿದರು. ನನ್ನ ಪಾಡಿಗೆ ನಾನು ಹೇಳಬೇಕಾದರೆ, ಕೆಲವು ದಿವಸಗಳ ಹಿಂದೆ ನನ್ನ ಅಸೆಟ್ಸ್ ಮತ್ತು ಲಯಬಲಟೀಸ್ ಎಷ್ಟು ಎನ್ನುವ ಸ್ಟೇಟ್‌ಮೆಂಟನ್ನು ನಾನು ಆಗಲೇ ಮುಖ್ಯಮಂತ್ರಿಗಳಿಗೆ ಕೊಟ್ಟಿದ್ದೇನೆ. ಶ್ರೀಮಾನ್ ದೇವೇಗೌಡರಿಗೆ ಬೇಕಾದರೆ ಸಂತೋಷದಿಂದ ಒಂದು ಕಾಪಿಯನ್ನು ಕೊಡುತ್ತೇನೆ, ಅದರಲ್ಲಿ ಏನೂ ಮುಚ್ಚು ಮರೆಯಿಲ್ಲ.

Sri H. D. DEVE GOWDA.—You are not speaking as Mr Ghorpade, You are speaking as Finance Minister of Government. You must present your assets and liabilities to every Member of this House. Let it be made known to the public.

Sri M. Y. GHORPADE.—I can speak at this stage on my behalf. My asset and liabilities statement has been given to the Chief Minister and I shall be happy to give a copy of it to the Hon. Member.

ಶ್ರೀ ಕೋಣಂದೂರು ಲಿಂಗಪ್ಪ—ನಿಮ್ಮ ಸಂಬಂಧಿಕರು ಯಾರುಯಾರುಇದ್ದಾರೆ ಅವರೆಲ್ಲರದೂ ಬೇಕು ; ಎಲ್ಲರ ಹೆಸರಿಗೆ ಖಾತೆಯಾಗಿರುವುದು ಗೊತ್ತಿದೆ. ಎಲ್ಲರದೂ ಒಟ್ಟಿಗೆ ಬೇಕು.

ಶ್ರೀ ಎಂ. ವೈ. ಘೋರ್ಪಡೆ.—ಇನ್ನು ಬ್ಯಾಲೆಟ್ ಪೇಪರ್ ಬಗ್ಗೆ ಶ್ರೀಮಾನ್ ದೇವೇಗೌಡರು ಮಾತನಾಡಿದರು. 2—3 ಬಣ್ಣದ ಬ್ಯಾಲೆಟ್ ಪೇಪರ್‌ಗಳಿರುವುದರಿಂದ ಚುನಾವಣೆಯಲ್ಲಿ ಅನ್ಯಾಯವಾಗಿದೆ ಎಂದು ತಿಳಿದುಕೊಳ್ಳಬಹುದು ಎಂದು ಭಾಷಣ ಮಾಡಿದರು. ಬ್ಯಾಲೆಟ್ ಪೇಪರ್ ಬಣ್ಣಕ್ಕೂ ಚುನಾವಣೆಗೂ ಯಾವ ಸಂಬಂಧವಿಲ್ಲ ಎಂದು ನನಗನ್ನಿಸುತ್ತದೆ. ಏತಕ್ಕೆ ಆ ರೀತಿ ಮಾತನಾಡಿದರೋ ಗೊತ್ತಾಗಲಿಲ್ಲ. ಇದಕ್ಕೆ ಮುಂಚೆ ನಿಮ್ಮ ಪಕ್ಷಕ್ಕೆ ಸೇರಿರತಕ್ಕಂಥ ಹಿರಿಯ ನಾಯಕರು ಎರಡನೆಯ ಸಲ ದೇಶದಲ್ಲಿ ಚಮತ್ಕಾರವಾಗಿದೆ ಎಂದು ಹೇಳಿದರು. ಚಮತ್ಕಾರ ಏತಕ್ಕೆ, ಏನು ಅರ್ಥ? ಈ ವಿಚಾರದ ಬಗ್ಗೆ ನಾನು ಪಕ್ಷದ ವತಿಯಿಂದ ಹೇಳುತ್ತಿದ್ದೇನೆ, ಯಾವ ಘಟನೆಯಿಂದ ಯಾವ ಕಾರಣದಿಂದ ಚಮತ್ಕಾರವಾಗಿದೆ ಎನ್ನುವುದು ಮಾನ್ಯ ಸದಸ್ಯರಿಗೆ ಗೊತ್ತಿಲ್ಲದೆ ಹೋದರೆ ಅದನ್ನು ಚಮತ್ಕಾರ ಎಂದು ಹೇಗೆ ಕರೆಯುತ್ತೀರಿ.?

ಶ್ರೀ ಎಚ್. ಡಿ. ದೇವೇಗೌಡ.—ಚಮತ್ಕಾರ, ಹಾವಾಡಿಗರ ಆಟ ಎಂದು ನಾನು ಹೇಳಲಿಲ್ಲ.

This matter was made known to the Returing Officer. Different coloured ballot papers were there. Why did it happen? That is all I want to know.

ಶ್ರೀ ಎಂ. ವೈ. ಘೋರ್ಪಡೆ.—ಚಮತ್ಕಾರದ ಕಾರಣ ಗೊತ್ತಿಲ್ಲವೆಂದು ಒಪ್ಪಿದ್ದೀರಿ. ಕಾರಣ ಹುಡುಕುವುದು ಮನುಷ್ಯನ ಸ್ವಭಾವ ಇರುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಗೆದ್ದು ಬಂದು ಹೇಳುತ್ತಿದ್ದೇನೆ, ಸೋತುಬಂದಿಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ಒಂದು ಉದಾಹರಣೆ ಕೊಡಬೇಕಾದರೆ, ಹಿಂದೆ ಮೀಟೆಯೋರ್, ಆಕಾಶದಿಂದ ಬಿದ್ದರೆ ಯಾರಿಗೋ ದೊಡ್ಡವರಿಗೆ ಅಪಾಯ ಆಗುತ್ತದೆ ಎನ್ನುವ ವಿಚಾರವಿತ್ತು. ಆದರೆ ನಕ್ಷತ್ರ ಆಥವಾ ಮೀಟಿಯಾರ್ ಬೀಳುವುದಕ್ಕೂ ದೊಡ್ಡವರಿಗೆ ಅಪಾಯ ಆಗುವುದಕ್ಕೂ ಏನು ಸಂಬಂಧ, ಏನು ಕಾರಣ ಎಂದು ಯಾರಿಗೂ ಗೊತ್ತಿರಲಿಲ್ಲ. ಮಿಟ್‌ಯೋರ್ ಯಾತಕ್ಕೆ ಬಿತ್ತು ಎಂದು ಗೊತ್ತಾದ ಮೇಲೆ ಮೀಟಿಯಾರ್ ಬೀಳುವುದಕ್ಕೂ ದೊಡ್ಡವರಿಗೆ ಅಪಾಯವಾಗುವುದಕ್ಕೂ ಸಂಬಂಧವಿಲ್ಲವೆಂದು ಗೊತ್ತಾಯಿತು.

ಶ್ರೀ ಕೋಣಂದೂರು ಲಿಂಗಪ್ಪ.—ಸ್ವತಂತ್ರ ನಕ್ಷತ್ರ ಸುಳ್ಳಿನ ಪ್ರತೀಕ, ಹರಿಶ್ಚಂದ್ರನ ನಕ್ಷತ್ರ ಸತ್ಯದ ಪ್ರತೀಕ.

ಶ್ರೀ ಎಂ. ವೈ. ಘೋರ್ಪಡೆ.—ಸ್ವತಂತ್ರ ಪಕ್ಷ ಚುನಾವಣೆಯಲ್ಲಿ ಬದ್ಧು ಹೋಯಿತು ಎಂದು ಒಪ್ಪುತ್ತೇನೆ. ಮಾನ್ಯ ಲಿಂಗಣ್ಣನವರಿಗೆ ಅದರ ಮೈತ್ರಿಕೂಟ, ವಿಚಿತ್ರ ಮೈತ್ರಿಕೂಟ ಎಂದು ಹೇಳುತ್ತೇನೆ. ಆ ವಿಚಿತ್ರ ಕೂಟಕ್ಕೂ ಎಲೆಕ್ಷನ್ ರಿಸಲ್ಟ್‌ಗೂ ಸಂಬಂಧಿಯಿರಬಹುದು. ಬ್ಯಾಲೆಟ್ ಪೇಪರ್ ಬಣ್ಣಕ್ಕೂ ಮತ್ತು ಎಲೆಕ್ಷನ್ ರಿಸಲ್ಟ್‌ಗೂ ಸಂಬಂಧ ಇದೆಯೆಂದು ಹೇಳುತ್ತಾ ಹೋದರೆ ಅದು ಸರಿಯಲ್ಲ. ಬಹುಶಃ ಮಾನ್ಯ ಸದಸ್ಯರಿಗೆ ಚುನಾವಣೆ ಹೊಸದೇನೂ ಅಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ನಮಗೆ ಹೊಸದೇನೂ ಅಲ್ಲ. ಬ್ಯಾಲೆಟ್ ಪೇಪರ್ ಬದಲಾವಣೆ ಆಗುವ ಅವಶ್ಯಕತೆ ಏನು ಇದೆ? ಪ್ರಿಂಟ್ ಮಾಡುವ ಪೇಪರ್ ಷಾರ್ಟೇಜ್ ಇತ್ತೇ ಏನು!

ಶ್ರೀ ಎಂ. ವೈ. ಘೋರ್ಪಡೆ.—ಇಂದಿರಾಗಾಂಧಿಯವರ ರಕ್ಷಣೆ ಇದೆ; ಎಲ್ಲಿಯವರೆಗೆ ಅವರ ರಕ್ಷಣೆ ಇರುತ್ತದೆ ಎನ್ನುವ ಮಾತು ಹೇಳಿದರು. ಇಂದಿರಾಗಾಂಧಿಯವರ ಕಡೆ ಮ್ಯಾಜಿಕ್ ಇಲ್ಲ. ಇಂದಿರಾಗಾಂಧಿಯವರನ್ನು ಕಾಪಾಡುವ ಪಾಲ್ಸ್, ಸಮಾಜವಾದವ ಪಾಲ್ಸ್. ಅದು ನಮ್ಮನ್ನು ಎಲ್ಲಾ ಕಾಪಾಡುತ್ತದೆ. ಮತ್ತೆ ನಮ್ಮದು ಕೇಂದ್ರದ ಸೆಟ್‌ಲೈಟ್ ಗವರ್ನಮೆಂಟು ಎಂದು ಹೇಳಿದರು.

ಶ್ರೀ ಕೋಣಂದೂರು ಲಿಂಗಪ್ಪ.—ಅನ್ ಎ ಪಾಯಿಂಟ್ ಆಫ್ ಇನ್‌ಫರ್ಮೇಷನ್ ಸರ್, ನಮ್ಮರಾಷ್ಟ್ರದ ಪ್ರಧಾನ ಮಂತ್ರಿಗಳಿಗೆ ಒಂದು ದಿನಕ್ಕೆ ಸರ್ಕಾರದ ಬಜಾನೆಯಿಂದ ಇಪ್ಪತ್ತೈದು ಸಾವಿರ ರೂಪಾಯಿಗಳು ಖರ್ಚಾಗುತ್ತದೆ. ಅದೇ ರೀತಿ ಸಮಾಜವಾದ ಇದೆ ಎನ್ನುವುದಾದರೆ ಅದನ್ನು ಒಪ್ಪಿಕೊಳುತ್ತೇನೆ.

5-30 P.M.

ಶ್ರೀ ಎಂ. ವೈ. ಘೋರ್ಪಡೆ.—ಬಂಗ್ಲಾದೇಶದ ಸರ್ಕಾರ ಸಮಾಜವಾದ ಮತ್ತು ಜಾತ್ಯಾತೀತ ಪ್ರಭುತ್ವವನ್ನು ಒಪ್ಪುತ್ತದೆ. ಆದಕಾರಣ ಅವರಿಗೂ ನಮ್ಮ ದೇಶಕ್ಕೂ ಹೆಚ್ಚಿನ ಸ್ನೇಹವಾಗಿದೆ. ಅದಕ್ಕಾಗಿ ಬಂಗ್ಲಾ ದೇಶ ಸರ್ಕಾರವನ್ನು ಸ್ಯಾಟಲೈಟ್ ಸರ್ಕಾರ ಎಂದು ಹೇಳುವುದಕ್ಕಾಗುತ್ತದೆಯೇ? ಅದೇರೀತಿ ಮೈಸೂರಿನಲ್ಲಿರತಕ್ಕ ರಾಜ್ಯಕ್ಕೂ ಕೇಂದ್ರದಲ್ಲಿರುವ ರಾಜ್ಯಕ್ಕೂ ಅರೀತಿ ಐಡಿಯಾಲಜಿಕಲ್ ಸ್ನೇಹ ಇದ್ದರೆ ಸ್ಯಾಟಲೈಟ್ ಎಂದು ಹೇಳುವುದು ಸರಿಯಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಪರೋಕ್ಷವಾಗಿ ಆ ಅರ್ಥ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್.—ನಿಮ್ಮದು ತೋಳ ಕುರಿಮರಿ ಸಮಾಜವಾದ.

ಶ್ರೀ ಎಂ. ವೈ. ಘೋರ್ಪಡೆ.—ವಾಟಾಳ್ ನಾಗರಾಜ್‌ರವರು ಹೇಳಿದರು. ಹಲವಾರು ವರ್ಷಗಳಿಂದ ಅವರ ಭಾಷಣವನ್ನು ಕೇಳಿದ್ದೇನೆ. ಪ್ರಪಂಚದಲ್ಲಿ ಸಾಕಷ್ಟು ಬದಲಾವಣೆಯಾಗಿದೆ. ಸಮಾಜಕೂಡ ಬದಲಾವಣೆಯಾಗಿದೆ. ಆದರೆ ವಾಟಾಳ್ ನಾಗರಾಜ್ ರವರು ಭಾಷಣ ಮಾಡುವ ಶೈಲಿ ಬದಲು ಆಗಲಲ್ಲ. ಅದೂ ಕೂಡ ಬದಲಾವಣೆಯಾಗಿದ್ದರೆ ಒಳ್ಳೆಯದಾಗುತ್ತಿತ್ತು.

ಶ್ರೀ ವಾಟಾಳ್ ನಾಗರಾಜ್.—ವಾರ್ಟಿ ಬಿಟ್ಟು ಪಾರ್ಟಿಗೆ ಬಂದು ಬದಲಾವಣೆ ಆಗಿದ್ದೀರಿ. ನಾವು ಬದಲಾವಣೆಯಾಗಬೇಕಾಗಿಲ್ಲ. ತಾವು ಯಾವ ವಾರ್ಟಿಯಲ್ಲಿ ಇದ್ದಿರಿ, ಯಾವ ಪಾರ್ಟಿಗೆ ಬಂದಿದ್ದೀರಿ ಎಂಬುದನ್ನು ನೋಡಿ.

ಶ್ರೀ ಎಂ. ವೈ. ಘೋರ್ಪಡೆ.—ನಾನು ಯಾವ ಸಿದ್ಧಾಂತದಲ್ಲಿ ಇದ್ದೆನೋ ಅದೇ ಸಿದ್ಧಾಂತದಲ್ಲಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ಸಮಾಜವಾದ ಅನ್ನುವುದು ಎಲ್ಲಾ ಬೋಗಸ್. ಬರೀ ಅಧಿಕಾರ ವಾದ.

ಶ್ರೀ ಎಂ. ವೈ. ಘೋರ್ಪಡೆ.—ಅವರು ನಾನು ರಾಜರ ಮನೆತನಕ್ಕೆ ಸೇರಿದವನು ಎಂದು ಹೇಳಿದರು. ನನ್ನ ಉತ್ತರ ಇಷ್ಟೆ. ಈಗ ಕಾನೂನು ಪ್ರಕಾರ ಯಾವ ರಾಜರೂ ಇಲ್ಲ. ರಾಜ ಮನೆತನಕ್ಕೆ ನಾನು ಒಂದು ಪಕ್ಷ ಸೇರಿರಬಹುದು, ಅಲ್ಲ ಹುಟ್ಟಿರಬಹುದು. ಆದರೆ ಅದು ನಮ್ಮ ಕೈಯಲ್ಲಿ ಇರತಕ್ಕ ವಿಷಯವಲ್ಲ. ಹುಟ್ಟಿದ ನಂತರ ನಾವು ಏನು ಮಾಡುತ್ತೇವೆ ಯಾವ ಮಾರ್ಗದಿಂದ ಹೋಗುತ್ತೇವೆ ಅಷ್ಟು ಮಾತ್ರ ನಮ್ಮ ಕೈಯಲ್ಲಿ ಇರತಕ್ಕದ್ದು.

ಶ್ರೀ ವಾಟಾಳ್ ನಾಗರಾಜ್.—ನಾನು ಹುಟ್ಟಿದ್ದನ್ನು ವಿರೋಧ ಮಾಡಲಿಲ್ಲ. ನಾನು ತಾವು ರಾಜಮನೆತನದವರು ಎಂದು ಹೇಳಿದೆ ಅಷ್ಟೆ.

ಶ್ರೀ ಎಂ. ವೈ. ಘೋರ್ಪಡೆ.—ಈಮೊತ್ತು ನನ್ನ ಕ್ಷೇತ್ರದ ಜನಗಳು ರಾಜಮನೆತನದಲ್ಲಿ ಹುಟ್ಟಿದ್ದಾರೆ ಎಂದು ನನ್ನನ್ನು ಆರಿಸಲಿಲ್ಲ. ಒಂದು ಸಲ ಅಲ್ಲ, 4 ಸಲ ಹೆಚ್ಚಿನ ಒಂದು ಬಹುಮತ ದಿಂದ ಆರಿಸಿ ಕಳುಹಿಸಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ನಾವು ನಿಮ್ಮ ಚುನಾವಣೆ ಬಗ್ಗೆ ಮಾತನಾಡಲಲ್ಲ. ನೀವು ಬಂದ್ದದ್ದು ರಾಜಮನೆತನದಿಂದ ಎಂದು ಹೇಳಿದೆ.

ಶ್ರೀ ಎಂ. ವೈ. ಘೋರ್ಪಡೆ.—ರಾಜಮನೆತನಕ್ಕೆ ಸೇರಿದ್ದಾರೆ ಎಂದು ನನ್ನನ್ನು ಆರಿಸಲಲ್ಲ.

ಶ್ರೀ ವಾಟಾಳ್ ನಾಗರಾಜ್.—ಅದೆಲ್ಲಾ ಹೇಳುವುದಕ್ಕಾಗುವುದಿಲ್ಲ.

Sri D. DEVARAJ URS.—It only means he has a good pedigree. Why are you worried about it.

ಶ್ರೀ ಎಂ. ವೈ. ಘೋರ್ಪಡೆ.—ನಾನು ಕರ್ನಾಟಕದಲ್ಲಿ ಕಾಂಗ್ರೆಸ್ ಕಾರ್ಯಕರ್ತನಾಗಿ, ಸ್ಪಷ್ಟವಾದ ಸಮಾಜವಾದ, ಪ್ರಜಾಪ್ರಭುತ್ವ ಮತ್ತು ಜಾತ್ಯಾತೀತ ಸಿದ್ಧಾಂತಕ್ಕೆ ಬೆಂಬಲ ಕೊಡುತ್ತಾ ಬಂದಿರುವುದರಿಂದ ಒಂದು ಸಲ ಅಲ್ಲ. 4 ಸಲ ನಮ್ಮ ಕ್ಷೇತ್ರದ ಜನ ನನ್ನನ್ನು ಆರಿಸಿ ಕಳುಹಿಸಿದ್ದಾರೆ ಎನ್ನುವುದನ್ನು ಮರೆಯಬಾರದು. ಅದೇ ರೀತಿ ಬಡ ಜನರು ವಿಶೇಷವಾಗಿ ನನಗೆ ವೋಟು ಕೊಟ್ಟಿದ್ದಾರೆ ಎನ್ನುವುದನ್ನು ಕೂಡ ನಾನು ಎಂದಿಗೂ ಮರೆಯಲಕ್ಕೆ ಸಾಧ್ಯವಿಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಗಾಜಿನ ಮನೆಯಲ್ಲಿ ಇದ್ದುಕೊಂಡು ಕಲ್ಲು ಎಸೆಯುವುದಕ್ಕೆ ಹೋಗಬೇಡಿ.

ಶ್ರೀ ಎಂ. ವೈ. ಘೋರ್ಪಡೆ.—ಈ ಕಡೆಯಲ್ಲಿರತಕ್ಕ ಜನ ಕಾಂಗ್ರೆಸ್ ಜನ ಅಲ್ಲ, 5—10 ಜನ ಕಾಂಗ್ರೆಸ್ ಜನ ಇರಬಹುದು ಎಂದು ಆ ಕಡೆ ಕಾಂಗ್ರೆಸ್‌ನಲ್ಲಿರತಕ್ಕ ಯಜಮಾನರು ಹೇಳಿದರು. ನಾನು ಅವರಿಗೆ ಹೇಳುವುದು ಇಷ್ಟೆ. ಕಾಂಗ್ರೆಸ್ ಜನ ಯಾರು? ಯಾರು ಕಾಂಗ್ರೆಸ್ ಸಿದ್ಧಾಂತವನ್ನು ಎತ್ತಿ ಹಿಡಿಯುತ್ತಾರೆ ಎನ್ನುವುದನ್ನು ತೀರ್ಮಾನ ಮಾಡುವ ಹಕ್ಕು ನಮಗಿಂತ ಜನಕ್ಕೆ ಸೇರಿದ್ದು. ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದ್ದೇ ಇದ್ದರೆ ಸ್ಪಷ್ಟವಾದ ತೀರ್ಮಾನವನ್ನು ಜನ ಕೊಟ್ಟಾಗ ನಾವು ಅದನ್ನು ಒಪ್ಪಬೇಕಾಗುತ್ತದೆ. ಇಲ್ಲದೇ ಹೋದರೆ ಪ್ರಜಾಪ್ರಭುತ್ವದಲ್ಲಿ ಜನಾಭಿಪ್ರಾಯದಲ್ಲಿ ನಮಗೆ ಸಾಕಷ್ಟು ಶ್ರದ್ಧೆಯಿಲ್ಲ ಎಂದು ತೋರಿಸಿಕೊಟ್ಟಂತಾಗುತ್ತದೆ ಎಂದು ಎಷ್ಟು ಮಿತಿಮೀರಿ ವಿರೋಧ ಪಕ್ಷದವರು ಮಾತನಾಡಿದರೋ ಅಷ್ಟೊಂದು ಸೌಮ್ಯದಿಂದ ಹೇಳಬೇಕಾಗುತ್ತದೆ. ಜಾಸ್ತಿ ಹೇಳುವುದಕ್ಕೆ ಹೋಗುವುದಿಲ್ಲ.

ಇನ್ನು ಇದಕ್ಕಿಂತ ಮುಂಚೆ ಶ್ರೀ ನಯನಕ್‌ರವರು ಮಾತನಾಡಿದರು. ಕನ್ನಡದ ಬಗ್ಗೆ ಒಂದೆರಡು ಮಾತು ಹೇಳಬೇಕಾಗಿದೆ. ಎಷ್ಟೋ ಜನ ಮಾನ್ಯ ಸದಸ್ಯರು ಹೇಳಿದರು ಕನ್ನಡಕ್ಕೆ ಸಾಕಷ್ಟು ಬೆಂಬಲ ಕೊಡಬೇಕು ಎಂದು. ಇದರ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ. ಕನ್ನಡ ಬೆಳಸಲಿಕ್ಕೆ ಏನೇನು ಸಾಧ್ಯವೋ ಅದನ್ನು ಸರ್ಕಾರ ಮಾಡಲು ಸಾಧ್ಯ. ಕನ್ನಡ ಬೆಳೆದರೆ ಪ್ರಜಾಪ್ರಭುತ್ವ ಬೆಳೆಯುತ್ತದೆ. ಕನ್ನಡ ಬೆಳೆದರೆ ಸರ್ಕಾರದಲ್ಲಿ ಸಾಮಿರಾರು ಜನರು ಭಾಗವಹಿಸುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ಕನ್ನಡ ಎಷ್ಟರ ಮಟ್ಟಿಗೆ ಬೆಳೆಯುತ್ತದೋ ಅಷ್ಟಮಟ್ಟಿಗೆ ಪೀಪಲ್ ಪಾರ್ಟಿಸಿಪೇಷನ್ ಬೆಳೆಸಿದಂತಾಗುತ್ತದೆ. ಪ್ರಜಾಪ್ರಭುತ್ವ ಬೆಳೆಸಿದಂತಾಗುತ್ತದೆ. ಪ್ರಜಾಪ್ರಭುತ್ವವನ್ನು ಎಷ್ಟು ಬೆಳೆಸುತ್ತೇವೋ ಅಷ್ಟೇ ಸಮಾಜವಾದ ಸಮಾಜವನ್ನು ಬೆಳೆಸಿ ಜಾತ್ಯಾತೀತ ಸಮತಾವಾದ ಸಮಾಜವನ್ನು ಕಟ್ಟಿದಂತಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಸಮಾಜವಾದಕ್ಕೂ ಜಾತ್ಯಾತೀತಕ್ಕೂ ಸಂಬಂಧವಿದೆ.

ಶ್ರೀ ವಾಟಾಳ್ ನಾಗರಾಜ್.—ಶ್ರೀ ನಾರಾಯಣಸ್ವಾಮಿಯವರು ಇದರ ಬಗ್ಗೆ ವರದಿ ಕೊಟ್ಟಿದ್ದಾರೆ. ಆ ವರದಿ ಒಪ್ಪಿಕೊಳ್ಳುತ್ತೀರಾ?

ಶ್ರೀ ಎಂ. ವೈ. ಘೋರ್ಪಡೆ.—ಅದರ ಜೊತೆಗೆ ಬರೀ ಭಾಷೆಗಳ ಬಗ್ಗೆ ನಮ್ಮಲ್ಲಿ ಇನ್‌ಟಾಲರೆನ್ಸ್ ಇರಕೂಡದು. ಮೈಸೂರು ರಾಜ್ಯದಲ್ಲಿ ಬೇರೆ ಬೇರೆ ಭಾಷೆ ಗೊತ್ತಿರತಕ್ಕ ಜನ ಸಾಕಷ್ಟು ಇದ್ದಾರೆ. ತಮಿಳು, ತೆಲುಗು, ಉರ್ದು, ಮತ್ತು ಮರಾಠಿ ಮಾತನಾಡತಕ್ಕ ಜನ ಇದ್ದಾರೆ. ಕನ್ನಡ ಭಾಷೆಯನ್ನು ಬೆಳೆಸುವಾಗ ಇತರ ಭಾಷೆಗಳಿಗೆ ಯಾವರೀತಿಯಲ್ಲೂ ಕೂಡ ಅಪಮಾನ ಆಗದಂತೆ ನೋಡಿಕೊಳ್ಳಬೇಕು. ಇಂಗ್ಲೀಷನ್ನು ಉಪಯೋಗಿಸಲೇ ಬಾರದು, ಕನ್ನಡ ಬಚಾವೋ ಇಂಗ್ಲಿಷ್ ಹಟಾವೋ ಎಂದು ಹೇಳಬೇಕಾಗಿಲ್ಲ. ಇಂಗ್ಲೀಷ್ ಇರಬೇಕು ಇಂಗ್ಲೀಷ್ ಇದ್ದರೆ ಕನ್ನಡಕ್ಕೆ ಅಪಾಯವಿಲ್ಲ. ಕನ್ನಡಕ್ಕೆ ಒಳ್ಳೆಯದು.

ಶ್ರೀ ಕೋಣಂದೂರು ಲಿಂಗಪ್ಪ.—ಅದನ್ನು ಐಚ್ಛಿಕವಾಗಿ ಇಟ್ಟುಕೊಳ್ಳಬೇಡ ಎಂದು ಹೇಳುವುದಿಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ಇನ್ನು ಶ್ರೀ ಕೋಣಂದೂರು ಲಿಂಗಪ್ಪನವರ ಭಾಷಣದಲ್ಲಿ ಶ್ರೀ ಗೋಪಾಲಗೌಡರ ಬಗ್ಗೆ ಪ್ರಸ್ತಾಪ ಮಾಡಿದರು. ನಾನೂ ಕೂಡ ಅವರ ಮಾತಿಗೆ ಪುಷ್ಟಿಕೊಟ್ಟು ಶ್ರೀ ಗೋಪಾಲಗೌಡರು ಈ ಸಭೆಯಲ್ಲಿ ಪ್ರಗತಿಪೂರ್ವಕವಾಗಿ, ಧೈರ್ಯದಿಂದ, ಜವಾಬ್ದಾರಿಯಿಂದ ತಮ್ಮ ಕರ್ತವ್ಯವನ್ನು ನಿರ್ವಹಿಸಿದರು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಶ್ರೀಮಾನ್ ನಾಗಣ್ಣನವರು—ಯಜಮಾನರು—ಭಾಷಣ ಮಾಡುವಾಗ ಒಂದೆರಡು ಮಾತುಗಳನ್ನು ಹೇಳಿದರು, ಅವರು ಹೇಳಿದ್ದು ನಾವು ಶ್ರೀ ವೀರೇಂದ್ರ ಪಾಟೀಲ್‌ರವರ ಮಂತ್ರಿ ಮಂಡಲವನ್ನು ಪುಲ್‌ಡೌನ್ ಮಾಡಿದ್ದೇವೆ ಎಂದು. ಅದಕ್ಕೆ ನಾನು ವಿನಯದಿಂದ ಹೇಳುತ್ತೇನೆ: ನಾವು ಪುಲ್ ಡೌನ್ ಮಾಡಲಿಲ್ಲ ಅವರಷ್ಟಕ್ಕೆ ಅವರೇ ಇದ್ದರು ಎಂದು. ಮಿನಿಸ್ಟ್ರಿ ಬಿದ್ದು ಹೋದಮೇಲೆ ನಾವು ಏಕಕ್ಕೆ ಆ ಅಧಿಕಾರಕ್ಕೆ ಹೋಗಲಿಲ್ಲ ಎಂಬುದಕ್ಕೆ ಸ್ಪಷ್ಟವಾಗಿ ಉತ್ತರ ಹೇಳಬೇಕಾಗಿದೆ.

ಶ್ರೀ ಕೆ. ಎಂ. ನಾಗಣ್ಣ.—ಶ್ರೀ ವೀರೇಂದ್ರ ಪಾಟೀಲ್ ಮಿನಿಸ್ಟ್ರಿಯನ್ನು ನಾವು ಪುಲ್ ಡೌನ್ ಮಾಡಲಿಲ್ಲ ಎಂದು ಅಫಿಡವಿಟ್ ಕೊಡಿಸಿದಿರಿ. ನಿಮ್ಮ ಹೃದಯವನ್ನು ಮುಟ್ಟಿ ನೋಡಿಕೊಳ್ಳಿ. ವಿರೋಧ ಪಕ್ಷದ ಸದಸ್ಯರು ನಮ್ಮ ಕಡೆ ಬನ್ನಿ ಎಂದು ಕರೆದುದನ್ನು ಜ್ಞಾಪಕಮಾಡಿಕೊಳ್ಳಿ. ತಾವು ಯಾವ ವಿಷಯವನ್ನಾದರೂ ಹೇಳಬೇಕಾದರೆ ವಾಸ್ತವಾಂಶಕ್ಕೆ ದೂರವಿರಬಾರದು.

ಶ್ರೀ ಎಂ. ವೈ. ಘೋರ್ಪಡೆ.—ನಾವು ಮಿನಿಸ್ಟ್ರಿ ಫಾರ್ಮೇಷನ್ ಮಾಡಬೇಕಾದರೆ ಚುನಾವಣೆ ಆದನಂತರ ಮಾಡಬೇಕು ಎಂದು ನಮ್ಮ ಪಾರ್ಟಿ ವಾದವಾಗಿತ್ತು. ಅದನ್ನು ಕನ್ನಡ ಜನತೆಯೂ ಕೂಡ ಸಂಪೂರ್ಣವಾಗಿ ಒಪ್ಪಿದ್ದಾರೆಂದು ತೋರಿಸಿ ಕೊಟ್ಟಿದ್ದಾರೆ.

ಶ್ರೀ ಪಾಟಾಳ್ ನಾಗರಾಜ್.—ಅಲ್ಲ, ಅಲ್ಲ, ಯಾರು ಮುಖ್ಯ ಮಂತ್ರಿಗಳಾಗಬೇಕೆಂಬ ವಾದ ಇತ್ತು. ಅದಕ್ಕೆ ಹೊಸ ಮಂತ್ರಿಮಂಡಲ ಆಗಲಿಲ್ಲ.

ಶ್ರೀ ಎಂ. ವೈ ಘೋರ್ಪಡೆ.—ಶ್ರೀ ಕಕ್ಕಯ್ಯನವರು ಬಹಳ ಒಳ್ಳೆಯ ಭಾಷಣ ಮಾಡಿದರು. ಅವರಿಗೆ ಭೂಸುಧಾರಣೆ ವಿಚಾರದಲ್ಲಿ ಬಹಳ ಆಸಕ್ತಿಯಿದೆ. ಭೂಸುಧಾರಣೆ ವಿಷಯದಲ್ಲಿ ಅವರ ಅನುಭವದ ರಾಶಿಯನ್ನು ಸರಕಾರ ಪಡೆಯುವುದು, ಆದರಲ್ಲಿ ಸಂದೇಹವಿಲ್ಲ. ಸಮಾಜವಾದದ ವಿಚಾರ ಹೇಳಿದರು. ಒಮ್ಮೆಲೇ ಅದನ್ನು ಜಾರಿಗೆ ತರುವುದಕ್ಕೆ ಸಾಧ್ಯವಿಲ್ಲ. ಅದೊಂದು ಸಿದ್ಧಾಂತ, ಅದನ್ನು ನಿಧಾನವಾಗಿ ಹಂತಹಂತವಾಗಿ ಜಾರಿಗೆ ತರಬೇಕು. ಅದಕ್ಕೆ ಸಮಾಜ ಪರಿವರ್ತನೆಯಾಗಬೇಕಾಗಿದ್ದು ಅಗತ್ಯ. ಜನತೆಯ ಮುಂದೆ ಅದನ್ನು ತೆರೆದಿಟ್ಟಲ್ಲಿ ಇನ್ನು 20ವರ್ಷಗಳಲ್ಲಿ ಅದು ಅಸ್ತಿತ್ವಕ್ಕೆ ಬರಲು ಅವಕಾಶವಾದೀತು. ಇದರ ಬಗ್ಗೆ ನಿರಂತರವಾಗಿ ಪ್ರಯತ್ನ ಮಾಡಿ ಧೈರ್ಯವಾಗಿ ಮುಂದುವರೆಯಬೇಕು. ಇದು ಎಲ್ಲರಿಗೂ ಸೇರಿದ ಕೆಲಸ.

ಲಂಚದ ವಿಷಯ ಹೇಳಿದರು. ಲಂಚಗುಳಿತನವನ್ನು ತಕ್ಷಣ ಖಂಡಿತವಾಗಿ ನಿಲ್ಲಿಸಬೇಕೆಂದು ಸೂಚಿಸಿದರು. ಒಟ್ಟಿನಲ್ಲಿ ಸಮಾಜವು ಪರಿವರ್ತನೆಯಾಗುವವರೆಗೆ ಇರುವ ದೋಷ ನಿವಾರಣೆ ಸಂಪೂರ್ಣವಾಗಿ ಆಗುವುದು ಕಷ್ಟ. ಜನರಲ್ಲಿ ಒಂದು ವಿಧವಾದ ಮೆಂಟ್ಯಾಲಿಟಿ ಇದೆ. ಅವರ ವಿರುದ್ಧವಾಗಿ ಎಷ್ಟು ವರ್ಷ ಯುದ್ಧ ಮಾಡಬೇಕೋ ಹೇಳುವುದಕ್ಕಾಗುವುದಿಲ್ಲ. ಕ್ರಮೇಣ ಜನರ ಮನಸ್ಸನ್ನು ಬದಲಾಯಿಸಿ ಅದನ್ನು ತಡೆಗಟ್ಟಬೇಕು. ಇದರ ಬಗ್ಗೆ ನಾವು ನೀವೂ ನಮ್ಮ ಮಕ್ಕಳೂ ಕೂಡ ಹೋರಾಟ ಮಾಡಬೇಕಾಗುತ್ತದೆ. ಆದುದರಿಂದ ಬೇಸಿಕ್ ಇಷ್ಯೂ ಏನಿದೆ ಅದು ಒಮ್ಮೆಲೇ ಆಗುವ ಪ್ರಶ್ನೆಯಲ್ಲ. ಜನರ ಮುಂದೆ ಸ್ಪಷ್ಟವಾಗಿ ಸರಿಯಾದ ವಿಚಾರಗಳನ್ನಿಡಬೇಕಾಗುವುದು. ಹಾಗೆ ಮಾಡಿದರೆ ನಮ್ಮ ದೇಶದಲ್ಲಿ ಹತ್ತಿಪ್ಪತ್ತು ವರ್ಷಗಳಲ್ಲಿ ಟ್ರಾನ್ಸ್‌ಫರ್ಮೇಷನ್ ಖಂಡಿತ ಆಗುವುದು. ಹಾಗೆ ಮಾಡಲು ಒಪ್ಪಿದ್ದೇವೆ. ಆದರೆ ಸ್ವಲ್ಪಮಟ್ಟಿಗೆ ನಿಧಾನವಾಗುವುದು. ಅದನ್ನು ಪ್ರಜಾಪ್ರಭುತ್ವ ಮಾರ್ಗದಿಂದಲೇ ಮಾಡಬೇಕು. ಇದಕ್ಕೆ ಕಾಂಗ್ರೆಸ್ ಪಕ್ಷ ಕಂಕಣಬದ್ಧವಾಗಿದೆ. ಸಮಾಜವಾದ ನನಗೆ ಹೊಸದೇನೂ ಅಲ್ಲ. ಅದರ ವಿಚಾರ ಇತ್ತೀಚೆಗೆ ನಾನೇನೂ ಕಲಿತಿಲ್ಲ, ಅದನ್ನು ಜಾರಿಗೆ ತರಲು ಎಲ್ಲರೂ ಪ್ರಯತ್ನಮಾಡಬೇಕು. ಅದು ಒಂದೇ ದಿವಸದಲ್ಲಾಗುವ ಕೆಲಸವಲ್ಲ. ಸತತವಾಗಿ ಧೈರ್ಯದಿಂದ ಪ್ರಯತ್ನ ಮಾಡಬೇಕು. ಈಗ ವಾತಾವರಣ ಬದಲಾಗಿದೆ, ಹತ್ತು ವರ್ಷದ ಹಿಂದಿದ್ದ ವಾತಾವರಣ ಇಂದಿಲ್ಲ, ಈ ದಿವಸ ಕ್ರಾಂತಿಕಾರಕವಾದ ಬದಲಾವಣೆ ಯಾಗಿದೆ. ಹಳ್ಳಿಗಾಡಿನಲ್ಲಿರುವ ಮನುಷ್ಯ ಇಂದು ಧೈರ್ಯದಿಂದ ಓಟು ಮಾಡುತ್ತಾನೆ. ಹಿಂದೆ ಆ ಧೈರ್ಯವಿರಲಿಲ್ಲ. ಇನ್ನು ಹೆಚ್ಚು ಹೇಳುವುದಿಲ್ಲ: ಭೂಸುಧಾರಣೆ ಬಗ್ಗೆ ಮುಖ್ಯ ಮಂತ್ರಿಗಳು ಕೆಲವು ವಿಷಯಗಳನ್ನು ಹೇಳುವರು.

ಶ್ರೀ ಎಸ್. ವೈ. ಪಾಟೀಲ್.—ಏಪ್ಪರ್ ಕೃಷ್ಣ ವಿಚಾರವಾಗಿ ಒಂದು ಮಾತನ್ನೂ ಹೇಳಲಿಲ್ಲ. ಬಿಜಾಪುರ ಜಿಲ್ಲೆಯ ವಿಷಯದಲ್ಲಿ ಒಂದು ಶಬ್ದವನ್ನು ಕೂಡ ಹೇಳಲಿಲ್ಲ, ಅಲ್ಲಿ ಅತ್ಯಂತ ಕಷ್ಟವಿದೆ.

ಶ್ರೀ ಎಂ. ವೈ ಘೋರ್ಪಡೆ.—ನಾನು ಕಾವೇರಿ ವಿಚಾರ ಹೇಳಿದ್ದು ಕೆಲವು ಸಮಾಚಾರ ತಿಳಿಸುವುದಕ್ಕೆ. 11 ಕೋಟಿ ರೂಪಾಯಿಗಳ ಖರ್ಚು ತೋರಿಸಲಾಗಿದೆ, ಅದಕ್ಕಾಗಿ ಹೇಳಿದೆ. ಆದರ ಅರ್ಥ ಬೇರೆ ಕತೆ ಖರ್ಚುಮಾಡಬಾರದೆಂದಲ್ಲ. ಏಪ್ಪರ್‌ಕೃಷ್ಣ ಕೆಲಸ ಆಗಬಾರದೆಂಬ ಅಭಿಪ್ರಾಯ ನನಗಿಲ್ಲ, 72—73ರಲ್ಲಿ ಅದರ ಕೆಲಸಕ್ಕೆ ಅಂದಾಜಿನ ಪ್ರಕಾರ 2.3 ಕೋಟಿ ರೂಪಾಯಿ ಒದಗಿಸಲಾಗಿದೆ, ಹೆಚ್ಚು ಹಣ ದೊರೆತರೆ ಇನ್ನೂ ಒದಗಿಸಬಹುದು. ಅದರೆ ಹಾ ಎಲ್ಲಿಂದ ಬರಬೇಕು? ಇಂದು ಒಂದು ಸಾವಿರ ಕೋಟಿ ರೂಪಾಯಿ ಕೊಟ್ಟರೂ ಎಲ್ಲಾ ಖರ್ಚುಮಾಡಿ ಇರುವ ಪ್ರಾಜೆಕ್ಟುಗಳನ್ನೆಲ್ಲಾ ಮುಗಿಸಬಹುದು. ಇಷ್ಟು ಹೇಳಿದಮೇಲೆ ನಪ್ಪಿಮೆಂಟರಿ ಬಜೆಟ್ ಏನಿದೆ ಅದನ್ನು ಒಪ್ಪುತ್ತಾರೆಂದು ನಂಬಿದ್ದೇನೆ.

†ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನಾನು ಸಭೆಯ ಹೆಚ್ಚು ಕಾಲ ತೆಗೆದುಕೊಂಡು ಮಾತನಾಡಬೇಕಾದ್ದಿಲ್ಲದಿದ್ದರೂ ಭೂಸುಧಾರಣೆ ಬಗ್ಗೆ ನಮ್ಮ ಪ್ರತಿಪಕ್ಷದ ಸದಸ್ಯರು ಹೆಚ್ಚು ಕುತೂಹಲದಿಂದ ಇರುವುದರಿಂದ, ಅದನ್ನು ಬೇಗನೆ ಜಾರಿಗೆ ತರಬೇಕೆಂದು ಹೇಳಿರುವುದರಿಂದ ಹಾಗೂ ಕೆಲವು ಮಾನ್ಯ ಸ್ನೇಹಿತರು ಅದಕ್ಕೆ ಕಾಲ ಮಿತಿ ಇಟ್ಟು ಹೇಳಬೇಕೆಂದು ತಿಳಿಸುತ್ತಿರುವುದರಿಂದ ಅವರ ಬಗ್ಗೆ ಒಂದು ಮಾತನ್ನು ನಾನು ಸ್ಪಷ್ಟವಾಗಿ ತಿಳಿಸ

(ಶ್ರೀ ಡಿ. ದೇವರಾಜ ಅರಸ್)

ಬೇಕೆಂದಿದ್ದೇನೆ. ಕಾಲಮಿತಿ ಇಟ್ಟು ಇಷ್ಟು ವರ್ಷ ಎಂದು ಹೇಳುವುದು ಅಷ್ಟು ಉಚಿತವೂ ಆಲ್ಲ. ಅದಕ್ಕೆ ಅಗತ್ಯವೂ ಇಲ್ಲ. ಭೂಸುಧಾರಣೆಯನ್ನು ಜಾರಿಗೆ ತರತಕ್ಕ ಒಂದು ಕಾನೂನು ನಮ್ಮ ಮುಂದೆ ಇದೆ. ಅದನ್ನು ಜಾರಿಗೆ ತರುವುದಕ್ಕೆ ಏಳಂಬವಾಗಿ, ಕೋರ್ಟಿಗೆ ಹೋಗುವ ಪರಿಸ್ಥಿತಿಗೆ ಬಂದಿದೆ. ಅದಕ್ಕಾಗಿ ನಮ್ಮ ಮಾನ್ಯ ವಿರೋಧಪಕ್ಷದ ಸದಸ್ಯರು, ಅದರಲ್ಲಿಯೂ ಸೋಷಿಯಲಿಸ್ಟ್ ಪಕ್ಷದ ಸದಸ್ಯರುಗಳಿಗೆ ನಾನು ತಿಳಿಸುವುದು ಇಷ್ಟು. ಪಾರ್ಲಮೆಂಟಿನಲ್ಲಿ ಈ ರೀತಿಯಾದ ಅಡಚಣೆಯನ್ನು ತಪ್ಪಿಸುವುದಕ್ಕೋಸ್ಕರವೇ ಕೆಲವು ತಿದ್ದುಪಾಟನ್ನು ಮಾಡಿರುವುದು ಅವರ ಗಮನಕ್ಕೆ ಬಂದಿದೆ. ಸಂವಿಧಾನಕ್ಕೆ ತಿದ್ದುಪಡಿಗಳಾದ ಮೇಲೆ ಏನು ಅಡಚಣೆಗಳನ್ನು ಅನುಭವಿಸುತ್ತಿದ್ದೆವು ಅವು ಹೋಗಿವೆ ಎಂದು ನನ್ನ ಭಾವನೆ. ಆ ಕಾರಣದಿಂದ ಭೂಸುಧಾರಣೆಯನ್ನು ಜಾರಿಗೆ ತರುವುದಕ್ಕೆ ಸಂವಿಧಾನದಲ್ಲಿ ಏನೇನು ಅಡಚಣೆಗಳಿದ್ದುವೋ ಅದನ್ನು ಈಗ ದೂರ ಮಾಡಲಾಗಿದೆ. ಇನ್ನೂ ಏನಾದರೂ ಅಡಚಣೆಗಳು ಉಳಿದಿದ್ದರೆ ಈಗ ನಡೆಯುತ್ತಿರುವ ಪಾರ್ಲಮೆಂಟಿನಲ್ಲಿ ದೂರ ವಾಗುತ್ತವೆ ಎನ್ನುವ ನಂಬಿಕೆ ನನಗಿದೆ. ಕೇಂದ್ರದಲ್ಲಿ ಮತ್ತು ರಾಜ್ಯಗಳಲ್ಲಿ ಇದು ನಮ್ಮ ಪಕ್ಷದ ನಿಲುವು.

ಎರಡನೆಯ ಮಾತು ಎಂದರೆ ಈಗ ಇರತಕ್ಕ ಭೂಸುಧಾರಣೆ ಕಾನೂನು. ದೇಶದಲ್ಲಿ ಈ ಹಿಂದೆ ನಮ್ಮ ಮೈಸೂರು ರಾಜ್ಯದ ಶಾಸನ ಸಭೆಗಳು ಮಾಡಿ ಇಟ್ಟಿರತಕ್ಕ ಕಾನೂನು ಕೆಲವು ರೀತಿಯಲ್ಲಿ ಬದಲಾವಣೆ ಹೊಂದಬೇಕಾಗಿ ಬಂದಿದೆ. ಮುಖ್ಯವಾಗಿ ಸೀಲಿಂಗ್ ಲಿಮಿಟ್ ಏನಿದೆ, ಎಂದರೆ ಪ್ರಮಾಪಧಿ ಭೂಮಿಯ ಪರಿಮಿತಿ ಎಷ್ಟಿರಬೇಕು ಎನ್ನುವುದು ಈಗಿರತಕ್ಕ ರೀತಿಯಲ್ಲಿಯೇ ಕಾನೂನು ಮುಂದುವರಿದರೆ ನಮಗೆ ಹೆಚ್ಚು ಭೂಮಿ ಸಿಕ್ಕುವುದಿಲ್ಲ. ಆ ಕಾರಣದಿಂದ ನಾವು ಈ ಪರಿಮಿತಿಯನ್ನು ಕಡಮೆ ಮಾಡಬೇಕು ಎಂದು ಮನಸ್ಸು ಮಾಡಿರುವುದರಿಂದ ಆ ರೀತಿ ಕಡಮೆ ಮಾಡತಕ್ಕ ಕಾರ್ಯ ಈ ಸಭೆಯಲ್ಲಿ ಆಗಬೇಕಾಗಿರುವುದರಿಂದ ಕೆಲವು ತಿದ್ದುಪಾಟುಗಳನ್ನು ಮಾಡಿ ಭೂ ಸುಧಾರಣೆಯನ್ನು ಈ ಸಭೆಯ ಮುಂದೆ ತಂದು, ಸಭೆಯ ಒಪ್ಪಿಗೆ ಪಡೆದು ಅದನ್ನು ಜಾರಿಗೆ ಕೊಡಬೇಕು. ಈ ಬಗ್ಗೆ ಬಹುಶಃ ನಮ್ಮ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರು ಎಲ್ಲರೂ ಪೂರ್ಣ ಒಪ್ಪಿಗೆ ಮತ್ತು ಸಹಾನುಭೂತಿಯಿಂದ ಇದ್ದಾರೆ ಎಂದು ನನ್ನ ನಂಬಿಕೆ. ಕಾರ್ಯದಲ್ಲಿ ಏನಾಗುತ್ತದೆ ಎಂದು ನೋಡೋಣ. ನನ್ನ ವಿಶ್ವಾಸ ಹಾಗೆ ಇದೆ.

ಶ್ರೀ ಎಚ್. ಡಿ. ದೇವೇಗೌಡ.—ಅದನ್ನು ಜಾಗ್ರತೆ ತನ್ನಿ.

ಶ್ರೀ ಡಿ. ದೇವರಾಜ ಅರಸ್.—ಭೂಮಿಯನ್ನು ಏನಾದರೂ ಮಾಡುತ್ತಾರಲ್ಲ ಎಂದು ತಡವರಿಸಿ ಅಲ್ಲ ಇಲ್ಲ ಹುಡುಕಾಡುವುದರೊಳಗೆ, ಕಾನೂನಿಗೆ ಬೇಕಾದ ತಿದ್ದುಪಾಟನ್ನು ತರುತ್ತೇವೆ. ಯೋಚನೆ ಮಾಡಬೇಕಾಗಿಲ್ಲ, ಸಂಶಯ ಪಡಬೇಕಾಗಿಲ್ಲ. ಇಂಥ ತಿದ್ದುಪಡಿಯನ್ನು ಇಲ್ಲ ತಂದಾಗ ಅಲ್ಲಯೇ ಆಗಲೀ, ಇಲ್ಲಯೇ ಆಗಲೀ ಅದಕ್ಕೆ ವಿರೋಧ ಬೇಡ ಎನ್ನುವುದು ನನ್ನ ಆಶಯ.

ಮತ್ತೆ ಈಗ ತಾತ್ಕಾಲಿಕವಾಗಿ ಕೆಲವು ಕಾರ್ಯಕ್ರಮಗಳನ್ನು ಮಾಡಬೇಕಾದ್ದು ನಮ್ಮ ಗಮನಕ್ಕೆ ಬಂದಿದೆ, ಅದು ಅಗತ್ಯವೆಂದು ಕಾಣುತ್ತದೆ. ಗೇಣಿದಾರರು ಬಹಳ ತೊಂದರೆ ಅನುಭವಿಸುತ್ತಿದ್ದಾರೆ. ಅದರ ಬಗ್ಗೆಯಾದರೂ ತಕ್ಷಣದಲ್ಲಿ ನಾವು ಕೆಲವು ತಿದ್ದುಪಾಟುಗಳನ್ನು ಮಾಡಿ ಅವರಿಗೆ ರಕ್ಷಣೆ ಕೊಡುವುದು ಸಾಧ್ಯವಿದ್ದರೆ ಅದನ್ನು ತೀವ್ರವಾಗಿ ಪರಿಶೀಲನೆ ಮಾಡಿಸಿ ಗೇಣಿದಾರರ ತೊಂದರೆ ನಿವಾರಣೆ ಮಾಡಿ ಅವರಿಗೆ ರಕ್ಷಣೆ ಕೊಡುವುದಕ್ಕೆ ಸರ್ಕಾರ ಮನಸ್ಸು ಮಾಡಿದೆ. ನಾನು ಕಾನೂನು ಪಂಡಿತನಲ್ಲದೆ ಹೋದರೂ, ರಿಟ್ರಾಸ್ಪೆಕ್ಟಿವ್ ಎಫೆಕ್ಟ್‌ನಿಂದ ಅದನ್ನು ಜಾರಿಗೆ ಕೊಡುವುದಕ್ಕೆ ಸಾಧ್ಯವಾಗುವುದಾದರೆ ನನಗಿಂತ ಯಾರೂ ಅದರ ಬಗ್ಗೆ ಆಸಕ್ತಿಯಿಂದ ಇರುವುದಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. (ಕರತಾಡನ)

ಶ್ರೀ ಕಾಗೋಡು ತಿಮ್ಮಪ್ಪ.—1965ರಲ್ಲಿ ಕಾನೂನಾಗಿದೆ. ಗೇಣಿದಾರರನ್ನು ಹೊರದೂ ಡುವುದರ ವಿರುದ್ಧ ರಕ್ಷಣೆ ಕೊಡುವುದನ್ನು ಆಗಿನಿಂದಲೂ ಕೊಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಕಾನೂನು ರೀತ್ಯ ರಿಟ್ರಾಸ್ಪೆಕ್ಟಿವ್ ಎಫೆಕ್ಟ್ ಯಾವಾಗಿನಿಂದ ಕೊಡುವುದಕ್ಕೆ ಸಾಧ್ಯವೋ ಅದರಂತೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಎ. ಕಕ್ಕಿಲಾಯ.—ಅರಿಯರ್ಸ್ ಆಫ್ ರೆಂಟ್ ಬಗ್ಗೆ ಕೂಡ ಅದೇ ರೀತಿಯಾಗಿ ಮಾಡುತ್ತೀರಾ?

Sri D. DEVARAJ URS.—These are matters which require closer examination. I don't like to say off hand about it.

ಮಾನ್ಯ ಹಿರಿಯ ಸದಸ್ಯರಾದ ಶ್ರೀ ನಾಗಣ್ಣ ಅವರು ಬಹಳ ಉದ್ವೇಗದಿಂದ ಮಾತನಾಡಿ ಒಂದು ವರ್ಷ ರಾಷ್ಟ್ರಾಧ್ಯಕ್ಷರ ಆಡಳಿತ ಬರುವುದಕ್ಕೆ ನಾವೇ ಕಾರಣರಾಗಿ ಪಾಪ ಮಾಡಿದ್ದೇವೆ ಎನ್ನುವ ರೀತಿಯಲ್ಲಿ ಹೇಳಿದರು. ಬಹುಶಃ ಅದಕ್ಕೆ ಹೆಚ್ಚು ಕಾರಣನಾಗಿದ್ದರೆ ನಾನೇ. ವೈಯಕ್ತಿಕವಾಗಿ ನಾನು ಈ ಸಭೆಯಲ್ಲಿ ಧೈರ್ಯವಾಗಿ ಹೇಳಬಲ್ಲೆ, ನನ್ನ ಆತ್ಮಕ್ಕೆ ಇಲ್ಲಿಯವರೆಗೆ ನಾನು ಪಾಪ ಮಾಡಿದ್ದೇನೆಂದು ಬಂದಿಲ್ಲ. ನೀವು ಹಾಗೆ ಹೇಳಿಕೊಂಡರೆ ನನಗೆ ಕೊಂದರೆ ಇಲ್ಲ. ಏಕೆಂದರೆ ನಾವು ಹಿತ್ತಲ ಬಾಗಿಲಿನಿಂದ ಬಂದು ಅಧಿಕಾರ ತೆಗೆದುಕೊಳ್ಳುವುದಕ್ಕೆ ನನಗೆ ಇಷ್ಟವಿರಲಿಲ್ಲ, ದೇಶದ ಮುಂದೆ ನಿಂತು, ದೇಶದ ಜನತೆಯ ಮುಂದೆ ನಿಂತು, ಜನತೆಯ ನಿರೀಕ್ಷೆಯ ಅಥವಾ ಅವರ ಅಭಿಪ್ರಾಯವನ್ನು ಕೋರಿ ಅಧಿಕಾರಕ್ಕೆ ಬರೋಣ ಎನ್ನುವ ಕಾರಣದಿಂದ, ಆಗ ಅಧಿಕಾರ ಸ್ವೀಕಾರ ಮಾಡುವುದು ಬೇಡ ಎಂದು ಹೇಳಿದವನು ನಾನು. ಅದನ್ನು ನಮ್ಮ ಪಕ್ಷ ಒಪ್ಪಿಕೊಂಡಿತು. ಆ ರೀತಿ ನಾನು ಹೇಳಿದಾಗ ಒಂದು ವರ್ಷ ಮುಂದುವರಿಯುತ್ತದೆ ಎಂದು ನನಗೂ ಗೊತ್ತಿರಲಿಲ್ಲ. ಹಾಗೆ ಆದುದರಿಂದ ಒಂದು ರೀತಿಯಲ್ಲಿ ಒಳ್ಳೆಯದೂ ಆಗಿದೆ, ಕೆಟ್ಟದ್ದೂ ಆಗಿದೆ. ಜನಗಳಿಗೆ ರಾಷ್ಟ್ರಾಧ್ಯಕ್ಷರ ಆಡಳಿತವನ್ನೂ, ಪ್ರಜಾತಂತ್ರ ರೀತಿಯ ಆಡಳಿತವನ್ನೂ ನೋಡಿ ಅದರಲ್ಲಿ ಒಳ್ಳೆಯದು ಯಾವುದು ಎನ್ನುವುದು ಗೊತ್ತಾಗಿದೆ. ಸಿಹಿಯ ರುಚಿ ಚೆನ್ನಾಗಿ ಗೊತ್ತಾಗಬೇಕಾದರೆ ಸ್ವಲ್ಪ ಕಹಿಯನ್ನು ನೋಡಿದ್ದರೆ ತಾನೇ ಚೆನ್ನಾಗಿ ಗೊತ್ತಾಗುತ್ತದೆ. ಹೀಗೇಕೆ ಮಾನ್ಯ ಸದಸ್ಯರು ಭಾವಿಸಬಾರದು?

ಹತ್ತು ಕೋಟಿ ರೂಪಾಯಿಗಳ ಅರಿಯರ್ಸ್ ಏನಿದೆ ಅದನ್ನು ವಸೂಲು ಮಾಡದೆ ಇರುವುದಕ್ಕೆ ಕಾರಣ ರಾಷ್ಟ್ರಾಧ್ಯಕ್ಷರ ಆಡಳಿತ ಎನ್ನುವ ಅಭಿಪ್ರಾಯ ಮಾನ್ಯ ಶ್ರೀ ನಾಗಣ್ಣ ಅವರಿಗೆ ಇದ್ದ ಹಾಗಿದೆ. ನಾನು ಅವರಲ್ಲಿ ತಮ್ಮ ಮೂಲಕ ಅರಿಕೆ ಮಾಡಿಕೊಳ್ಳುವುದು, ಅರಿಯರ್ಸ್ ಒಂದು ವರ್ಷದ್ದಲ್ಲ, ವರ್ಷೇ ವರ್ಷೇ ಬರುತ್ತಿದೆ.

ಶ್ರೀ ಟಿ. ಆರ್. ಶಾಮಣ್ಣ.—ಓವರ್‌ಡ್ರಾಫ್ಟ್ 30 ಕೋಟಿ ಇದ್ದದ್ದು 76 ಕೋಟಿ ಆಗಿರುವುದು ಯಾರ ಕಾಲದಲ್ಲಿ?

ಶ್ರೀ ಡಿ. ದೇವರಾಜ ಅರಸ್.—ಓವರ್‌ಡ್ರಾಫ್ಟ್ ಹೆಚ್ಚಾಗಿರುವುದು ಹಣ ಖರ್ಚಾಗಿರುವುದರಿಂದ. ಹಣ ಖರ್ಚಾಗಬೇಕು, ಪ್ರಾಜೆಕ್ಟ್‌ಗಳ ಕೆಲಸಗಳು ಆಗಬೇಕು, ಓವರ್‌ಡ್ರಾಫ್ಟ್ ಇರಬಾರದು, ನಾಲ ತೆಗೆದುಕೊಂಡವರು ಹಿಂದಕ್ಕೆ ಕೊಡಬಾರದು ಎನ್ನುವುದಾದರೆ ಸರ್ಕಾರಕ್ಕೆ ಧುಡ್ಡು ಎಲ್ಲಿಂದ ಬರಬೇಕು? ಭೂ ಕಂದಾಯವನ್ನು ಕೂಡ ಬಿಟ್ಟು ಬಿಡಿ, ರಿಮಿಷನ್ ಕೊಡಿ ಎಂದು ಒಂದು ಕಡೆ ಹೇಳುತ್ತಾರೆ, ಇನ್ನೊಂದು ಕಡೆ ಬಾಕಿ ಇರುವುದನ್ನು ವಸೂಲಾಗದೇ ಇದ್ದಲ್ಲಿ ಎಂದು ಹೇಳುತ್ತಾರೆ. ಸರ್ಕಾರಕ್ಕೆ ಬರಬೇಕಾದ ಹಣವನ್ನು ವಸೂಲು ಮಾಡಲೇಬೇಕು. ಬಾಕಿ ನಿಂತಿರುವುದು ಒಂದೇ ವರ್ಷದ್ದಲ್ಲ.

6-00 P.M.

ಶ್ರೀ ಹೆಚ್. ಡಿ. ದೇವೇಗೌಡ.—ಅರಿಯರ್ಸ್ ಸೇರ್ಸ್ ಟ್ಯಾಕ್ಸ್ ಹಾಗೂ ಇನ್‌ಕಂ ಟ್ಯಾಕ್ಸ್ ಇತ್ಯಾದಿಗಳನ್ನು ವಸೂಲು ಮಾಡಲು ನಮ್ಮ ಅಸ್ತಿಯಿಲ್ಲ. ಇದು ಶ್ರೀಮಂತರಿಂದ ಬರತಕ್ಕದ್ದು ಅವರ ತರೆ ಹೊಡೆದು ಬಾಕಿ ವಸೂಲು ಮಾಡಬಹುದು. ಆದರೆ ಬಡ ರೈತ ಆರು ಆಥವಾ ಎಂಟು ರೂಪಾಯಿಗಳಷ್ಟು ಕಂದಾಯ ಕೊಡುವವರನ್ನು ಬಾಕಿ ಉಳಿಕೆಯಾಗಿರುವುದನ್ನು ಒಟ್ಟಿಗೆ ಕೊಡು ಎಂದರೆ ಅದನ್ನು ವಸೂಲು ಮಾಡಲು ಆಗುವುದಿಲ್ಲ.

ಶ್ರೀ ಡಿ. ದೇವರಾಜ ಅರಸ್.—ರೈತರ ಬಗ್ಗೆ ಏನು ಕಷ್ಟ ಇದೆ ಎನ್ನುವುದು ನನಗೂ ಗೊತ್ತು. ನಾನೂ ಒಬ್ಬ ರೈತ. ನಮಗೂ ಗೊತ್ತಿದೆ. ರೈತರು ನಮಗೇನೂ ಗೊತ್ತಿಲ್ಲ ಎಂದು ತಿಳಿದಿರಬಹುದು. ಮಾನ್ಯ ಸದಸ್ಯರಿಗೆ ಎಷ್ಟು ಗೊತ್ತಿದೆಯೋ ಅದಕ್ಕಿಂತ ಹೆಚ್ಚಾಗಿ ರೈತರ ವಿಚಾರ ನನಗೂ ಗೊತ್ತಿದೆ. ರೈತರ ಹೆಸರಿನಲ್ಲಿ ಬಾಕಿ ಉಳಿಸಿಕೊಳ್ಳುತ್ತಾರೆ. ಇದು ನನಗೂ ಗೊತ್ತು.

Sri H. D. DEVE GOWDA.— No need for bringing any insinuation.

Sri D. DEVARAJ URS.—I am not yielding.

ಆರು ವರ್ಷಗಳಿಂದ ಕಂದಾಯ ಕೊಡುತ್ತಿಲ್ಲ ಎಂದು ಹೇಳುವ ರೈತರಿಗೆ ಇನ್ನೂ ಇಪ್ಪತ್ತು ವರ್ಷ ಮಾಡಿಕ್ಕೊ ಎಂದು ಹೇಳಲು ನಾನು ತಯಾರಿಲ್ಲ, ಅನೇಕರು ಬಾವಿ ಟ್ರಾಕ್ಟರು ಎಂದು ನಾನಾ ಬಾಬುಗಳಿಗಾಗಿ ರೈತರ ಹೆಸರಿನಲ್ಲಿ ಸಾಲವನ್ನು ತೆಗೆದುಕೊಂಡಿರುತ್ತಾರೆ ಮತ್ತು ಇದನ್ನು ಬೇರೆ ರೀತಿಯಲ್ಲಿ ಬಳಸಿಕೊಂಡಿದ್ದಾರೆ. ಇಂತಹವರೇ ಬಾಕಿಯನ್ನು ಕೊಡದೇ ಇರುವವರು ಇದರಲ್ಲಿ ಯಾರು ಕಂದಾಯ ಕೊಡುತ್ತಿಲ್ಲ ಎನ್ನುವುದು ನನಗೂ ಗೊತ್ತಿದೆ, ಸಣ್ಣ ರೈತರು ಕಂದಾಯವನ್ನು ಕೊಡಬೇಕು ಎಂದು ಹೆದರಿಕೊಂಡು ಸರಕಾರಕ್ಕೆ ತಂದುಕೊಡುತ್ತಾರೆ. ಆದರೆ ಇದೇ ಬಡವರ ಹೆಸರಿನಲ್ಲಿ ಊರಿನಲ್ಲಿರುವ ಭಾರಿ ಮನುಷ್ಯರು ಮತ್ತು ಮುಖಂಡರು ನಮ್ಮನ್ನು ಯಾರೂ ಏರ್ಪಾಡಿ ಸಲಾರರು ಎಂದು ಇಂತಹ ಜನ ಬಡ ರೈತರ ಹೆಸರಿನಲ್ಲಿ ಬಾಕಿ ಉಳಿಸಿಕೊಳ್ಳುತ್ತಾರೆ. ಇದು ನನಗೆ ಗೊತ್ತು ಇಂತಹ ಕಂದಾಯ ಉಳಿಸಿಕೊಂಡಿರುವವರೇ ಅಮಲ್ದಾರು, ಶೇಕದಾರ ಹಾಗೂ ಶ್ಯಾನುಭೋಗ ಎಲ್ಲರೂ ತಮ್ಮ ಮಾತು ಕೇಳುತ್ತಾರೆಂದು ಕಂದಾಯ ಕೊಡೋದಿಲ್ಲ. ಆದರೆ ಸಣ್ಣ ರೈತರು ಬೇಗನೆ ಸರಕಾರಕ್ಕೆ ಹೆದರಿ ತನ್ನಲ್ಲಿರುವ ಪಾತ್ರೆಯನ್ನೋ ಇನ್ನಾವುದನ್ನೋ ಒತ್ತೆ ಇಟ್ಟು ಹಣ ತಂದುಕೊಡುತ್ತಾನೆ. ಆದುದರಿಂದ ಇಂತಹ ಬಾಕಿ ವಸೂಲಿಯ ವಿಚಾರದಲ್ಲಿ ನಾನು ತಮ್ಮೆಲ್ಲರ ಸಹಕಾರವನ್ನು ಬೇಡುತ್ತೇನೆ.

ಇನ್ನು ಅಸೆಟ್ಸ್ ಮತ್ತು ಲಯಬಿಲಿಟೀಸ್ ವಿಚಾರವಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರುವುದು ನನಗೆ ಬಹಳ ಸಂತೋಷವಾಯಿತು, ಎಲ್ಲರೂ ಅವರವರ ಅಸೆಟ್ಸ್ ಮತ್ತು ಲಯಬಿಲಿಟೀಸ್‌ಗಳನ್ನು ಸರಕಾರಕ್ಕೆ ಒಪ್ಪಿಸಬೇಕು ಎಂದು ನಾನು ಹೇಳುತ್ತೇನೆ, ಎಲ್ಲ ಕೊಡಬೇಕು ಮತ್ತು ಯಾರು ಕೊಡಬೇಕು ಎಂದು ಹೇಳುವುದಕ್ಕೆ ಬದಲಾಗಿ ನಾನೇ ಮೊದಲಿಗೆ ನನ್ನ ಆಸ್ತಿಗಳ ವಿವರವಾದ ಪಟ್ಟಿಯನ್ನು ನಾಳೆಯೇ ಇಲ್ಲಿ ತಂದು ಸ್ಪೀಕರ್‌ರವರಿಗೆ ಕೊಡುತ್ತೇನೆ, ಇದು ನನ್ನಿಂದಲೇ ಮೊದಲು ಪುರು ಆಗಲಿ. ಅದೇ ರೀತಿ ನನ್ನ ಸಹೋದ್ಯೋಗಿಗಳೆಲ್ಲರೂ ಇಡಬೇಕು ಎಂದು ಹೇಳುತ್ತೇನೆ ಮತ್ತು ಅದನ್ನು ತಾವು ಹಾಗೂ ನಾವು ಎಲ್ಲರೂ ಸ್ಪೀಕರ್‌ರವರ ಕಡೆಗೆ ತಂದು ಇಡೋಣ.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಇವೊತ್ತೇ ಬರೆದು ಕೊಡಲು ತಯ್ಯಾರಿದ್ದೇನೆ,

ಶ್ರೀ ಡಿ. ದೇವರಾಜ ಅರಸ್.—ಇಂತಹ ಪಟ್ಟಿ ಕೊಡುವುದು ಉಚಿತವೋ ಅಲ್ಲವೋ ತಿಳಿಯದು, ಇದರ ಬಗ್ಗೆ ನಾನೇ ಮೊದರಾಗಿ ಇಂತಹ ಪಟ್ಟಿಯನ್ನು ಅಧ್ಯಕ್ಷರಿಗೆ ಕೊಡಲು ಸಿದ್ಧ. ನನ್ನದು ಈಗಲೇ ಸಿದ್ಧವಾಗಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಈಗಲೇ ಬರೆದುಕೊಡುತ್ತೇನೆ.

ಶ್ರೀ ಡಿ. ದೇವರಾಜ ಅರಸ್ —ಬಹಳ ಸಂತೋಷ. ಈವತ್ತೇ ನಮ್ಮ ಇತರ ಸದಸ್ಯರು ಕೊಡುತ್ತಾರೋ ಇಲ್ಲವೋ ಗೊತ್ತಿಲ್ಲ. ನಮ್ಮ ಕಡೆಯಿಂದ ನಾನು ಮೊದರಾಗಿ ಕೊಡಲು ತಯ್ಯಾರಿದ್ದೇನೆ.

ಇನ್ನು ಸಮಾಜವಾದದ ಬುನಾದಿಯನ್ನು ಹಾಕಿದ್ದೇವೆ ಎಂದು ಇಲ್ಲ ಹೇಳಿದರು, ಜನತೆಗೆ ಈಗಾಗಲೇ ಇದು ಚೆನ್ನಾಗಿ ಹಾಗೂ ಸ್ಪಷ್ಟವಾಗಿ ಗೊತ್ತಾಗಿದೆ ಮತ್ತು ದೇಶಕ್ಕೂ ಗೊತ್ತಾಗಿದೆ. ಎಲ್ಲ ಜನರಿಗೂ ಅರ್ಥವಾಗಿದೆ. ಇದಕ್ಕೆ ಲ್ಯಾಂಡ್ ರಿಫಾರಂಸ್ ಕಾನೂನು ಮುಖ್ಯ. ಈ ಭೂಸುಧಾರಣೆಯನ್ನು ಜಾರಿಗೆ ತರಲು ಸಾಮಾಜಿಕ ರಂಗದಲ್ಲಿ ನಮ್ಮ ಕಾಂಗ್ರೆಸ್ ಪಕ್ಷದ ಚುನಾವಣೆಯಕಾಲದಲ್ಲೇ ಬುನಾದಿ ಹಾಕಿದ್ದೇವೆ, ಇದು ತಮಗೂ ಗೊತ್ತಿದೆ, ಸಮಾಜವಾದದ ಕಾರ್ಯಗಳನ್ನು ಜಾರಿಗೆ ತರತಕ್ಕ ಬುನಾದಿಯನ್ನು ಸ್ಥಾಪನೆ ಮಾಡಲು ತಕ್ಕ ಕ್ರಮವಾಗಿ ಭೂಸುಧಾರಣೆಯನ್ನು ಜಾರಿಗೆ ತರಬೇಕೆಂದಿದ್ದೇವೆ. ಇಂತಹ ಬುನಾದಿಯನ್ನು ಜಾರಿಗೆ ತರಲು ದೇಶದಾದ್ಯಂತ ಕಾರ್ಯ ಮಾಡಲು ಆರಂಭಮಾಡುತ್ತಿದ್ದೇವೆ. ಈಗ ಆರ್ಥಿಕ ರಂಗದಲ್ಲಿ ಇಂತಹ ಬುನಾದಿ ಹಾಕಲು ಹೊರಟಿದ್ದೇವೆ, ಇದೇ ರೀತಿಯಾಗಿ ಇಂದು ರಾಜ್ಯದ ರಚನೆಯೂ ಆಗಿರತಕ್ಕದ್ದು ಮತ್ತು ವಿಶೇಷವಾದ ಸವಲತ್ತುಗಳನ್ನು ಇಂತಹ ಬುನಾದಿ ಹಾಕುವುದಕ್ಕೊಸ್ಕರವೇ ಮಾಡಲಾಗುತ್ತಿದೆ ಇದನ್ನು ಚುನಾವಣೆ ಕಾಲದಲ್ಲಿ ಹೇಳಿದ್ದೇವೆ ಅದರಂತೆ ಇಂದು ಬದಲಾವಣೆಯೂ ಆಗುತ್ತಿದೆ. ಇದೂ ತಮಗೆ ಗೊತ್ತಿರುವ ಹಾಗೆ ಸಾಮಾಜಿಕ ರಂಗದಲ್ಲಿ ಆಗಿದೆ. ಇನ್ನು ಆರ್ಥಿಕ ರಂಗದಲ್ಲಿ ಹಾಕಲು ನಾವು ಹೊರಟಿದ್ದೇವೆ ಇದರ ಪ್ರಯತ್ನದಲ್ಲಿ ನಾವು ಹಾಗೂ ನೀವು ಸೇರಿ ಒಂದು ಅಚ್ಚುಕಟ್ಟಾದ ಕಟ್ಟಡವನ್ನು ಕಟ್ಟಲು ಪ್ರಯತ್ನ ಪಡೋಣ, ಇದಕ್ಕೆ ತಮ್ಮ ಸಹಕಾರವಿದೆ ಎಂದು ನನ್ನ ನಂಬಿಕೆ ಮತ್ತು ತಾವೆಲ್ಲರೂ ಸಹಕಾರ

ಮಾಡುತ್ತೇನೆ ಎಂದು ಭಾವಿಸುತ್ತೇನೆ; ಇಷ್ಟು ಹೇಳಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

MADAM SPEAKER: The question is:

"That further sums not exceeding the amounts as shown in respect of Demands Nos. 3,7,8,10,18,20,29,30,31,33,34,39, 40,41,44,45,46,47,48,52 and 54 be granted to the Government to defray the charges which will come in course of payment during the financial year for the period ending 31st March 1972."

The motion was adopted.

MADAM SPEAKER: The question is:

"That the respective sums not exceeding the amounts shown in the list of Demand moved be granted to Government to defray the charges which will come in the course of payment during the period from 1st April 1972 to end of 31st July 1972 in resp ct of Demand Nos. 1 to 18,20 to 27,29,30,30B,31, 31A,32 to 48,50,50A, and 51 to 54.

The motion was adopted.

As directed by the speaker the motions for Demand for grants adopted by the House are reproduced below :—

Motions for Supplementary Demands For Grants For Expenditure During 1971-72, Adopted by the House.

DEMAND NO. 3—(10) STATE EXCISE DUTIES—ADMINISTRATION

1. That a further sum not exceeding Rs. 19,00,000 be granted out of the Consolidated Fund of the State to defray the charges which will come in course of payment during the year ending the 31st day of March 1972 in respect of 'State Excise Duties-Administation'.

DEMAND NO. 7—(14) Stamps.

2. That a further sum not exceeding Rs. 4,45,000 be granted out of the Consolidated Fund of the State to defray the charges which will come in course of payment during the year ending the 31st day of March, 1972, in respect of 'Stamps'.

DEMAND NO. 8—(15) REGISTRATION

3. That a further sum not exceeding Rs. 33,700 be granted out of the Consolidated Fund of the State to defray the charges which will come in course of payment during the year ending 31st day of March, 1972, in respect of 'Registration'.